# ವನ ದೇವತೆ



K
891.481 03
G 646 V

'ಕಲ್ವಿ' ಗೋಪಾಲಕೃಷ್ಣನ್

ಅನುವಾದ

ಎ. ಚಂದ್ರಮ್ಮ

K
891.48103
G646V

# ವನದೇವತೆ

(ವೈಜ್ಞಾನಿಕ ಕಥೆ)


**'ಕಲ್ಕಿ' ಗೋಪಾಲಕೃಷ್ಣನ್**

ಕನ್ನಡ ಅನುವಾದ

**ಎ. ಚಂದ್ರಮ್ಮ**



**ಸಾಹಿತ್ಯ ಅಕಾದೆಮಿ**

**VANADEVATE :** Kannada translation by A. Chandramma of 'Kalvi' Gopalakrishnan's Science fiction Kanaka Kanni in Tamil, Sahitya Akademi, [redacted] Rs. 50 2002

© ಸಾಹಿತ್ಯ ಅಕಾದೆಮಿ

ISBN 81-260-0933-0

Library IIAS, Shimla
K 891.481 03 G 646 V
00117267

ಮೊದಲ ಮುದ್ರಣ ೨೦೦೨

**ಸಾಹಿತ್ಯ ಅಕಾದೆಮಿ**

ರವೀಂದ್ರ ಭವನ, ೩೫, ಫಿರೋಜ್ ಶಾ ರಸ್ತೆ, ನವದೆಹಲಿ - ೧೧೦ ೦೦೧

ಸ್ವಾತಿ, ಮಂದಿರ್ ಮಾರ್ಗ, ನವದೆಹಲಿ - ೧೧೦ ೦೦೧

ಸೆಂಟ್ರಲ್ ಕಾಲೇಜ್ ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - ೫೬೦ ೦೦೧

'ಜೀವನ್ ತಾರಾ,' ೪ನೇ ಅಂತಸ್ತು, ೨೩ಎ / ೪೪ಎಕ್ಸ್, ಡೈಮಂಡ್ ಹಾರ್ಬರ್ ರಸ್ತೆ, ಕಲ್ಕತ್ತಾ - ೭೦೦ ೦೫೩

ಗುಣಾ ಬಿಲ್ಡಿಂಗ್, ೨ನೇ ಅಂತಸ್ತು, ೩೦೪ - ೩೦೫, ಅಣ್ಣಾಸಾಲೈ, ತೇನಾಂಪೇಟ, ಚೆನ್ನೈ - ೬೦೦ ೦೧೮

೧೭೨, ಮುಂಬೈ ಮರಾಠೀ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್, ಮುಂಬೈ - ೪೦೦ ೦೧೪

K
891.481 03
G 646 V

ರೇಖಾ ಚಿತ್ರಗಳು : ಇಕ್ಬಾಲ್

ಬೆಲೆ : ಐವತ್ತು ರೂಪಾಯಿಗಳು

ಅಕ್ಷರ ಜೋಡಣೆ ಮತ್ತು ಮುದ್ರಣ : ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ
ಬೆಂಗಳೂರು - ೫೬೦ ೦೧೮.

Indian Institute of Advanced Study
117267
10.12.04
SHIMLA

೧

ಮರ ಕಡಿಯುವವನು ಕಾಡಿನ ನಟ್ಟನಡುಭಾಗಕ್ಕೆ ಬಂದಿದ್ದ. ಕೊಡಲಿಯನ್ನು ಮೇಲೆತ್ತಿದ. ತನ್ನೆಲ್ಲ ಶಕ್ತಿಯನ್ನು ಬಿಟ್ಟು, ಗುರಿಗೆ ತಾಗುವಂತೆ ಹುಷಾರಾಗಿ, ಕೊಡಲಿಯನ್ನು ಬೀಸಿದ. ದೊಡ್ಡ ಮರವೊಂದರ ಬುಡಕ್ಕೆ ಕೊಡಲಿಯ ಪೆಟ್ಟು ಬಲವಾಗಿ ತಾಗಿತು: "ಥಪ್". ಪೆಟ್ಟಿನ ಜೊತೆಗೇ ನೋವು ತುಂಬಿದ ಗೋಳಿನ ಧ್ವನಿ ಕೇಳಿ ಬಂದಿತು - "ಅಯ್ಯೋ... ಅಮ್ಮಾ!"

ಮರ ಕಡಿಯುವವನು ಬೆಚ್ಚಿದ. ಈ ಗೋಳಾಡುವ ಧ್ವನಿ ಎಲ್ಲಿಂದ ಬಂದಿತು? ಯಾರು ಅಳುತ್ತಿದ್ದಾರೆ? ಗಾಬರಿಯಿಂದ ಸುತ್ತಲೂ ನೋಡಿದ. ಯಾರೂ ಕಾಣಲಿಲ್ಲ. ಆಶ್ಚರ್ಯದಿಂದ ಅವನ ಕಣ್ಣುಗಳು ಅರಳಿದವು. "ನಾನು ಎಷ್ಟು ನೋಡಿದರೂ ನನ್ನ ಕಣ್ಣಿಗೆ ಯಾರೂ ಕಾಣುತ್ತಿಲ್ಲ. ಹಾಗಿದ್ದರೆ ಅಷ್ಟೊಂದು ನೋವಿನಿಂದ ನರಳಿದವರು ಯಾರಿರಬಹುದು?" ಎಂದು ತನಗೆ ತಾನೇ ಹೇಳಿಕೊಂಡ. ಅವನ ಮನಸ್ಸು ಗೊಂದಲಗೊಂಡಿತು. ಮತ್ತೆ ಮೊದಲಿನಂತೆ ಕೊಡಲಿಯನ್ನೆತ್ತಿ ಮರಕ್ಕೆ ಏಟು ಹಾಕಿದ. ಕೊಡಲಿಯು ಮರಕ್ಕೆ ತಾಗಿದ ಕೂಡಲೆ ಮತ್ತೆ ನೋವು ತುಂಬಿದ ಗೋಳಿನ ಧ್ವನಿ ಕೇಳಿತು. "ಅಯ್ಯೋ... ಅಮ್ಮಾ!" ಈ ಬಾರಿ ಧ್ವನಿಯು ಮೊದಲಿಗಿಂತ ಗಟ್ಟಿಯಾಗಿ ಕೇಳಿಸಿತು.

ಮರ ಕಡಿಯುವವನು ಗಾಬರಿಗೊಂಡ. ಹೆದರಿಕೆಯಿಂದ ಅವನ ಮೈ ನಡುಗಿತು. "ಮರದ ಮೇಲೆ ಯಾರಾದರೂ ಇರಬಹುದು" ಅಂದುಕೊಳ್ಳುತ್ತಾ ತಲೆಎತ್ತಿ ನೋಡಿದ. ಹರಡಿಕೊಂಡಿದ್ದ ಒಂದೊಂದು ಕೊಂಬೆಯನ್ನೂ ಎಚ್ಚರಿಕೆಯಿಂದ ನೋಡಿದ. ಅವನಿಗೆ ಯಾರೂ ಕಾಣಲಿಲ್ಲ.

"ಅಕ್ಕಪಕ್ಕದ ಮರಗಳ ಮೇಲೆ ಯಾರಾದರೂ ಇರಬಹುದೋ ಏನೋ" ಅಂದುಕೊಳ್ಳುತ್ತಾ ಸುತ್ತಮುತ್ತಲ ಮರಗಳತ್ತ ಕಣ್ಣಾಗಲಿಸಿ ನೋಡಿದ. ಯಾರೂ ಕಾಣಲೇ ಇಲ್ಲ. ಅವನಿಗೆ ಆಶ್ಚರ್ಯವೋ ಆಶ್ಚರ್ಯ. ಆಗಲೇ ಮಧ್ಯಾಹ್ನವಾಗುತ್ತ ಬಂದಿತ್ತು.

ಮರ ಕಡಿಯುವವನು ಗಡ್ಡ ನೀವಿಕೊಳ್ಳುತ್ತಾ ಯೋಚಿಸತೊಡಗಿದ. ಒಳಗೊಳಗೇ ನಗುತ್ತ ತನಗೆ ತಾನೇ ಹೇಳಿಕೊಂಡ "ಆಹಾ! ನಾನು ಬರೀ ಕನಸು ಕಾಣುತ್ತಿರಬೇಕು!" ಮರುಕ್ಷಣವೇ ಮೀಸೆ ತಿರುವುತ್ತ ಗಟ್ಟಿಯಾಗಿ ನುಡಿದ "ನಾನೇಕೆ ಇಷ್ಟು ಅಳ್ಳೆದೆಯವನಾದೆ? ಯಾಕೆ ಹೀಗೆ ನನಗೆ ನಾನೇ ಮೋಸ ಮಾಡಿಕೊಳ್ಳುತ್ತಿದ್ದೇನೆ? ಈ ವಯಸ್ಸಿನಲ್ಲಿ ನಾನು ಹೀಗೆ ಹಗಲುಗನಸು ಕಾಣಬಹುದೆ?" ಧೈರ್ಯ ಒಟ್ಟುಗೂಡಿಸಿಕೊಂಡು ಮೇಲೇಳುತ್ತ ತನಗೇ ಗಟ್ಟಿಯಾಗಿ ಹೇಳಿಕೊಂಡ : "ಅಯ್ಯಾ! ಹತ್ತು ಮಕ್ಕಳ ತಂದೆಯೇ! ನಿನ್ನ ಜವಾಬ್ದಾರಿಯನ್ನು ನೀನು ಹೀಗೆ ಮರೆಯಬಹುದೆ? ಹೀಗೆ ಕನಸು ಕಾಣುತ್ತ ಕುಳಿತರ ನಿನ್ನ ಕುಟುಂಬದ ಗತಿ ಏನು ಎಂದು ಯೋಚಿಸಿದ್ದೀಯಾ? ಹತ್ತು ಹೊಟ್ಟೆಗಳು ಹಸಿದು ಅಳುತ್ತಿರುತ್ತವೆ. ಅಳುವಿನ ಸದ್ದಿಗೆ ಮನೆಯ ಮಾಡು ಹಾರಿ ಹೋಗುತ್ತದೆ. ಸುಮ್ಮನೆ ನಿನ್ನ ಕೆಲಸ ನೀನು ಮಾಡು. ಅರ್ಧ ಹೊಟ್ಟೆ ತುಂಬಬೇಕಾದರೂ ಕಷ್ಟಪಟ್ಟು ದುಡಿಯಬೇಕು."

ಮರ ಕಡಿಯುವವನು ಗಟ್ಟಿ ಮನಸ್ಸು ಮಾಡಿ ಮರ ಕಡಿಯಲು ಸಿದ್ಧನಾದ. ಮರದ ಬೊಡ್ಡೆಗೆ ಬುಡಕ್ಕೆ ತನ್ನ ಶಕ್ತಿಯನ್ನೆಲ್ಲ ಬಿಟ್ಟು ಜೋರಾಗಿ ಏಟು ಹಾಕಿದ. ಓ! ಮೊದಲಿಗಿಂತ ಜೋರಾಗಿ ನೋವಿನ ಧ್ವನಿ ಕೇಳಿಸಿತು "ಅಯ್ಯೋ...! ಅಯ್ಯಯ್...ಯ್ಯೋ!"

ಮರ ಕಡಿಯುವವನು ಹೆದರಿ ಮಾತಿಲ್ಲದೆ ನಿಂತುಬಿಟ್ಟ. ಅವನ ಮುಖದ ಮೇಲೆ ಬೆವರ ಹನಿಗಳು ಇಳಿಯತೊಡಗಿದವು. ಕೊಡಲಿಯು ಅವನ ಕೈಯಿಂದ ಜಾರಿ ಕೆಳಗೆ ಬಿತ್ತು. ಎಂದೂ ಅವನಿಗೆ ಅಷ್ಟು ಭಯ ಆಗಿರಲಿಲ್ಲ. ತಟ್ಟನೆ ಕಾಲಿಗೆ ಬುದ್ಧಿ ಹೇಳಿ ವೇಗವಾಗಿ ಓಡತೊಡಗಿದ. ಅದೇ ವೇಳೆಗೆ ಗಾಳಿಯನ್ನು ಸೀಳಿಕೊಂಡು ಗಟ್ಟಿಯಾಗಿ ನಗುವ ಸದ್ದು ಕೇಳಿಸಿತು. ಆ ನಗೆಯ ಪ್ರತಿಧ್ವನಿ ಇಡೀ ಕಾಡನ್ನು ತುಂಬಿತು. ಕಟ್ಟಿಗೆ ಒಡೆಯುವವನು ದಿಗ್ಭ್ರಾಂತನಾಗಿ, ಬೇರು ಬಿಟ್ಟವನಂತೆ ನಿಂತಲ್ಲೆ ನಿಂತುಬಿಟ್ಟ. ಅವನ ಕಾಲುಗಳು ಮುಂದೆ ಚಲಿಸಲು ನಿರಾಕರಿಸಿದವು. ಓಡುವ ಮಾತಂತೂ ದೂರವೇ ಉಳಿಯಿತು.

"ಅಯ್ಯಾ ಧೈರ್ಯಶಾಲಿ ಕೊಲೆಗಾರ! ಇದೇನು ಹೇಡಿಯಂತೆ ಓಡುತ್ತಿರುವೆ? ಹೆದರಿಕೆಯೇ? ಅಂಜಬೇಡ. ನನ್ನ ವಂಶದವರು ಎಂದೂ ಇನ್ನೊಬ್ಬರ ಜೀವ ತೆಗೆಯುವುದಿಲ್ಲ. ಇತರರು ಬದುಕಿ ಉಳಿಯಲೆಂದೇ ನಾವು ಜೀವಿಸಿದ್ದೇವೆ. ನನ್ನಿಂದ ನಿನಗೆ ಯಾವ ಅಪಾಯವೂ ಇಲ್ಲ. ಹೆದರಬೇಡ."

ಮರಕಡಿಯುವವನು ದಿಗ್ಭ್ರಾಂತನಾಗಿದ್ದ. ಮೌನವಾಗಿ ನಿಂತು ಆಲಿಸಿದ. ಸಮಾಧಾನದ ನಿಟ್ಟುಸಿರಿಟ್ಟು ತನಗೇನೂ ಅಪಾಯವಿಲ್ಲವೆಂದು ತಿಳಿದು ಅವನ ಭಯ ದೂರವಾಯಿತು. ನಿಧಾನವಾಗಿ ಸುಧಾರಿಸಿಕೊಂಡು ಹೀಗೆ ಮಾತನಾಡಿದವರು ಯಾರೆಂದು ತಿಳಿಯಲು ಸುತ್ತಲೂ ನೋಡಿದ. ಆದರೆ ಯಾರೂ ಅವನ ಕಣ್ಣಿಗೆ ಬೀಳಲಿಲ್ಲ.

"ಯಾರು ನೀನು? ಎಲ್ಲಿಂದ ಮಾತನಾಡುತ್ತಿರುವೆ?" ಎಂದು ಕೇಳಿದ. ಅವನ ಒಣಗಿದ ಗಂಟಲಿನಿಂದ ಮಾತುಗಳು ತಡೆತಡೆದು ಬಂದವು.

# ೨

"ನಾನು ಯಾರೆಂದು ತಿಳಿಯಬೇಕೆ? ಒಳ್ಳೆಯದು. ನಾನು ಕಾಡಿನ ದೇವತೆ. ವನದೇವತೆ. ನನ್ನನ್ನು ಕಾಡಿನ ಅಪ್ಸರೆ ಎಂದೂ ಕರೆಯುತ್ತಾರೆ. ಇಡೀ ಕಾಡನ್ನು ನಾನು ರಕ್ಷಿಸುತ್ತೇನೆ" ಎಂದು ಇಂಪಾದ ಧ್ವನಿಯೊಂದು ಮರ ಕಡಿಯುವವನ ಪ್ರಶ್ನೆಗೆ ಉತ್ತರಿಸಿತು.

"ಓ ವನದೇವತೆ! ಕಾಡಿನ ಪವಿತ್ರ ದೇವಿ!" ಮರ ಕಡಿಯುವವನು ಆನಂದದಿಂದ ಕೂಗಿದ. ಅವನ ಧ್ವನಿಯಲ್ಲಿ ಸಂಭ್ರಮದ ಕಂಪನವಿತ್ತು.

"ನಿನಗೆ ನನ್ನ ಅನಂತ ಪ್ರಣಾಮಗಳು" ಮರ ಕಡಿಯುವವನು ಎದ್ದು ನಿಂತು ಭಕ್ತಿಪೂರ್ವಕವಾಗಿ ಹೇಳಿದ, "ದಯವಿಟ್ಟು ನಿನ್ನ ದರ್ಶನವನ್ನು ನೀಡು."

ಮರ ಕಡಿಯುವವನು ಹಾಗೆನ್ನುತ್ತಿದ್ದಂತೇ ಪ್ರಕಾಶಮಾನವಾದ ಹಸಿರು ಬೆಳಕಿನ ಪ್ರಭೆಯೊಂದು ಅವನ ಮುಂದೆ ಪ್ರತ್ಯಕ್ಷವಾಯಿತು. ಆ ಪ್ರಭೆಯಲ್ಲಿ ಸುಂದರಕನ್ಯೆಯೊಬ್ಬಳು ನಿಂತಿದ್ದಳು. ಅವನು ಅಚ್ಚರಿಯಿಂದ ನೋಡುತ್ತಿದ್ದಂತೆ ಆ ಉಜ್ವಲ ಕಾಂತಿ ಎಲ್ಲೆಡೆಗಳಲ್ಲೂ ಹರಡಿತು. ಈ ದೈವಿಕ, ಅದ್ಭುತ ದೃಶ್ಯವನ್ನು ನೋಡುತ್ತ ಮರ ಕಡಿಯುವವನು ಕೆಲವು ಕ್ಷಣ ಹಾಗೇ ನಿಂತುಬಿಟ್ಟ.

ಆನಂತರ ಅವನು ಭಕ್ತಿತುಂಬಿದ ಧ್ವನಿಯಲ್ಲಿ ನುಡಿದ - "ನನ್ನ ಮೇಲೆ ಕರುಣೆ ತೋರಿ ಈ ವೈಭವದ ದರ್ಶನ ನೀಡಿದ್ದಕ್ಕೆ ಅನಂತ ವಂದನೆಗಳು. ಈ ದೃಶ್ಯವನ್ನು ನೋಡಲು ಸಾವಿರ ಕಣ್ಣುಗಳಿದ್ದರೂ ಸಾಲದು. ನಾನು ಧನ್ಯನಾದೆ. ಆದರೆ...," ಮರ ಕಡಿಯುವವನ ಧ್ವನಿ ಇದ್ದಕ್ಕಿದ್ದಂತೆ ದುಃಖದಿಂದ ಕಟ್ಟಿಹೋಯಿತು, "ಆದರೆ ನೀನೇಕೆ ನನ್ನನ್ನು ಕೊಲೆಗಡುಕ ಎಂದು ಕರೆದೆ? ನನ್ನ ಜೀವನದಲ್ಲಿ ನಾನೆಂದೂ ಯಾರನ್ನೂ ಕೊಲ್ಲುವ ಯೋಚನೆಯನ್ನೂ ಮಾಡಿಲ್ಲ. ಹಾಗಿದ್ದರೂ ಇಂಥ ಸುಳ್ಳು ಆರೋಪವೇಕೆ?" ಎಂದು ಕೇಳಿದ.

"ನೀನು ಯಾರನ್ನೂ ಕೊಂದೇ ಇಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆಯಾ? ಪ್ರತಿದಿನವೂ ನೀನು ನನ್ನ ಮಕ್ಕಳನ್ನು ತಪ್ಪದೆ ಸಾಯಿಸುತ್ತಲೇ ಇದ್ದೀಯೆ. ಅದನ್ನು ನಾನು ಕೊಲೆ ಎಂದೇ ಕರೆಯುತ್ತೇನೆ," ಎಂದು ವನದೇವತೆ ಹೇಳಿದಳು.

"ಯಾರು? ನಿನ್ನ ಮಕ್ಕಳನ್ನೆ? ನಿನ್ನ ಮಕ್ಕಳು ಯಾರು? ನಾನು ಅವರನ್ನೆಂದೂ ನೋಡಿಯೂ ಇಲ್ಲ. ದಯವಿಟ್ಟು ನಿನ್ನ ಮಾತಿನ ಅರ್ಥವೇನು ಹೇಳು," ಎಂದು ಗೊಂದಲಗೊಂಡ ಮರ ಕಡಿಯುವವನು ತೊದಲುತ್ತ ನುಡಿದ.

"ನಿನ್ನ ಸುತ್ತಲೂ ಕಾಣುವ ಗಿಡಮರಗಳೆಲ್ಲ ನನ್ನ ಮಕ್ಕಳು. ನಿಜ ಹೇಳಬೇಕೆಂದರೆ ಸಸ್ಯಲೋಕದ ತಾಯಿ ನಾನು. ನೀನು ನಿನ್ನ ಹೊಟ್ಟೆಪಾಡಿಗೆಂದು ಎಳೆಯ ಹಸಿರು ಗಿಡಗಳನ್ನು, ಬೆಳೆಯುತ್ತಿರುವ ಮರಗಳನ್ನು ಅದೆಷ್ಟೋ ವರ್ಷಗಳಿಂದ ಕಡಿದು ಉರುಳಿಸುತ್ತಲೇ ಬಂದಿದ್ದೀಯೆ. ಈಗ ಹೇಳು, ನಿನ್ನನ್ನು ಕೊಲೆಗಡುಕ ಎಂದು ಕರೆದದ್ದು ತಪ್ಪು ಎನ್ನುವೆಯಾ?" ಎಂದು ವನದೇವತೆ ಕೇಳಿದಳು. ಮರ ಕಡಿಯುವವನು ಬೆಚ್ಚಿಬಿದ್ದ.

"ಏನು ಮರಕಡಿಯುವುದನ್ನು ಕೊಲೆ ಎಂದು ಕರೆಯುವೆಯಾ? ಮರಗಳಿಗೂ ಜೀವವಿದೆ ಎಂದು ನಿನ್ನ ಮಾತಿನ ಅರ್ಥವೇ?" ಎಂದು ಆತ ಆಶ್ಚರ್ಯದಿಂದ ಕೇಳಿದ.



"ಗಿಡಗಳಿಗೆ ಜೀವವಿಲ್ಲ ಎಂದು ನಿನಗೆ ಯಾರು ಹೇಳಿದರು? ಬದುಕಿರುವ ಇತರ ಜೀವಿಗಳಂತೆ ಗಿಡಗಳೂ ಉಸಿರಾಡುತ್ತವೆ, ಆಹಾರ ಸೇವಿಸುತ್ತವೆ, ಬೆಳೆಯುತ್ತವೆ. ಗಿಡಗಳೂ ತಮ್ಮ ವಂಶವನ್ನು ಬೆಳೆಸುತ್ತವೆ. ಆದರೆ ಇತರ ಜೀವಿಗಳಂತೆ ಓಡಾಡಲಾರವು ಅಷ್ಟೆ. ಉಸಿರಾಡುವ, ಆಹಾರವನ್ನು ಬಯಸುವ, ವಂಶವನ್ನು ಬೆಳೆಸುವ ಗಿಡಗಳು ಚಲಿಸದೆ ಬೇರುಬಿಟ್ಟು ನಿಂತಿರುತ್ತವೆ ಎಂಬ ಒಂದೇ ಕಾರಣಕ್ಕೆ ಜೀವವಿಲ್ಲದವು ಎಂದು ತಿಳಿದೆಯಾ?" ಎಂದು ವನದೇವತೆ ಕೇಳಿದಳು. ಮರ ಕಡಿಯುವವನು ತನ್ನ ಅಜ್ಞಾನವನ್ನು ಒಪ್ಪಿಕೊಂಡ.

"ಗಿಡಗಳಿಗೆ ಜೀವವಿರುತ್ತದೆಂದು ನನಗೆ ಯಾರೂ ಹೇಳಿಯೇ ಇಲ್ಲ."

"ಈಗ ನಾನು ಹೇಳುತ್ತಿದ್ದೇನೆ. ಒಂದು ರೀತಿಯಲ್ಲಿ ಸಸ್ಯವು ಇತರ ಜೀವಿಗಳಿಗಿಂತ ಶ್ರೇಷ್ಠವಾದದ್ದು."

"ನಿಜವಾಗಲೂ? ಸಸ್ಯವು ಅದು ಹೇಗೆ ಶ್ರೇಷ್ಠ?" ಮರ ಕಡಿಯುವವನು ಆಶ್ಚರ್ಯದಿಂದ ಕೇಳಿದ. ಅವನ ಕುತೂಹಲ ಕೆರಳುತ್ತಿತ್ತು.

"ಇತರ ಜೀವಿಗಳು ತಮಗೆ ಬೇಕಾದ ಆಹಾರವನ್ನು ತಾವೇ ತಯಾರಿಸಿಕೊಳ್ಳಲಾರವು. ತಮಗೆ ಬೇಕಾದ ಆಹಾರಕ್ಕೆ ಸಸ್ಯಗಳನ್ನೇ ಅವಲಂಬಿಸಬೇಕು. ಆದರೆ ಸಸ್ಯಗಳಿಗೆ ತಮ್ಮ ಆಹಾರವನ್ನು ತಾವೇ ತಯಾರು ಮಾಡಿಕೊಳ್ಳುವ ಶಕ್ತಿ ಸಾಮರ್ಥ್ಯವಿದೆ."

"ಹೌದೆ?" ಮರ ಕಡಿಯುವವನು ಬೆರಗಿನಿಂದ ಕೇಳಿದ.

"ಹೌದು. ಇನ್ನೂ ಕೇಳಿಸಿಕೋ. ಸಸ್ಯಗಳು ಕೇವಲ ತಮಗೆ ಸಾಲುವಷ್ಟು ಆಹಾರವನ್ನು ಮಾತ್ರ ತಯಾರಿಸುವುದಿಲ್ಲ. ತಮಗೆ ಆಗಿ ಇನ್ನೂ ಉಳಿಯುವಷ್ಟು ಆಹಾರವನ್ನು ತಯಾರಿಸುತ್ತವೆ. ಆದ್ದರಿಂದಲೇ ಬೇರೆಲ್ಲ ಜೀವಿಗಳೂ ಸಸ್ಯಗಳ ಕರುಣೆಯ ದಾನದಿಂದಲೇ ಬದುಕುತ್ತವೆ. ನಿಸರ್ಗದಲ್ಲಿರುವ ಹಸಿರೆಲ್ಲ ನಾಶವಾದರೆ ಉಳಿದೆಲ್ಲಾ ಜೀವಿಗಳು ಹಸಿವಿನಿಂದ ಪ್ರಾಣಬಿಡಬೇಕಾಗುತ್ತದೆ" ಎಂದು ವನದೇವತೆ ವಿವರಿಸಿದಳು.

"ಇದು ನನಗೆಂದೂ ಹೊಳೆದೇ ಇರಲಿಲ್ಲ!" ಎಂದು ಮರ ಕಡಿಯುವವನು ಆಶ್ಚರ್ಯಪಟ್ಟ. ಅವನು ಸ್ವಲ್ಪ ಹೊತ್ತು ಮೌನವಾಗಿ ಯೋಚಿಸಿದ. ಅವನ ಮುಖದ ಮೇಲೆ ಸಂಶಯ ಮೂಡಿತು. "ನನಗೊಂದು ಅನುಮಾನವಿದೆ, ಕೇಳಲೇ?" ಎಂದ.

"ಧಾರಾಳವಾಗಿ ಕೇಳು" ಎಂದಳು ವನದೇವಿ.

"ನಾನು ತಿನ್ನುವ ಅಕ್ಕಿ, ಬೇಳೆ, ತರಕಾರಿ, ಇಂಥವೆಲ್ಲ ಸಸ್ಯಗಳಿಂದಲೇ ಬರುತ್ತದೆ ಎಂಬುದೇನೋ ನಿಜ. ಆದರೆ ನನ್ನ ಮಕ್ಕಳು ಕುಡಿಯುವ ಹಾಲು? ಅದಕ್ಕೂ ಸಸ್ಯಕ್ಕೂ ಎಂಥ ಸಂಬಂಧ?" ಎಂದು ಕೇಳಿದ.

"ನಿಜ. ಹಾಲು, ಮೊಸರು, ಬೆಣ್ಣೆ, ತುಪ್ಪ, ಗಿಣ್ಣ ಇವೆಲ್ಲ ಸಸ್ಯಗಳಿಂದ ದೊರೆಯುವುದಿಲ್ಲ. ಆದರೆ ಹಾಲು ಕೊಡುವ ಹಸು, ಎಮ್ಮೆಗಳ ಬಗ್ಗೆ ಯೋಚಿಸು. ಅವು ಹೇಗೆ ಬದುಕುತ್ತವೆ? ಅವುಗಳಿಗೆ ಆಹಾರ ಸಸ್ಯಗಳಿಂದಲೇ ದೊರೆಯಬೇಕಲ್ಲವೆ? ಅವುಗಳ ದೇಹದೊಳಗೆ ಸಸ್ಯದಿಂದ ದೊರೆತ ಆಹಾರ ಹಾಲು ಆಗಿ ಮಾರ್ಪಾಡು ಹೊಂದುವುದಿಲ್ಲವೇ" ಎಂದು ವನದೇವಿ ಕೇಳಿದಳು. ಮರ ಕಡಿಯುವವನು ಅದಕ್ಕೆ ಒಪ್ಪಿಗೆ ಸೂಚಿಸುವವನಂತೆ ಗೋಣುಹಾಕಿದ.

"ಹಾಗಿದ್ದರೆ, ಹಾಲಿನ ಉತ್ಪಾದನೆಯಲ್ಲಿ, ನೇರವಾಗಿ ಅಲ್ಲದಿದ್ದರೂ, ಸಸ್ಯಗಳು ಮುಖ್ಯವೆಂದು ಒಪ್ಪುತ್ತೀಯಾ?" ಮರ ಕಡಿಯುವವನು ಮತ್ತೆ ಗೋಣುಹಾಕಿದ.



"ಈಗ ನೀನು ಕೇಳದೆ ಇರುವ ಇನ್ನೊಂದು ಪ್ರಶ್ನೆಗೂ ಉತ್ತರ ಹೇಳುತ್ತೇನೆ. ಏಕೆಂದರೆ ನೀನು ಆ ಪ್ರಶ್ನೆಯನ್ನು ಈಗಲೋ ಮತ್ತೆಯೋ ಕೇಳುವವನೇ" ಎಂದಳು ವನದೇವತೆ.

ಮರ ಕಡಿಯುವವನು ಅದೇನು ಎಂಬಂತೆ ಅವಳತ್ತ ನೋಡಿದ. ವನದೇವಿಯು ಮುಗುಳ್ನಕ್ಕು ನುಡಿದಳು, "ಹಸು, ಎತ್ತು ಮುಂತಾದ ಪ್ರಾಣಿಗಳು ತಮ್ಮ ಆಹಾರಕ್ಕೆ ಸಸ್ಯಗಳನ್ನೇ ಆಶ್ರಯಿಸಿರುತ್ತವೆ.. ಅವು ಸಸ್ಯಾಹಾರಿಗಳು. ಸಿಂಹ, ಹುಲಿ ಮುಂತಾದ ಮಾಂಸಾಹಾರಿ ಪ್ರಾಣಿಗಳು ಇತರ ಪ್ರಾಣಿಗಳನ್ನು ಕೊಂದು ತಿನ್ನುತ್ತವೆ. ಮಾಂಸವೇ ಅವುಗಳ ಆಹಾರ. ಆದರೆ ಈ ಮಾಂಸಾಹಾರಿ ಪ್ರಾಣಿಗಳೂ ಸಸ್ಯಗಳನ್ನೇ ಆಶ್ರಯಿಸಿವೆ. ಏಕೆ ಗೊತ್ತೆ? ಅವು ಬದುಕಿ ಉಳಿಯಲು ಜಿಂಕೆಯಂಥ ಇತರ ಸಸ್ಯಾಹಾರಿ ಪ್ರಾಣಿಗಳು ಇರಬೇಕು. ಸಸ್ಯಗಳೇ ಇರದಿದ್ದರೆ ಸಸ್ಯಾಹಾರಿ ಪ್ರಾಣಿಗಳೂ ಇರುವುದಿಲ್ಲ. ಆಗ ಸಸ್ಯಾಹಾರಿ ಪ್ರಾಣಿಗಳನ್ನು ಬೇಟೆಯಾಡಿ ಆಹಾರ ದೊರಕಿಸಿಕೊಳ್ಳುವ ಮಾಂಸಾಹಾರಿ ಪ್ರಾಣಿಗಳು ಉಪವಾಸದಿಂದ ಸತ್ತುಹೋಗಬೇಕಾಗುತ್ತದೆ! ಅದಕ್ಕೆಂದೇ ಸಸ್ಯಗಳೇ ಎಲ್ಲ ಜೀವಿಗಳ ಮೂಲ ಆಹಾರವೆಂದು ನಾನು ಹೇಳಿದ್ದು" ಮರ ಕಡಿಯುವವನು ಒಪ್ಪಿ ತಲೆದೂಗಿದ.

"ನಿಜವಾಗಲೂ ಅದ್ಭುತವಾಗಿದೆ," ಮರ ಕಡಿಯುವವನು ಉದ್ಗರಿಸಿದ, "ನೀನು ಹೇಳಿದ್ದನ್ನು ಪೂರ್ಣವಾಗಿ ಒಪ್ಪುತ್ತೇನೆ. ಎಲ್ಲ ಜೀವಿಗಳೂ ಸಸ್ಯಗಳನ್ನು ಆಧರಿಸಿಯೇ ಬದುಕಿವೆ."

"ಆದರೆ ಸಸ್ಯಗಳು ಕೇವಲ ಆಹಾರವನ್ನಷ್ಟೆ ಕೊಡುವುದಿಲ್ಲ; ಇತರ ಜೀವಿಗಳಿಗೆ ಅವು ಇನ್ನೂ ಮುಖ್ಯವಾದ ಸೇವೆಯನ್ನೂ ಸಲ್ಲಿಸುತ್ತಿವೆ." ವನದೇವಿಯು ಒಗಟಾಗಿ ಮಾತನಾಡುತ್ತಿದ್ದಳು. ಅವಳು ತನ್ನ ಮಾತನ್ನು ಮುಂದುವರೆಸಲಿ ಎಂದು ಮರ ಕಡಿಯುವವನೂ ಕಾಯುತ್ತಿದ್ದ. "ಎಲ್ಲ ಜೀವಿಗಳಿಗೂ ಬದುಕಿ ಉಳಿಯಲು ಆಮ್ಲಜನಕ ಅಗತ್ಯವಾಗಿ ಬೇಕು. ಆ ಆಮ್ಲಜನಕವನ್ನು ಒದಗಿಸುವ ಸಾಮರ್ಥ್ಯ ಸಸ್ಯಗಳಿಗೆ ಮಾತ್ರ ಇದೆ" ಎಂದಳು ವನದೇವತೆ.

"ಏನು ಹೇಳಿದೆ ನೀನು? ನನಗೆ ಪೂರ್ತಿ ತಿಳಿಯಲಿಲ್ಲ. ದಯವಿಟ್ಟು ವಿವರಿಸು" ಎಂದು ಮರ ಕಡಿಯುವವನು ಕೇಳಿದ.

"ಗಿಡಗಳು ಎಷ್ಟು ಅಮೂಲ್ಯ ಎಂದು ತಿಳಿಯುವ ಕುತೂಹಲವಿದ್ದರೆ ಕೇಳು" ಎಂದು ವನದೇವತೆ ತನ್ನ ಮಾತನ್ನು ಮುಂದುವರೆಸಿದಳು.

"ಸೃಷ್ಟಿಯ ಆರಂಭದಲ್ಲಿ ಈ ಭೂಮಿಯ ಮೇಲೆ ಗಿಡಗಳಾಗಲೀ ಪ್ರಾಣಿಗಳಾಗಲೀ ಇರಲಿಲ್ಲ. ನಿಧಾನವಾಗಿ ಸಸ್ಯಗಳು ಕಾಣಿಸಿಕೊಂಡವು. ಬಹು ದೀರ್ಘಕಾಲದವರೆಗೆ ಸಸ್ಯಗಳನ್ನು ಬಿಟ್ಟರೆ ಇನ್ನಾವ ಜೀವಿಯೂ ಇರಲೇ ಇಲ್ಲ. ಏಕೆಂದರೆ ಭೂಮಿಯ ವಾತಾವರಣದಲ್ಲಿ ಆಮ್ಲಜನಕ ಇರಲಿಲ್ಲ. ಇದ್ದ ಆಮ್ಲಜನಕವು ನೀರು, ಕಲ್ಲು ಮುಂತಾದ ಇತರ ದ್ರವ್ಯಗಳೊಳಗೆ ಅಡಗಿತ್ತು. ಹೀಗೆ ಅಡಗಿದ್ದ ಆಮ್ಲಜನಕ ವನ್ನು ಸಸ್ಯಗಳು ಇತರ ದ್ರವ್ಯಗಳಿಂದ ಬೇರ್ಪಡಿಸಿ ಭೂಮಿಯ ವಾತಾವರಣಕ್ಕೆ ಬಿಡುಗಡೆ ಮಾಡಿದವು. ಹೀಗಾಗಿ ಭೂಮಿಯ ಸುತ್ತಲಿನ ಗಾಳಿಯಲ್ಲಿದ್ದ ಸಸಾರಜನಕ, ಜಲಜನಕ ಮತ್ತು ಇಂಗಾಲದ ಡೈಆಕ್ಸೈಡ್ ಗಳೊಂದಿಗೆ ಆಮ್ಲಜನಕವು ಸೇರತೊಡಗಿತು. ನಿಧಾನ ನಿಧಾನವಾಗಿ ಗಾಳಿಯಲ್ಲಿನ ಆಮ್ಲಜನಕದ ಪ್ರಮಾಣವು ಏರತೊಡಗಿತು. ಆಗ ಆಮ್ಲಜನಕವನ್ನು ಉಸಿರಾಡುವ ಏಕಾಣುಜೀವಿಗಳು ಭೂಮಿಯ ಮೇಲೆ ಕಾಣಿಸಿಕೊಳ್ಳ ತೊಡಗಿದವು. ಗಾಳಿಯಲ್ಲಿ ಆಮ್ಲಜನಕದ ಪ್ರಮಾಣ ಏರುತ್ತ ಹೋದಂತೆ ಉಳಿದ ಅನೇಕ ಕೋಶ ಜೀವಿಗಳು ರೂಪಗೊಳ್ಳತೊಡಗಿದವು. ಕಾಲ ಸರಿದಂತೆ ಇವು ಪ್ರಾಣಿ ಪ್ರಪಂಚದ ಬೇರೆ ಬೇರೆ ಜೀವಿಗಳಾಗಿ ವಿಕಾಸ ಹೊಂದಿದವು."



"ಆಹಾ!" ಮರ ಕಡಿಯುವವನು ಆಶ್ಚರ್ಯ ಮತ್ತು ಭಯಚಕಿತನಾಗಿ ನುಡಿದ, "ಅನಾದಿಕಾಲದಿಂದ ಗಿಡಮರಗಳು ಎಷ್ಟೊಂದು ಉಪಕಾರ ಮಾಡುತ್ತ ಬಂದಿವೆ. ಆದರೆ ಇಷ್ಟು ದಿನ ನನಗೆ ಇದರ ಬಗ್ಗೆ ಏನೂ ತಿಳಿದಿರಲೇ ಇಲ್ಲವಲ್ಲ! ನಮಗೆ ತಿನ್ನಲು ಆಹಾರ, ಉಸಿರಾಡಲು ಗಾಳಿ ಇವನ್ನೆಲ್ಲ ಒದಗಿಸುವ ಸಸ್ಯಗಳಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು!"

"ತಾಳು, ತಾಳು" ಎಂದು ವನದೇವತೆಯು ಅವನ ಮಾತನ್ನು ಅರ್ಧದಲ್ಲೆ ತಡೆದಳು, "ನೀನು ಈಗಲೇ ಗಿಡಮರಗಳಿಗೆ ಕೃತಜ್ಞತೆ ಸೂಚಿಸಿ ಕತೆಗೆ ಮುಕ್ತಾಯ ಹಾಡುತ್ತಿರುವೆ. ಸಸ್ಯಗಳ ಔದಾರ್ಯ ಕರುಣೆಗಳ ಬಗ್ಗೆ ಹೇಳಬೇಕಾದದ್ದು ಇನ್ನೂ ಇದೆ."

"ನನ್ನ ಮೈಯೆಲ್ಲ ಕಿವಿಯಾಗಿ ಕೇಳುತ್ತಿರುವೆ," ಉತ್ಸಾಹಿತನಾಗಿ ಮರ ಕಡಿಯುವವನು ನುಡಿದ, "ಅದ್ಭುತವಾದ ಸಸ್ಯಲೋಕದ ಬಗ್ಗೆ ದಯವಿಟ್ಟು ಇನ್ನೂ ಹೇಳು."

"ಈ ಭೂಮಿಯ ಮೇಲೆ ವಾಸಿಸುವ ಎಲ್ಲ ಜೀವಿಗಳೂ ಆಮ್ಲಜನಕದಿಂದ ಉಸಿರಾಡುತ್ತವೆ. ಈ ಸಂಗತಿಯನ್ನು ಈಗ ತಾನೇ ನಿನಗೆ ತಿಳಿಸಿದೆ. ಜೀವಿಗಳು ಸೇವಿಸಿದ ಆಹಾರವು ಜೀರ್ಣವಾಗಲು ಈ ಆಮ್ಲಜನಕವನ್ನು ದೇಹ ವ್ಯವಸ್ಥೆಯು ಬಳಸಿಕೊಳ್ಳುತ್ತದೆ. ಜೀರ್ಣವಾಗುವ ಕ್ರಿಯೆಯಲ್ಲಿ ಇಂಗಾಲದ ಡೈಆಕ್ಸೈಡ್ ಉತ್ಪತ್ತಿಯಾಗುತ್ತದೆ. ಅದು ನಿರುಪಯುಕ್ತ ವಸ್ತು. ದೇಹಕ್ಕೆ ಬೇಡವಾದ ಇಂಗಾಲದ ಡೈಆಕ್ಸೈಡನ್ನು ಜೀವಿಗಳು ಉಸಿರಿನೊಂದಿಗೆ ಹೊರಹಾಕುತ್ತವೆ. ಇದನ್ನು ನಿಶ್ವಾಸ ಎನ್ನುತ್ತಾರೆ. ಸ್ವಲ್ಪ ಊಹೆ ಮಾಡು. ಎಲ್ಲ ಜೀವಿಗಳೂ ಆಮ್ಲಜನಕವನ್ನು ಉಸಿರಿನೊಂದಿಗೆ ಒಳಗೆಳೆದುಕೊಂಡು ನಿಶ್ವಾಸದಲ್ಲಿ ಇಂಗಾಲದ ಡೈಆಕ್ಸೈಡ್‌ನ್ನು ಹೊರಬಿಡುತ್ತಿದ್ದರೆ ಗಾಳಿಯ ತುಂಬ ಅದೇ ತುಂಬಿಕೊಂಡು, ಆಮ್ಲಜನಕ ಕಡಿಮೆಯಾಗಿ, ಬದುಕುವುದೇ ಕಷ್ಟವಾಗಿಬಿಡುತ್ತಿತ್ತು." ಇದನ್ನು ಕೇಳಿದ ಮರ ಕಡಿಯುವವನು ದುಃಖದ ಬೊಂಬೆಯಂತಾದ. ವನದೇವತೆಯು ಕೂಡಲೆ ಹೇಳಿದಳು, "ಚಿಂತಿಸಬೇಡ. ಏಕೆಂದರೆ ಇಂಥ ಪರಿಸ್ಥಿತಿ ಉಂಟಾಗದಂತೆ ನೋಡಿಕೊಳ್ಳಲು ಸಸ್ಯಗಳಿವೆ."

"ಅದು ಹೇಗೆ?" ಮರ ಕಡಿಯುವವನು ತಿಳಿಯಲು ಬಯಸಿದ.

"ಇತರ ಪ್ರಾಣಿಗಳು ಹೊರಹಾಕಿದ ಇಂಗಾಲದ ಡೈಆಕ್ಸೈಡನ್ನು ಗಿಡಗಳು ತಮ್ಮ ಉಸಿರಿನೊಂದಿಗೆ ಒಳಗೆಳೆದುಕೊಳ್ಳುತ್ತವೆ. ವಿಷಪೂರಿತ, ನಿರುಪಯುಕ್ತವೆಂದು ಇತರ ಪ್ರಾಣಿಗಳು ತ್ಯಜಿಸಿದ ಇಂಗಾಲದ ಡೈಆಕ್ಸೈಡನ್ನು ತಮ್ಮ ಆಹಾರದ ತಯಾರಿಕೆಯಲ್ಲಿ ಬಳಸಿಕೊಳ್ಳುತ್ತವೆ."

"ಅಸಾಧ್ಯ!" ಅಪನಂಬಿಕೆಯಿಂದೆಂಬಂತೆ ಮರ ಕಡಿಯುವವನು ಕೂಗಿದ. ವನದೇವತೆ ಮುಂದುವರೆಸಿದಳು.

"ಆಹಾರದ ತಯಾರಿಕೆಯಲ್ಲಿ ಇಂಗಾಲದ ಡೈಆಕ್ಸೈಡ್ ಒಂದು ಮೂಲ ಸಾಮಗ್ರಿ. ಅದರೊಂದಿಗೆ ನೆಲದೊಳಗಿನ ನೀರು ಮತ್ತು ಖನಿಜಗಳನ್ನು ಸಸ್ಯಗಳು ಬಳಸಿಕೊಂಡು ರುಚಿಕರವಾದ ತರಕಾರಿ, ಹಣ್ಣುಗಳನ್ನು ತಯಾರಿಸುತ್ತವೆ. ಈ ಮೂರು ವಸ್ತುಗಳನ್ನು ಬಳಸಿಕೊಂಡು ಯಾವುದೇ ಬಗೆಯ ರುಚಿಕರವಾದ ಆಹಾರವನ್ನು ನೀನು ತಯಾರಿಸಬಲ್ಲೆಯಾ?"

"ಏನು? ಗಾಳಿ, ಮಣ್ಣು ಮತ್ತು ನೀರನ್ನು ಬಳಸಿಕೊಂಡು ಬಾಯಲ್ಲಿ ನೀರೂರುವಂಥ ಆಹಾರವನ್ನು ತಯಾರಿಸುವುದೇ? ಅಸಾಧ್ಯ! ಕೆಸರು ನೀರಿನಿಂದ ರುಚಿಕರ ಪೇಯ! ಆಹಾಹಾ!" ಎಂದು ನಕ್ಕ ಮರ

ಕಡಿಯುವವನು. ವನದೇವತೆಯು ತಾನೂ ನಕ್ಕು ಮಾತನ್ನು ಮುಂದುವರೆಸಿದಳು. "ನೀನು ನಂಬಿದರೆ ನಂಬು ಬಿಟ್ಟರೆ ಬಿಡು. ಸಸ್ಯಗಳು ಈ ಕೆಲಸವನ್ನು ಲಕ್ಷಾಂತರ ವರ್ಷಗಳಿಂದ ಮಾಡುತ್ತಾ ಬಂದಿವೆ, ಈ ಭೂಮಿ ಇರುವವರೆಗೂ ಮಾಡುತ್ತಲೇ ಇರುತ್ತವೆ." ಇಂದ್ರಜಾಲ / ಮ್ಯಾಜಿಕ್

"ಇದು ಕರಾಳ ಜಾದೂ ಅಥವ ಹಸಿರು ಮಾಟ ಎಂಬಂತೆ ತೋರುತ್ತಿದೆ. ಸಸ್ಯಗಳು ಈ ಆಶ್ಚರ್ಯಗಳನ್ನೆಲ್ಲ ಹೇಗೆ ಸಾಧಿಸುತ್ತವೆ ಎಂಬುದನ್ನು ನೀನು ದಯವಿಟ್ಟು ನನಗೆ ವಿವರಿಸಬೇಕು. ನಾನು ತಿಳಿಯಲು ಉತ್ಸುಕನಾಗಿದ್ದೇನೆ" ಎಂದ ಮರ ಕಡಿಯುವವನು.

"ಖಂಡಿತ ತಿಳಿಸುತ್ತೇನೆ, ನನ್ನೊಡನೆ ಬಾ" ಎಂದು ಹೇಳುತ್ತ ವನದೇವಿಯು ಮರ ಕಡಿಯುವವನನ್ನು ಕಾಡಿನ ಬೇರೊಂದು ಭಾಗಕ್ಕೆ ಕರೆದೊಯ್ದಳು.

# ೩

ದಾರಿಯುದ್ದಕ್ಕೂ ಎತ್ತರವಾದ ಮರಗಳು, ಸಣ್ಣ ಸಣ್ಣ ಪೊದೆಗಳು, ನವಿರಾದ ಬಳ್ಳಿಗಳು ಎಲ್ಲವೂ ವನದೇವತೆಯನ್ನು ಕಂಡು ಆನಂದಪಟ್ಟವು. ಅವು ತಮ್ಮ ರೆಂಬೆ ಕೊಂಬೆಗಳನ್ನು ಬಾಗಿಸಿದವು. ಹೊಚ್ಚಹೊಸ ವರ್ಣರಂಜಿತ, ಸುಗಂಧಭರಿತ ಪುಷ್ಪಗಳನ್ನು ಆಕೆಯ ಮೇಲೆ ಮಳೆಸುರಿಸಿ ತಮ್ಮ ಆನಂದವನ್ನು ತೋರಿದವು. ವನದೇವಿಯ ಸುತ್ತಲೂ ದುಂಬಿಗಳು ಝೇಂಕರಿಸಿದವು. ಬಣ್ಣ ಬಣ್ಣದ ನವಿಲು ಆನಂದದಿಂದ ನರ್ತಿಸಿತು. ಮರದ ಮೇಲಿನ ಹಕ್ಕಿಗಳು ಸಂತೋಷದಿಂದ ಹಾಡಿದವು. ಸೌಮ್ಯ ಜಿಂಕೆಗಳು ವನದೇವತೆ ಬಳಿಬಂದಂತೆ ಸಡಗರದಿಂದ ಕುಣಿದಾಡಿದವು. ಅವಳ ಕೈಗಳಿಗೆ ಮುತ್ತಿಟ್ಟವು. ಸಣ್ಣ ಪುಟ್ಟ ಪ್ರಾಣಿಗಳೂ ಮೊಲಗಳೂ ಆಕೆಯನ್ನು ಹರ್ಷದಿಂದ ಸ್ವಾಗತಿಸಿದವು. ದೊಡ್ಡ ಪ್ರಾಣಿಗಳು ಸಣ್ಣವುಗಳ ಮೇಲೆ ಆಕ್ರಮಣ ಮಾಡುವುದನ್ನು ಮರೆತು ವನದೇವಿಯನ್ನು ಗೌರವದಿಂದ ಸ್ವಾಗತಿಸಿದವು. ಮರ ಕಡಿಯುವವನು ಇದನ್ನೆಲ್ಲ ಕಂಡು ಆಶ್ಚರ್ಯದಿಂದ ಮೂಕನಾದ. ಅವನು ವನದೇವತೆಯನ್ನು ಕುರಿತು ಹೇಳಿದ:

"ನಿನ್ನ ಮೇಲೆ ಇಡೀ ಕಾಡು ಮತ್ತು ಕಾಡಿನ ಪ್ರಾಣಿಗಳು ಪ್ರೀತಿಯ ಮಳೆ ಸುರಿಸುತ್ತಿವೆ! ಕಣ್ಣಾರೆ ಕಂಡರಷ್ಟೆ ಇದನ್ನು ನಂಬಲು ಸಾಧ್ಯ. ಈ ವಿಶೇಷ ವರ್ತನೆಗೆ ಕಾರಣವೇನು ಎಂದು ದಯವಿಟ್ಟು ತಿಳಿಸು."

ವನದೇವತೆ ಮುಗುಳ್ನಕ್ಕು ಹೇಳಿದಳು: "ನೀನು ಈಗ ನೋಡಿದ್ದು ಪ್ರೀತಿಯ ಅದ್ಭುತ ಶಕ್ತಿಗೆ ಸಾಕ್ಷಿಯಾಗಿದೆ. ಪ್ರೀತಿಯು ಅತ್ಯುನ್ನತವಾದ ಒಂದು ಸದ್ಗುಣ. ಬೆಳಕು ಕತ್ತಲನ್ನು ಹೊರದೂಡುವಂತೆ ಪ್ರೀತಿಯು ಹೃದಯದಿಂದ ಭಯವನ್ನು ಓಡಿಸುತ್ತದೆ. ನೀನು ಪ್ರಾಣಿ, ಪಕ್ಷಿ, ಮರ, ಗಿಡಗಳಿಗೆ ಸ್ನೇಹವನ್ನು ತೋರಿದರೆ ಅವೆಲ್ಲ ನಿನ್ನ ಸ್ನೇಹಿತರಾಗುತ್ತವೆ. ಪ್ರೀತಿಯೆನ್ನುವುದು ಎಂದೂ ಬತ್ತಲಾರದ ಒಂದು ಚಿಲುಮೆಯಿದ್ದಂತೆ. ನೀನು ಪ್ರೀತಿಯನ್ನು ಹರಡಿದಂತೆಲ್ಲ ಅದು ನಿನ್ನೊಳಗೆ, ಹೊರಗೆ ಬೆಳೆದು ಹಬ್ಬುತ್ತದೆ. ಮನಸ್ಸಿನಲ್ಲಿ ಪ್ರೀತಿಯಿದ್ದಾಗ ಸಂತಸದ ಪಾತ್ರೆ ತುಂಬಿರುತ್ತದೆ. 'ಬದುಕು ಮತ್ತು ಬದುಕಲು ಬಿಡು' ಎನ್ನುವುದು ಜೀವನದ ತತ್ವ. ಪ್ರೀತಿಯೆನ್ನುವುದು ಕಾಡಿನ ಭಾಷೆ. ಆದ್ದರಿಂದಲೇ ನಾವೆಲ್ಲರೂ ಇಷ್ಟೊಂದು ಪ್ರೀತಿ, ಸಂತೋಷಗಳಿಂದ ಇರಲು ಸಾಧ್ಯವಾಗಿದೆ."

"ಓಹೋ, ಹೌದು, ದೇವತೆಗಳ ರಾಣೀ, ನಿಜವಾಗಲೂ ಪ್ರೀತಿಗೆ ಅಂಥ ಶಕ್ತಿಯಿದೆ" ಎಂದು ಮರ ಕಡಿಯುವವನು ಒಪ್ಪಿಕೊಂಡ. ವನದೇವತೆ ಮುಂದುವರಿಸಿದಳು, "ನೀನು ಕೆಲವು ಪ್ರಾಣಿಗಳು ಮತ್ತು ಪಕ್ಷಿಗಳಷ್ಟೇ ಸಂತೋಷದಿಂದ ಕಾಡಿನಲ್ಲಿ ಬದುಕುವುದನ್ನು ನೋಡಿದೆ. ಆದರೆ ಅಂಥವು ಇನ್ನೂ ಅನೇಕವಿವೆ. ಕೀಟಸಂತತಿಗೆ ಸೇರಿದ ಸಣ್ಣ ಜೇನುನೊಣಗಳ ಗುಂಪುಗಳಿವೆ. ಮತ್ತೊಮ್ಮೆ ನಾನು ನಿನಗೆ ನೆನಪಿಸುವೆ, ಈ ಎಲ್ಲ ಸೃಷ್ಟಿಗಳು ಊಟದ ಜೊತೆಗೆ ಸಂತೋಷ, ಸಮಾಧಾನ, ಪ್ರೀತಿ ಮತ್ತು ಸುರಕ್ಷತೆಯನ್ನು ಸಸ್ಯ ಸಾಮ್ರಾಜ್ಯದಿಂದ ಪಡೆಯುತ್ತವೆ."

ವನದೇವತೆ ಮತ್ತು ಮರ ಕಡಿಯುವವನು ಕಾಡಿನ ಉದ್ದಕ್ಕೂ ನಡೆದುಕೊಂಡು ಹೋಗಿ ಹುಲುಸಾಗಿ ಬೆಳೆದ ಹಸುರಿನ ಜಾಗವೊಂದನ್ನು ತಲುಪಿದರು. ಇಲ್ಲಿ ವನದೇವತೆ ಕೆಳಗೆ ಕುಳಿತಳು. ಮರ ಕಡಿಯುವವನು ಅವಳ ಪಾದಗಳ ಬಳಿ ಮಂಡಿಯೂರಿ ಕುಳಿತನು. ದೇವತೆ, ಹಸಿದು, ಆಯಾಸಗೊಂಡ ಮರಕಡಿಯುವವನಿಗೆ

ತಿನ್ನಲು ರಸಭರಿತ ಹಣ್ಣುಗಳನ್ನು ಕೊಟ್ಟಳು. ಕುಡಿಯಲು ಸಿಹಿಯಾದ ಮಧುವನ್ನು ನೀಡಿದಳು. ಮರ ಕಡಿಯುವವನು ಆ ರುಚಿಯಾದ ಊಟವನ್ನು ಕುತೂಹಲದಿಂದ ತಿಂದು ಸಂತೋಷಪಟ್ಟನು. ನಂತರ ವನದೇವತೆ ಹೇಳುವುದನ್ನು ಆಲಿಸಲು ಸಜ್ಜಾದನು.

ವನದೇವತೆ ಶುರು ಮಾಡಿದಳು: "ಸಸ್ಯಗಳು ಮೂರು ಸಾಮಾನ್ಯ ಕಚ್ಚಾವಸ್ತುಗಳನ್ನು ಬಳಸಿಕೊಂಡು ಹೇಗೆ ರುಚಿಯಾದ ಆಹಾರವನ್ನು ತಯಾರಿಸುತ್ತವೆ ಎಂದು ನೀನು ತಿಳಿಯಬೇಕು. ಅದೊಂದು ದೊಡ್ಡ ಕಥೆ. ಅದನ್ನು ಸಂಪೂರ್ಣವಾಗಿ ಆನಂದಿಸಬೇಕಾದರೆ ಕತೆಯನ್ನು ಮೊದಲಿನಿಂದಲೇ ಕೇಳಬೇಕು. ಗಿಡದ ಬದುಕು ಮೊದಲಾಗುವುದೇ ಬೀಜದಿಂದ. ಆದ್ದರಿಂದ ನಾವು ಕತೆಯನ್ನು ಬೀಜದಿಂದಲೇ ಪ್ರಾರಂಭಿಸೋಣ. ನಂತರ ವನದೇವತೆ ಕುಂಬಳಕಾಯಿಯ ಬೀಜ ತೆಗೆದುಕೊಳ್ಳುವಂತೆ ಮರ ಕಡಿಯುವವನಿಗೆ ಹೇಳಿದಳು. ಅದನ್ನು "ಎರಡು ಭಾಗವಾಗಿ ಒಡೆ"ಯೆಂದಳು. ಅವನು ಹಾಗೇ ಮಾಡಲು ಯತ್ನಿಸಿದ. ಆದರೆ ಆಗಲಿಲ್ಲ. ಮರ ಕಡಿಯುವವನು ಆಶ್ಚರ್ಯಗೊಂಡ. ಬೀಜದ ಮೇಲಿನ ಸಿಪ್ಪೆ ಅಷ್ಟೊಂದು ದಪ್ಪ ಇರುತ್ತದೆಯೇ? ನಂತರ ಅವನು ತನ್ನ ಕೊಡಲಿಯನ್ನು ಉಪಯೋಗಿಸಬೇಕಾಯಿತು. ಕೊಡಲಿಯ ಚೂಪಾದ ಕೊನೆಯಿಂದ ಕುಂಬಳ ಬೀಜವನ್ನು ಎರಡಾಗಿ ಸೀಳಿದನು.

"ಹುಷಾರಾಗಿ ನೋಡು. ಒಡೆದಿರುವ ಬೀಜದಲ್ಲಿ ನೀನು ಏನು ಕಾಣುತ್ತೀಯೋ ಅದನ್ನು ನನಗೆ ಹೇಳು" ಎಂದು ವನದೇವತೆ ಮರ ಕಡಿಯುವವನಿಗೆ ಹೇಳಿದಳು. ಮರ ಕಡಿಯುವವನು ಬೀಜದ ಎರಡು ಹೋಳುಗಳನ್ನು ಕೈಯಲ್ಲಿ ಹಿಡಿದು ಪರೀಕ್ಷಿಸಿ ಹೇಳಿದ: "ಎರಡೂ ಹೋಳುಗಳು ಒಂದೇ ರೀತಿ ಇವೆ." "ಈಗ ನಿನಗೆ ಒಡೆದ ಹೋಳುಗಳ ವಿಶೇಷ ಗೊತ್ತಾಯಿತೇ?" ವನದೇವತೆ ಕೇಳಿದಳು.

ಮರ ಕಡಿಯುವವನು ತಲೆಯಲ್ಲಾಡಿಸಿ ಹೇಳಿದ: "ಇಲ್ಲ, ನನಗೆ ಗೊತ್ತಾಗಲಿಲ್ಲ."

"ಅವು ತಾಯಿಗಿಡ ಕಟ್ಟಿಕೊಟ್ಟಿರುವ ಆಹಾರದ ಪೊಟ್ಟಣಗಳು. ಅದು ಇನ್ನೂ ಮೊಳೆಯಲಿರುವ ಗಿಡಕ್ಕಾಗಿ ಇರುವ ಆಹಾರ."

ಮರ ಕಡಿಯುವವನು ಆಗಲೂ ತಲೆಯಲ್ಲಾಡಿಸಿ ಹೇಳಿದ: "ನೀನು ಹೇಳುವುದು ತಿಳಿಯಲಿಲ್ಲ."

"ಹುಟ್ಟಲಿರುವ ಗಿಡ ತಾಯಿಬೇರಿನ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾನೇ ಬೆಳೆಯಬೇಕು. ಆದರೆ ತಾಯಿ ತನ್ನ ಮಗುವನ್ನು ಒಣಗಲು ಬಿಡುವುದಿಲ್ಲ. ಆದ್ದರಿಂದ ಆಕೆ ಬೀಜದಲ್ಲೇ ಆಹಾರವನ್ನು ಒದಗಿಸಿ ಬದುಕಲು ಬೇಕಾದ ಆಹಾರ ಗಿಡಕ್ಕೆ ದೊರೆಯುವಂತೆ ಮಾಡುವಳು."

"ಹೌದೆ" ಎನ್ನುತ್ತ ಒಂದು ಕ್ಷಣ ಮರ ಕಡಿಯುವವನು ಚಿಂತಾಮಗ್ನನಾದ. ತನ್ನ ಕೈಯಲ್ಲಿದ್ದ ಬೀಜದ ಎರಡು ಹೋಳುಗಳನ್ನು ನೋಡಿದ. ನಂತರ ಕುತೂಹಲಭರಿತನಾಗಿ ಕೇಳಿದ: "ಆದರೆ, ಇವು ಆಹಾರದ ಚೀಲಗಳಾದರೆ, ಈ ಆಹಾರವನ್ನು ತಿನ್ನುವ ಮರಿ ಸಸ್ಯ ಎಲ್ಲಿದೆ?"

"ಅಷ್ಟೊಂದು ಗೊಂದಲಗೊಳ್ಳಬೇಡ" ವನದೇವತೆ ನಗುತ್ತ ಹೇಳಿದಳು. ಚಿಕ್ಕ ಬೀಜ ಸರಿಯಾಗಿ ನಿನ್ನ ಮೂಗಿನ ಕೆಳಗೆ ಇದೆ. ನಂತರ ಆಕೆ ಹೊಳೆಯುವ ಒಂದು ಉಂಗುರವನ್ನು ಆಕೆಯ ಬೆರಳಿನಿಂದ ತೆಗೆದು ಮರ ಕಡಿಯುವವನಿಗೆ ಕೊಟ್ಟಳು.

"ಆ ಮಾಂತ್ರಿಕ ಹರಳಿನಿಂದ ಒಡೆದ ಬೀಜದ ಎರಡು ಭಾಗಗಳನ್ನು ಹುಶಾರಾಗಿ ನೋಡು. ಉಂಗುರದ ಗಾಜಲ್ಲಿ ನೀನು ನೋಡಿದ್ದನ್ನು ಹೇಳು." ಆಕೆ, ಮರ ಕಡಿಯುವವನಿಗೆ ಹೇಳಿದಳು. ಅವನು ವನದೇವತೆ ಹೇಳಿದ ಹಾಗೆಯೇ ಮಾಡಿದನು. ಕೆಲವು ಕ್ಷಣಗಳು ಬೀಜವನ್ನು ಉಂಗುರದ ಮೂಲಕ ಗಮನವಿಟ್ಟು ವೀಕ್ಷಿಸಿದನು. ತಕ್ಷಣವೇ ಅತ್ಯಾನಂದದಿಂದ ಕೂಗಿದ, "ಅದು ಇಲ್ಲಿದೆ. ಅದನ್ನು ನೋಡಿದೆ. ಒಂದು ಜಾಗದಲ್ಲಿ ನಾನು ನಿಜವಾಗಲೂ ಸಣ್ಣ ಗಿಡವನ್ನೂ ನೋಡ ಬಲ್ಲೆ. ನಂಬಲಾಗದಷ್ಟು ಚಿಕ್ಕದು. ಆದರೆ ಆದೊಂದು ಗಿಡ. ಕಾಣುತ್ತಿದೆ!"

"ಈಗ ನೀನು ಮರಿಸಸ್ಯವನ್ನು ಗುರುತಿಸಿರುವೆ. ಅದರ ಊಟದ ಚೀಲವೇನು ಎಂದು ಗೊತ್ತಾಗಿದೆ. ನಾವು ಬೇರೆ ಇತರ ವಿಷಯಗಳನ್ನು ತಿಳಿಯೋಣ" ಎನ್ನುತ್ತಾ ವನದೇವತೆಯು ಮಾತನ್ನು ಮುಂದುವರೆಸಿದಳು. "ತಾಯಿ ಸಸ್ಯದಿಂದ ಬೇರೆಯಾದ ಸಣ್ಣಗಿಡ ಮತ್ತು ಅದರ ಆಹಾರ ಚೀಲಕ್ಕೆ ಕೆಲವು ರೀತಿಯ ರಕ್ಷಣೆ ಅಗತ್ಯವಿದೆಯಲ್ಲವೇ?"

"ಹೌದು."

"ಬೀಜದ ಹೊಸ ಕವಚದ ಗಟ್ಟಿಯಾದ ಭಾಗ ಅದಕ್ಕೆ ರಕ್ಷಣೆ ಒದಗಿಸುತ್ತದೆ. ಈ ದಪ್ಪ ತೊಗಟೆ ಮರಿ ಸಸ್ಯವನ್ನೂ ಅದರ ಆಹಾರವನ್ನು ವಿನಾಶದಿಂದ ರಕ್ಷಿಸುತ್ತದೆ. ಆ ತೊಗಟೆಯ ಒಳಗಡೆ ಎರಡೂ ಸುರಕ್ಷಿತವಾಗಿರುತ್ತವೆ. ಮರಿ ಸಸ್ಯವು ಶಾಂತಿಯಿಂದ ನಿದ್ದೆ ಮಾಡಲು ಸಾಧ್ಯವಾಗುತ್ತದೆ."

"ನಿದ್ದೆ? ಎಂತಹ ನಿದ್ದೆ? ಮರಿ ಸಸ್ಯವು ಬದುಕಿರುತ್ತದೆ, ನಿದ್ದೆ ಮಾಡುತ್ತದೆ, ಈಗಲೋ ಅಥವ ನಿಧಾನವಾಗಿಯೋ ಎಚ್ಚರಗೊಳ್ಳುತ್ತದೆ ಎಂದು ನಿನ್ನ ಅಭಿಪ್ರಾಯವೊ" ಆಶ್ಚರ್ಯಗೊಂಡ ಮರ ಕಡಿಯುವವನು ಕೇಳಿದ.

"ಅಲ್ಲವೆ ಮತ್ತೆ, ಅದು ಬದುಕಿದೆ. ಬೀಜ ಇದ್ದಕ್ಕಿದ್ದಂತೆ ಜೀವತಳೆದು ಬರಲು ಸಾಧ್ಯವಿಲ್ಲ. ಅದು ಎಲ್ಲ ಸಮಯದಲ್ಲೂ ಜೀವಂತವಾಗಿರುತ್ತದೆ. ಈಗ ಅದು ಬರೀ ಮಲಗಿಲ್ಲ. ನಿಧಾನವಾಗಿ ಉಸಿರಾಡುತ್ತಿದೆ." ವನದೇವತೆ ಸ್ಪಷ್ಟಪಡಿಸಿದಳು.



"ಇದು ನನಗೆ ಅರ್ಥವಾಗುವುದಿಲ್ಲ. ನಿದ್ದೆ ಮಾಡುವುದು ಮತ್ತು ಉಸಿರಾಡುವುದು? ಈ ಪುಟ್ಟ-ಚಿಕ್ಕ ಸಸಿ! ಮರ ಕಡಿಯುವವನು ಗಲಿಬಿಲಿಗೊಂಡವನಂತೆ ತಲೆ ಅಲ್ಲಾಡಿಸಿದನು."

"ಎಲ್ಲ ಬದುಕಿರುವ ವಸ್ತುಗಳು ಉಸಿರಾಡಲೇಬೇಕು. ಅದರಲ್ಲಿ ಆಶ್ಚರ್ಯಪಡುವಂತಹುದು ಏನಿದೆ? ಆ ಚಿಕ್ಕ ಸಸಿ, ಈಗ ನೀನು ಉಸಿರಾಡುವ ಹಾಗೆ ಉಸಿರಾಡುವುದಿಲ್ಲ. ಮರಿ ಸಸ್ಯ ಎಷ್ಟು ಚಿಕ್ಕದಿದೆ ಎಂದರೆ ಅದು ನಿಶ್ಶಬ್ದವಾಗಿ ಮಲಗಿದೆ. ಆದ್ದರಿಂದ, ಅದು ಬಹಳ ಬಹಳ ಹಗುರವಾಗಿ ಉಸಿರಾಡುತ್ತಿದೆ" ವನದೇವತೆ ವಿವರಿಸಿದಳು.

ಮರ ಕಡಿಯುವವನು ತಲೆ ಅಲ್ಲಾಡಿಸುತ್ತಾ, ವನದೇವತೆ ಮುಂದುವರಿಸಲೆಂದು ಕಾದ.

ವನದೇವತೆ ಹೇಳಿದಳು: "ಈ ರೀತಿಯಾಗಿ ತಾಯಿ ಸಸ್ಯ ತನ್ನ ಮಗುವನ್ನು ಈ ವಿಶಾಲ ಪ್ರಪಂಚದೊಳಗೆ ಕಳಿಸುವಳು. ಅದು ತನ್ನ ಹೊಸ ಬದುಕು ಪ್ರಾರಂಭಿಸಲು ಸರಿಯಾದ ಪರಿಸರದ ಅವಶ್ಯಕತೆ ಇದ್ದೇ ಇದೆ. ಹೇಳುವುದಾದರೆ, ಬೇರು ಬಿಡಲು ಸರಿಯಾದ ರೀತಿಯ ಮಣ್ಣು, ಅದಕ್ಕೆ ಬೇಕಾಗುವಷ್ಟು ನೀರು, ಮತ್ತು ಅದಕ್ಕೆ ಸರಿಹೊಂದುವ ಹವಾಗುಣ ಇವೆಲ್ಲಾ ಬೇಕು. ಇವುಗಳಲ್ಲಿ ಯಾವುದಾದರೊಂದು ಇಲ್ಲದಿದ್ದರೂ ಗಿಡ ಬೆಳೆಯುವುದಿಲ್ಲ. ಇದೆಲ್ಲ ಪ್ರಕೃತಿಮಾತೆಗೆ ಚೆನ್ನಾಗಿ ಗೊತ್ತು. ಎಲ್ಲಾ ಬೀಜಗಳೂ ಬೆಳೆದು ದೊಡ್ಡವಾಗುವ ಅದೃಷ್ಟ ಪಡೆದಿರುವುದಿಲ್ಲ. ನಿಜವಾಗಲೂ, ಕೆಲವೇ ಕೆಲವು ಬೀಜಗಳು ಈ ರೀತಿಯಾಗಿ ಬೆಳೆಯುತ್ತವೆ. ಈ ಕಾರಣದಿಂದಲೇ ಹತ್ತಾರು ಸಾವಿರ ಬೀಜಗಳು ಒಂದೇ ಬಾರಿಗೆ ತಯಾರಾಗುತ್ತವೆ."

"ಹಾಗಾದರೆ, ನಾನು ಊಹಿಸುವ ಹಾಗೆ ಸಾಕಷ್ಟು ಬೀಜಗಳು ಗಿಡಗಳಾಗಿ ಬೆಳೆಯಲಾರವು" ಎಂದು ಮರ ಕಡಿಯುವವನು ಅಭಿಪ್ರಾಯಪಟ್ಟನು.

"ಸಾವಿರಾರು ಬೀಜಗಳು ಸಸ್ಯದಿಂದ ಹೊರಬಂದರೂ ಬರೀ ಒಂದು ಮುಷ್ಟಿಯಷ್ಟು ಮಾತ್ರ ವಿಶ್ರಾಂತಿ ಪಡೆದು ತಮ್ಮ ಹಳೆಯ ವಂಶವನ್ನು ಬೆಳೆಸುತ್ತವೆ" ಎಂದು ವನದೇವತೆ ಹೇಳಿದಳು.

"ಯಾವ ಕಾರಣದಿಂದ ಅಷ್ಟೊಂದು ಬೀಜಗಳು ವ್ಯರ್ಥವಾಗಿ ನಾಶವಾಗುತ್ತವೆ?" ಮರ ಕಡಿಯುವವನು ಕೇಳಿದ.

"ತಾಯಿಗಿಡದ ಕೆಳಗೆ ಸರಿಯಾಗಿ ಬೀಳುವ ಬೀಜಗಳ ಬಗ್ಗೆ ಯೋಚಿಸು, ಅವುಗಳ ಗತಿ ಏನಾಗಬಹುದೆಂದು ಯೋಚಿಸು?" ಮರ ಕಡಿಯುವವನು ಸ್ವಲ್ಪಹೊತ್ತು ಯೋಚಿಸಿ ಸರಿಯಾದ ತೀರ್ಮಾನಕ್ಕೆ ಬಂದ.

"ನನಗೆ ಗೊತ್ತು" ಎಂದು ವಿಶ್ವಾಸದಿಂದ ನುಡಿದ. "ಎಲ್ಲಾ ಬೀಜಗಳೂ ಬಿದ್ದ ಮರದ ಸುತ್ತಲೂ ಮೊಳಕೆ ಒಡೆದರೆ, ಅವುಗಳೆಲ್ಲವೂ ನೀರು ಮತ್ತು ಮಣ್ಣಿನ ಸತ್ವವನ್ನು ಹಂಚಿಕೊಳ್ಳಬೇಕಾಗುತ್ತದೆ. ಮತ್ತು ಯಾವುದೂ ಸರಿಯಾಗಿ ಬೆಳೆಯಲು ಸಾಧ್ಯವಾಗುವುದಿಲ್ಲ."

"ಅವುಗಳು ಊಟವನ್ನು ಮತ್ತು ನೀರನ್ನು ಹಂಚಿಕೊಂಡು ಬೆಳೆಯುವ ದುರದೃಷ್ಟ ಹೊಂದಿರುವುದರಿಂದ ಅರ್ಧ ಊಟದಿಂದ ಉಪವಾಸ ಇರಬೇಕಾಗುತ್ತದೆ. ಸಣ್ಣ ಗಿಡಗಳಿಗೆ ಸಾಕಷ್ಟು ಸೂರ್ಯನ ಬೆಳಕು ಸಿಗುವುದಿಲ್ಲ. ಸಸ್ಯಗಳಿಗೆ ಮುಖ್ಯವಾಗಿ ವಿಫುಲ ಸೂರ್ಯನ ಬೆಳಕು ಬೇಕು. ತಾಯಿಮರದ ಕೆಳಗೆ ಬಿದ್ದ ಬೀಜಗಳು ಬೆಳೆಯಲು ಪ್ರಯತ್ನಿಸಿದರೂ ಕೂಡ ಅಲ್ಲಿ ಅವಶ್ಯವಿದ್ದಷ್ಟು ಸೂರ್ಯನ ಬೆಳಕು ಸಿಗುವುದಿಲ್ಲ. ಆದ್ದರಿಂದ ಅವು ಬೆಳೆಯಲು ಆಗುವುದಿಲ್ಲ."

"ಒಪ್ಪಿದೆ. ಆದ್ದರಿಂದಲೇ ತಾಯಿ ಮರದಿಂದ ದೂರ ಹೋಗಿ ಬಿದ್ದ ಬೀಜಗಳು ಚೆನ್ನಾಗಿ ಬೆಳೆಯುವ ಅವಕಾಶ ಹೊಂದಿವೆ. ಆದರೆ, ಬೀಜಗಳು ಹೇಗೆ ಪ್ರಯಾಣ ಮಾಡುತ್ತವೆ?" ಎಂದು ಮರ ಕಡಿಯುವವನು ಕೇಳಿದ.

"ಆಹಾ! ಪ್ರಕೃತಿಮಾತೆ ಅದರ ಜವಾಬ್ದಾರಿ ವಹಿಸುವಳು. ಅದರಲ್ಲಿ ಕೆಲವು ನಿರ್ದಿಷ್ಟ ದಾರಿಗಳಿವೆ. ಅದರಂತೆ ಬೀಜಗಳು ಸುದೀರ್ಘ ಪ್ರಯಾಣ ಮಾಡಬಹುದು" ಎಂದು ವನದೇವತೆ ಹೇಳಿದಳು.

"ಆ ದಾರಿಗಳು ಯಾವುವು? ದಯವಿಟ್ಟು ಹೇಳು" ಎಂದು ಮರ ಕಡಿಯುವವನು ಕುತೂಹಲದಿಂದ ಕೇಳಿದ.



"ತಾಯಿಗಿಡದಿಂದ ಸಸ್ಯಗಳು ದೂರ ಚಲಿಸಲು ತಮ್ಮಲ್ಲೇ ಅನೇಕ ವಿಧದ ರಚನಾಕ್ರಮಗಳನ್ನು ಅಳವಡಿಸಿಕೊಂಡಿವೆ" ವನದೇವತೆ ಹೇಳಿದಳು.

"ಓಹೋ! ಪ್ರಾಣಿಗಳ ಹಾಗೆ, ಬೀಜಗಳಿಗೂ ಕಾಲುಗಳಿವೆಯಾ?" ಎಂದು ಮರಕಡಿಯುವವನು ಕೇಳಿದ.

"ಇಲ್ಲ. ಬೀಜ ಕಾಲು ಬೆಳಸಿಕೊಂಡಿರುವುದಿಲ್ಲ. ಬೀಜಗಳಿಗೆ ಕಾಲು ಬೆಳೆದು ಅವು ಸುತ್ತಲೂ ನಡೆದಾಡುತ್ತವೆಂದು ಕಲ್ಪಿಸಿಕೊಳ್ಳಬೇಡ" ಎಂದಳು ವನದೇವತೆ.

"ಹಾಗಾದರೆ, ಅವು ಹರಿದಾಡಿಕೊಂಡು ಕೀಟಗಳ ಹಾಗೆ ತೆವಳುತ್ತವೆಯೇ?" ಮರ ಕಡಿಯುವವನು ತಿಳಿಯುವ ಆಸೆಯಿಂದ ಕೇಳಿದ.

"ಬೀಜಗಳ ಚದುರುವಿಕೆಯ ಬಗ್ಗೆ ನಿಜವಾಗಿ ನಿನಗೇನೂ ಗೊತ್ತಿಲ್ಲ. ಅದರ ಬಗ್ಗೆ ಸ್ವಲ್ಪ ವಿವರವಾಗಿ ಹೇಳುವೆ. ಕೆಲವು ಬೀಜಗಳ ರಚನೆ ಹೇಗಿರುತ್ತದೆ ಎಂದರೆ, ಹಗುರಾಗಿ ಬೀಸುವ ಗಾಳಿ ಅವನ್ನು ಒಯ್ಯಬಹುದು. ಉಳಿದವು ಪ್ರಾಣಿ ಪಕ್ಷಿಗಳ ಚರ್ಮಕ್ಕೆ ತಾವೇ ಅಂಟಿಕೊಂಡು ಅವುಗಳ ಮೂಲಕ ದೂರ ದೂರ ಸಾಗುತ್ತವೆ. ಇನ್ನೂ ಕೆಲವು ಬೀಜಗಳ ಸುತ್ತ ಹಣ್ಣಿನ ತಿರುಳು ಇರುತ್ತದೆ. ಪ್ರಾಣಿಗಳು ಹಣ್ಣು ತಿಂದಾಗ ಬೀಜಗಳು ಹೊರಗೆ ಸಿಡಿಯುತ್ತವೆ. ಮತ್ತೂ ಕೆಲವು ಹಣ್ಣುಗಳು ಬೀಜಗಳಿಂದ ತುಂಬಿದ್ದು ಸಿಡಿದುಕೊಂಡು ಹೊರಗೆ ಬರುತ್ತವೆ. ಬೀಜಗಳು ಹೀಗೆ ಹತ್ತಿರ ಮತ್ತು ದೂರ ಎಲ್ಲ ದಿಕ್ಕುಗಳಿಗೆ ಹರಡುತ್ತವೆ."

"ಆಹಾ! ಬೀಜಗಳು ತಾಯಿಗಿಡದಿಂದ ಹೊರಬಿದ್ದು ದೂರ ಸಾಗಲು ಅನೇಕ ದಾರಿಗಳಿವೆ!" ಮರ ಕಡಿಯುವವನು ಆಶ್ಚರ್ಯಗೊಂಡ.

"ಹೌದು. ಆ ಮಾದರಿಗಳನ್ನು ತೋರಿಸಲು ನಾನು, ನಿನಗೆ ಕೆಲವು ಬೀಜಗಳನ್ನು ತೋರಿಸುವೆ" ಎಂದು ವನದೇವತೆ ಹೇಳುತ್ತಾ ಪಾತ್ರೆಯಿಂದ ಅನೇಕ ವಿಧದ ಬೀಜಗಳನ್ನು ಹೊರತೆಗೆದಳು.

ಮರ ಕಡಿಯುವವನು ಅವುಗಳನ್ನು ಸರಿಯಾಗಿ ನೋಡಲೆಂದು ಮುಂದೆ ಬಾಗಿದ. ಅವು ತಮ್ಮ ಸುತ್ತಲೂ ಹತ್ತಿಯಂಥ ಮೃದುವಾದ ಕೂದಲ ತುಣುಕುಗಳನ್ನು ಅಂಟಿಸಿಕೊಂಡು ವಿಚಿತ್ರವಾಗಿ ಕಾಣುತ್ತಿದ್ದವು. ವನದೇವತೆ ಅವುಗಳನ್ನು ತನ್ನ ಅಂಗೈಯಲ್ಲಿ ಹಿಡಿದುಕೊಂಡಿದ್ದರಿಂದ ಅವನಿಗೆ ಚೆನ್ನಾಗಿ ನೋಡಲು



ಸಾಧ್ಯವಾಯಿತು. ಆದರೆ, ಆಕೆ ಹಾಗೆ ಮಾಡಿದಾಗ, ಮೃದುವಾದ ಗಾಳಿ ಬೀಸಿತು. ಬೀಜಗಳು ಗಾಳಿಯಲ್ಲಿ ತೇಲಲು ಶುರು ಮಾಡಿದವು. ಕಣ್ಣು ಮಿಟುಕಿಸುವಷ್ಟರಲ್ಲಿ ಅವು ಗಾಳಿಯಲ್ಲಿ ಮೇಲೆದ್ದು ಕಣ್ಣಿಗೆ ಕಾಣದಂತೆ ದೂರ ದೂರ ಹಾರಿಕೊಂಡು ಹೋದವು. ಮರ ಕಡಿಯುವವನು ಚಕಿತನಾದ.

"ಮರಿಸಸ್ಯವನ್ನು ತಾಯಿಗಿಡದಿಂದ ದೂರಮಾಡುವ ರೀತಿ ಎಷ್ಟು ಆಶ್ಚರ್ಯಕರವಾಗಿದೆ!" ಎಂದು ಅವನು ಅಚ್ಚರಿ ಸೂಚಿಸಿದ. "ಬೀಜಗಳೇ ತಮ್ಮ ತಾಯಿಯನ್ನು ಬಿಟ್ಟು ತಮ್ಮಷ್ಟಕ್ಕೆ ತಾವೇ ವಿಶಾಲ ಪ್ರಪಂಚ ದೊಳಗೆ ಹೋಗುವ ಸಾಮರ್ಥ್ಯವನ್ನು ಪಡೆದಿವೆ. ಕೂದಲಿನಂಥ ತುಂಡುಗಳನ್ನು ಅಂಟಿಸಿಕೊಂಡಿರುವ ಬೀಜಗಳು ಗಾಳಿಯಲ್ಲಿ ತೇಲುವುದನ್ನು ಗಮನಿಸಿದೆ. ಆದರೆ, ಅವು ತಮ್ಮ ತಾಯಂದಿರನ್ನು ಬಿಟ್ಟು ದೂರ ಹೋಗಿ ತಮ್ಮದೇ ಜೀವನ ಪ್ರಾರಂಭಿಸುತ್ತವೆ ಅನ್ನುವುದು ನನಗೆ ಅರ್ಥವಾಗಲಿಲ್ಲ" ಎಂದು ಮರ ಕಡಿಯುವವನು ಹೇಳಿದ.

ಆನಂತರ ವನದೇವತೆ ರೆಕ್ಕೆಗಳಂಥ ರಚನೆಯನ್ನು ಹೊಂದಿರುವ ಕೆಲವು ಬೀಜಗಳನ್ನು ಹೊರತೆಗೆದಳು. ಆಕೆ ಅವುಗಳಲ್ಲಿ ಕೆಲವನ್ನು ನೆಲದ ಮೇಲೆಸೆದಳು. ಅವು ಗಾಳಿಯ ಸಹಾಯದಿಂದ ಉರುಳಿಕೊಂಡು ಮುಂದೆ ಮುಂದೆ ಹೋದವು. ಮರ ಕಡಿಯುವವನು ಸಂಭ್ರಮಗೊಂಡನು.

"ಆಹಾ! ಹಾರುವ ಬೀಜಗಳು! ಉರುಳುವ ಬೀಜಗಳು! ಮತ್ತಿನ್ನೇನಿವೆ?" ಎಂದು ಅವನು ಕೂಗಿ ಹೇಳಿದ.

"ಇಲ್ಲಿ ಇನ್ನೊಂದು ವಿಧದ ಬೀಜಗಳಿವೆ" ಎಂದು ಹೇಳುತ್ತಾ ಮತ್ತೆ ಬೇರೆ ವಿಧದ ಕೆಲವು ಬೀಜಗಳನ್ನು ವನದೇವತೆ ತೋರಿಸಿದಳು. ಅವುಗಳಲ್ಲಿ ಕೆಲವು ಕೊಂಡಿಯಾಕಾರದಲ್ಲಿದ್ದವು. ಉಳಿದವು ತಮ್ಮ ಮೇಲೆ ಮುಳ್ಳುಗಳನ್ನು ಬೆಳೆಸಿಕೊಂಡಿದ್ದವು.

"ಕೊಂಡಿಗಳು, ಮುಳ್ಳುಗಳು! ಬೀಜಗಳು ಹರಡಲು ಇವು ಸಹಾಯ ಮಾಡುತ್ತವೆಯೇ! ನಾನು ಕಲ್ಪಿಸಿಕೊಳ್ಳಲಾರೆ!" ಎಂದು ಆಶ್ಚರ್ಯದಿಂದ ಕಣ್ಣಗಲಿಸಿ ಮರ ಕಡಿಯುವವನು ಕೂಗಿದ.

"ಒಳ್ಳೆಯದು. ಪಕ್ಷಿಗಳು ಮತ್ತು ಪ್ರಾಣಿಗಳು ಕೊಂಡಿ ಅಥವ ಮುಳ್ಳಿನ ಬೀಜಗಳನ್ನು ದಾಟಿದರೆ ಏನಾಗುವುದೆಂದು ಗೊತ್ತೇ?" ವನದೇವತೆ ಕೇಳಿದಳು.

ಸ್ವಲ್ಪಹೊತ್ತು ಸುಮ್ಮನಿದ್ದು ಮರ ಕಡಿಯುವವನು ಹೇಳಿದ. "ಗೊತ್ತು, ಬೀಜಗಳ ಹತ್ತಿರ ಬಂದ ಪ್ರಾಣಿಗಳ ಕೂದಲಿನ ಚರ್ಮಕ್ಕೆ ಬೀಜಗಳು ಅಂಟಿಕೊಳ್ಳುತ್ತವೆ. ಅಥವಾ, ಪಕ್ಷಿಗಳ ಪುಕ್ಕಗಳಿಗೆ ಅಂಟುತ್ತವೆ. ಪ್ರಾಣಿಪಕ್ಷಿಗಳು ಚಲಿಸಿದಾಗ ಬೀಜಗಳೂ ಚಲಿಸುತ್ತವೆ. ತಮ್ಮ ತಾಯಿಯಿಂದ ದೂರ ಹೋಗುತ್ತವೆ."

"ಹೌದು. ನೀನು ಸರಿಯಾಗಿ ಹೇಳಿದೆ" ಎಂದು ವನದೇವತೆ ಹೇಳಿದಳು. "ನಾನು ಹೇಳಿದ್ದನ್ನು ಸರಿಯಾಗಿ ತಿಳಿದಿರುವೆ, ಸಂತೋಷ. ಬೀಜಗಳ ಪ್ರಸಾರದ ಬಗ್ಗೆ ಇನ್ನಷ್ಟು ಆಶ್ಚರ್ಯಕರ ಸಂಗತಿಗಳಿವೆ. ತಮ್ಮ ಬೀಜ ಹರಡಲು ಸಹಾಯ ಮಾಡಿದವರಿಗೆ, ಅಥವಾ ಸಹಾಯ ಮಾಡುತ್ತೇವೆಂದು ಕರಾರು ಮಾಡಿಕೊಂಡವರಿಗೆ ಪ್ರತಿಫಲ ಕೊಡಲು ಸಸ್ಯಗಳು ಸಿದ್ಧವಾಗಿರುತ್ತವೆ" ವನದೇವತೆ ತಮಾಷೆಯ ಧ್ವನಿಯಲ್ಲಿ ಹೇಳಿದಳು.

"ದಯವಿಟ್ಟು ಕ್ಷಮಿಸು! ನನಗಿದು ಪೂರ್ತಿ ಹೊಸ ವಿಚಾರ. ಈ ಸಸ್ಯಗಳು ಯಾವ ರೀತಿ ಪ್ರತಿಫಲ ನೀಡುತ್ತವೆ?" ಎಂದು ಮರ ಕಡಿಯುವವನು ಕುತೂಹಲದಿಂದ ಕೇಳಿದ.

# ೬

ವನದೇವತೆಯು ಮುಗುಳ್ನಕ್ಕು ಮುಂದುವರಿಸಿದಳು, "ಇಲ್ಲಿ ಸಿಹಿಯಾದ ರಸ ತುಂಬಿದ ಹಣ್ಣುಗಳಿವೆ. ಅವುಗಳೊಳಗೆ ಬೀಜಗಳು ಇವೆ. ಆ ಬೀಜಗಳು..."

"ಓಹೋ! ನನಗೆ ಅರ್ಥವಾಯಿತು" ಮರ ಕಡಿಯುವವನು ಉತ್ಸಾಹಭರಿತನಾಗಿ ಮಧ್ಯದಲ್ಲಿ ತಡೆದು ಹೇಳಿದ. "ಪ್ರಾಣಿಪಕ್ಷಿಗಳು ಈ ಹಣ್ಣುಗಳನ್ನು ತಿನ್ನುತ್ತವೆ ಮತ್ತು ತಾವು ಇದ್ದ ಎಡೆಯಲ್ಲೇ ಬೀಜಗಳನ್ನು ಉಗುಳುತ್ತವೆ, ವಿಸರ್ಜಿಸುತ್ತವೆ. ಕೆಲವು ವೇಳೆ ಬೀಜಗಳು ತಾಯಿಗಿಡದಿಂದ ಸಾಕಷ್ಟು ದೂರ ಬೀಳುತ್ತವೆ. ಹೀಗೆ ಆ ಬೀಜಗಳು ಎಲ್ಲೆಲ್ಲಿ ಹರಡುತ್ತವೆಯೋ ಅಲ್ಲಲ್ಲಿ ಬೇರುಬಿಡುತ್ತವೆ. ನಾನು ಹೇಳಿದ್ದು ಸರಿಯೇ?"

"ಸರಿಯಾಗಿದೆ. ಬೀಜಗಳನ್ನು ಹರಡಲಿಕ್ಕಾಗಿ ಈ ಪ್ರಾಣಿಗಳು ಯಾವ ರೀತಿಯ ಕೂಲಿ ಪಡೆಯುತ್ತವೆ?" ವನದೇವತೆ ಕೇಳಿದಳು.

"ಹಣ್ಣುಗಳಿರಬಹುದು" ಎಂದು ಮರ ಕಡಿಯುವವನು ವಿಶ್ವಾಸತುಂಬಿದ ದನಿಯಲ್ಲಿ ಹೇಳಿದ. "ಹಣ್ಣುಗಳಿಗಾಗಿ ಪ್ರಾಣಿಗಳನ್ನು ಮರುಳು ಮಾಡಿ ಬೀಜ ಹರಡಿಸುವುದು ಕೆಟ್ಟವಿಚಾರವೇನಲ್ಲ!" ಆದರೆ ಸ್ವಲ್ಪಹೊತ್ತಿನಲ್ಲೆ ಮರ ಕಡಿಯುವವನು ಮುಖಗಂಟಿಕ್ಕಿದ. ಸಂಶಯದ ಮೋಡ ಅವನನ್ನು ಆವರಿಸಿತು. "ಹಣ್ಣಿನ ಜೊತೆ ಬೀಜವನ್ನೂ ತಿಂದರೆ ಏನಾಗುತ್ತದೆ?" ಅವನು ಕೇಳಿದ.

"ನೀನು ಅದನ್ನು ಕೇಳಿಯೇ ಕೇಳುವೆ ಎಂದು ನನಗೆ ಗೊತ್ತಿತ್ತು" ಎನ್ನುತ್ತಾ ವನದೇವತೆ ಮುಂದುವರೆಸಿದಳು. "ಪಕ್ಷಿಗಳು ಹಣ್ಣುಗಳನ್ನು ಕುಟುಕಿ ತಿನ್ನಲು ಇಷ್ಟಪಡುತ್ತವೆ. ಬೇವಿನ ಹಣ್ಣುಗಳನ್ನು ಬೀಜದ ಜೊತೆಗೆ ತಿನ್ನುವಹಾಗೆ. ಆದರೆ, ಅಂತಹ ಬೀಜಗಳು ತಮ್ಮ ಸುತ್ತಲೂ ಗಟ್ಟಿಯಾದ ಕವಚ ಹೊಂದಿರುತ್ತವೆ. ಅದು ಪ್ರಾಣಿಗಳ ಚರ್ಮದಷ್ಟು ದಪ್ಪ ಇರುತ್ತದೆ. ಆದ್ದರಿಂದ ಆ ಬೀಜಗಳೂ ಸಣ್ಣ ಕರುಳಿನ ರಸಗಳಿಂದಲೂ ಪಚನವಾಗುವುದಿಲ್ಲ. ಅವು ಇರುವ ಹಾಗೇ ಹೊರಗೆ ಹೋಗುತ್ತದೆ. ಮತ್ತು ಬಿದ್ದಲ್ಲೇ ಮಣ್ಣಿನೊಳಗೆ ಬೇರುಬಿಟ್ಟು ಚಿಗುರುತ್ತವೆ."

"ಆಶ್ಚರ್ಯಕರವಾಗಿದೆ! ತಾಯಿಗಿಡದಿಂದ ಮರಿಸಸ್ಯವನ್ನು ಬೇರೆ ಬೇರೆ ದಿಕ್ಕುಗಳಲ್ಲಿ ದೂರದೂರಕ್ಕೆ ಒಯ್ಯಲು ಏನೆಲ್ಲ ದಾರಿಗಳಿವೆ" ಎಂದು ಮರ ಕಡಿಯುವವನು ಅಚ್ಚರಿ ತೋರಿದ.

"ತಾಳು. ನಾನು ಇನ್ನೂ ಮುಗಿಸಿಲ್ಲ. ಬೀಜಗಳನ್ನು ಹರಡಲು ಇಷ್ಟೇ ಆಸಕ್ತಿ ಹುಟ್ಟಿಸುವಂಥ ಇನ್ನೂ ಹಲವು ದಾರಿಗಳು ಇವೆ. ಅವನ್ನು ತಿಳಿಯಲು ನಿನಗೆ ಇಷ್ಟವಿದೆಯೇ?" ಎಂದು ವನದೇವತೆ ಕೇಳಿದಳು. ಮರ ಕಡಿಯುವವನು ಜೋರಾಗಿ ತಲೆಯಾಡಿಸಿದಾಗ ಆಕೆ ಮಾತು ಮುಂದುವರೆಸಿದಳು:

"ನಿನಗೆ ಬಟಾಣಿ ಮತ್ತು ಹುರುಳಿ ಕಾಳಿನ ಪರಿಚಯವಿರಲೇಬೇಕು. ಬೀಜಗಳು ಬೀಜಕೋಶಗಳಲ್ಲಿರುತ್ತವೆ. ಬೀಜಕೋಶಗಳು ಒಣಗಿಕೊಂಡಾಗ ಅವು ಸಿಡಿದು ಹೊರಬರುತ್ತವೆ. ಈ ಬಳ್ಳಿಗಿಡಗಳಿಗೆ ಬೀಜಗಳು ಬಹುದೂರ ಹರಡಬೇಕಾದ ಅವಶ್ಯಕತೆ ಇಲ್ಲ. ಆದ್ದರಿಂದ ಬೀಜಗಳು ಬಹಳ ಹತ್ತಿರ ಪ್ರಯಾಣ ಮಾಡಲು ಇದು ಒಂದು ವಿಶೇಷ ಮಾದರಿಯಾಗಿದೆ."

"ನಿಜವಾಗಿಯೂ!" ಮರ ಕಡಿಯುವವನು ಸಸ್ಯಜೀವನದ ಆಶ್ಚರ್ಯಗಳನ್ನು ನಂಬಲು ಕಷ್ಟವಾದಂತೆ ತಲೆಯಲುಗಿಸಿದನು.

"ಬೀಜಗಳಲ್ಲಿ ಇನ್ನೊಂದು ವಿಧ ಇದೆ. ಅದು ಬೇರೊಂದು ರೀತಿ ಪ್ರಯಾಣ ಮಾಡುತ್ತದೆ" ಎಂದು ವನದೇವತೆ ಹೇಳಿದಳು. ಮರ ಕಡಿಯುವವನು ನಿಶ್ಯಬ್ದವಾಗಿ ತಲೆಯೆತ್ತಿ ಅವಳತ್ತ ನೋಡಿದಾಗ ಆಕೆ ಮುಂದುವರಿಸಿದಳು:

"ತೆಂಗಿನಕಾಯಿಯಂತಹ ಭಾರವಾದ ಬೀಜಗಳ ಬಗ್ಗೆ ಯೋಚಿಸು. ಅವು ಹೇಗೆ ಹರಡುತ್ತವೆ?" ಮರ ಕಡಿಯುವವನು ತಿಳಿಯದೆಂಬಂತೆ ಭುಜ ಕೊಡವಿ ತಲೆ ಅಲುಗಿಸಿದ.

"ತೆಂಗಿನಕಾಯಿ ಬೀಜಗಳು ಮತ್ತು ತಾಳೆ, ಅಡಕೆ ಜಾತಿಯ ಇತರ ಬೀಜಗಳ ಕವಚ ಬಹಳ ಗಟ್ಟಿಯಾಗಿರುತ್ತವೆ. ಪ್ರಾಣಿಪಕ್ಷಿಗಳು ಅವನ್ನು ನೇರವಾಗಿ ತಿನ್ನಲು ಆಗುವುದಿಲ್ಲ. ಭಾರವಾದ ಈ ಬೀಜಗಳನ್ನು ಗಾಳಿಯೂ ಒಯ್ಯಲಾರದು. ಅವು ಸಿಡಿದು ಹೊರಬರಲೂ ಆರವು. ಅಂಥ ಬೀಜಗಳನ್ನು ಪ್ರಕೃತಿ ದಟ್ಟವಾದ ಆದರೆ ಬಹಳ ಹಗುರವಾದ ನಾರಿನಿಂದ ಮುಚ್ಚಿರುತ್ತದೆ. ಭಾರವಾದ ಬೀಜ ಮಳೆಯ ನೀರಿನಲ್ಲಿ ತೇಲಲು ಅಥವಾ ನದಿಯ ಪ್ರವಾಹದ ಉದ್ದಕ್ಕೂ ಸಾಗಲು ಈ ಹಗುರವಾದ ನಾರು ಸಹಾಯಮಾಡುತ್ತದೆ. ಹೀಗೆ ಈ ಬೀಜಗಳು ಹರಿಯುವ ನೀರಿನ ಮೂಲಕ ನದಿಯ ದಡಗಳಲ್ಲಿ ಬೇರುಬಿಟ್ಟು ಬೆಳೆಯುತ್ತವೆ. ಸಮುದ್ರವೂ ಕೂಡ ಅವುಗಳನ್ನು ದೂರ ದ್ವೀಪಗಳಿಗೆ ಒಯ್ಯಬಹುದು. ಈ ಕಾರಣದಿಂದಲೇ ಸಾಗರ ತೀರದ ಅಂಚುಗಳಲ್ಲಿ ಘನವಾಗಿ ಬೆಳೆದ ತಾಳೆಯ ಮರಗಳನ್ನು ನೋಡಬಹುದು."

"ನಂಬಲು ಅಸಾಧ್ಯ!" ಮರಕಡಿಯುವವನು ಕೂಗಿದ. "ಇದನ್ನೆಲ್ಲ ನಂಬುವುದು ಅಷ್ಟು ಸುಲಭವಲ್ಲ. ಯಕ್ಷಿಣಿಕತೆಯಂತೆ ಇದೆ. ತಾಯಿಗಿಡಕ್ಕೆ ಎಂಥ ಮುಂದಾಲೋಚನೆ ಇದೆಯೆಂದರೆ ತನ್ನ ಮಕ್ಕಳು ಸ್ವತಃ ಚಲಿಸಲು ಸಾಧ್ಯವಾಗದಿದ್ದರೂ ಪ್ರಯಾಣಕ್ಕೆ ಅದ್ಭುತ ದಾರಿಗಳನ್ನು ಏರ್ಪಡಿಸಿದೆ. ಆಕೆಗೆ ನನ್ನ ಮೆಚ್ಚುಗೆ ಮತ್ತು ಹೊಗಳಿಕೆಯನ್ನು ತಿಳಿಸಲು ಶಬ್ದಗಳೇ ಸಾಲವು" ಎಂದು ಮರ ಕಡಿಯುವವನು ಹೇಳಿದ.

"ಇಲ್ಲಿ ನೀನು ಹೇಳಿದ್ದು ಸರಿಯಾಗಲಿಲ್ಲ" ವನದೇವತೆ ಮರ ಕಡಿಯುವವನ ಮಾತನ್ನು ವಿರೋಧಿಸಿದಳು. "ಯೋಚನೆ ಮಾಡುವುದಕ್ಕೆ, ತಮ್ಮ ಕೆಲಸ ತಾವೇ ಮಾಡಿಕೊಳ್ಳುವುದಕ್ಕೆ ಸಸ್ಯಗಳಿಗೆ ಮನಸ್ಸು ಇಲ್ಲ. ಆದ್ದರಿಂದ ಮರದ ಯೋಚನಾಶಕ್ತಿಯನ್ನು ನೀನು ಮೆಚ್ಚಿ ಹೊಗಳಿದ್ದು ಸರಿಯಾಗಲಿಲ್ಲ."

ಮರ ಕಡಿಯುವವನು ವನದೇವತೆಯ ಮಾತನ್ನು ಗಮನಕೊಟ್ಟು ಕೇಳಿದ. "ಪರಿಸರಕ್ಕೆ ಹೊಂದಿಕೊಳ್ಳುವ ಜೀವಿಗಳಷ್ಟೇ ಬದುಕಿ ಉಳಿದು, ಬೆಳೆದು, ಸಂತಾನವನ್ನು ಬೆಳೆಸುತ್ತವೆ. ಇದು ಪ್ರಕೃತಿಯ ಅಲಿಖಿತ ನಿಯಮ. ಅದರಂತೆಯೇ ಯಾವ ಸಸ್ಯವು ಪರಿಸರಕ್ಕೆ ಹೊಂದಿಕೊಳ್ಳುವುದಿಲ್ಲವೋ ಅದು ನಾಶವಾಗುತ್ತದೆ."

"ಪರಿಸರವೆಂದರೆ ನಿಜವಾಗಲೂ ಏನು? ನೀನು ಈಗಷ್ಟೆ ಹೇಳಿದ್ದನ್ನು ಅರ್ಥಮಾಡಿಕೊಳ್ಳಲಾರದ ದಡ್ಡ ನಾನು" ಎಂದು ಮರ ಕಡಿಯುವವನು ನಮ್ರತೆಯಿಂದ ಹೇಳಿದ.

ವನದೇವತೆಯು ವಿಚಾರಗಳನ್ನು ಸ್ಪಷ್ಟಪಡಿಸಲು ತೊಡಗಿದಳು: "ಮುಖ್ಯವಾದ ಸಂಗತಿಯೆಂದರೆ ಭೂಮಿಯ ವಾಯುಗುಣವು ಮನುಷ್ಯರ ಮೇಲೆ ತೀವ್ರವಾದ ಪ್ರಭಾವವನ್ನು ಬೀರುತ್ತದೆ. ಅವರು ಚಳಿ ಮತ್ತು ಬಿಸಿಲನ್ನು ಸಹಿಸಿಕೊಂಡು ಬದುಕಲು ಕಲಿಯುತ್ತಾರೆ. ಅವರ ಜೀವನದ ರೀತಿನೀತಿ, ಆಹಾರದ ಅಭ್ಯಾಸ ಇವುಗಳೆಲ್ಲ ನಿರ್ದಿಷ್ಟ ವಾಯುಗುಣಕ್ಕೆ ತಕ್ಕಂತೆ ಬದಲಾಗುತ್ತವೆ. ಈ ರೀತಿಯ ಹೊಂದಾಣಿಕೆ ಇಲ್ಲದೆ ಬದುಕಲು ಸಾಧ್ಯವಿಲ್ಲ."

"ತಾಯಿಸಸ್ಯದಿಂದ ಬೇರೆಯಾದ ಬೀಜಗಳು, ಹರಡಿಕೊಂಡಾಗ ವಾಯುಗುಣದ ಪರಿಸ್ಥಿತಿಗಳು ಅವುಗಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತವೆ?" ಎಂದು ಮರ ಕಡಿಯುವವನು ಕೇಳಿದ.

"ಈ ಬೀಜಗಳು ವಾಯುಗುಣದ ಬದಲಾವಣೆಗಳಿಂದ ನೇರವಾಗಿ ಪ್ರಭಾವಿತಗೊಳ್ಳದಿದ್ದರೂ ಸಾಮರ್ಥ್ಯವುಳ್ಳ ಜೀವಿಗಳು ಮಾತ್ರ ಬದುಕಿ ಉಳಿಯುತ್ತವೆಂಬ ಪ್ರಕೃತಿಯ ಕಠಿಣ ನಿಯಮಕ್ಕೆ ಬದ್ಧವಾಗಿವೆ. ಯಾವ ಸಂದರ್ಭದಲ್ಲೂ ಪ್ರಕೃತಿಯು ದುರ್ಬಲವಾಗಿರುವ ಬೀಜಗಳನ್ನು ಬದುಕಿ ದ್ವಿಗುಣಗೊಳ್ಳಲು ಬಿಡುವುದಿಲ್ಲ. ದುರ್ಬಲವಾಗಿರುವವು ಬೆಳೆದು ದ್ವಿಗುಣಗೊಂಡರೆ ಈ ಪ್ರಪಂಚದಲ್ಲಿ ಒಳ್ಳೆಯ ಬೀಜಗಳಿಗೆ ಬೆಳೆಯಲು ಸಾಕಷ್ಟು ಸ್ಥಳಾವಕಾಶವಿರುವುದಿಲ್ಲ. ಆದ್ದರಿಂದಲೇ ಪ್ರಕೃತಿ ದುರ್ಬಲವಾದುವನ್ನು ಭೂಮಿಯ ಮೇಲಿನಿಂದ ಅಳಿಸಿಹೋಗುವಂತೆ ನೋಡಿಕೊಳ್ಳುತ್ತದೆ. ಆದ್ದರಿಂದ ಪ್ರಪಂಚ ಬದುಕಿಗೆ ಯೋಗ್ಯವಾದ ಜಾಗವಾಗಿದೆ. ಹೀಗೆ ಈ ಪ್ರಕೃತಿ ನಿಯಮದಂತೆ ಪರಿಸರಕ್ಕೆ ಹೊಂದಿಕೊಳ್ಳುವ ಬೀಜಗಳು ತಮ್ಮ ಬದುಕನ್ನು ಮುಂದುವರೆಸಿ ಗಿಡಗಳಾಗಿ ಬೆಳೆಯುತ್ತವೆ. ಹೊಂದಿಕೊಳ್ಳಲು ಅಸಮರ್ಥವಾಗಿರುವ ಬೀಜಗಳು ನಾಶವಾಗುತ್ತವೆ" ಎಂದು ವನದೇವತೆ ಹೇಳಿದಳು.

ಆಕೆ ಹೇಳುವುದನ್ನು ಮುಂದುವರೆಸಿದಂತೆ ಮರ ಕಡಿಯುವವನು ಹೆಚ್ಚು ಹೆಚ್ಚು ಗೊಂದಲಗೊಂಡಂತೆ ಕಾಣತೊಡಗಿದನು. ಕೊನೆಗೆ ಅವನು ಹೀಗೆ ಹೇಳಿದ : "ನೀನು ಈಗಷ್ಟೇ ವಿವರಿಸಿದ ವಿಷಯವನ್ನು ಸ್ವಲ್ಪವೂ

ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ದಯವಿಟ್ಟು ನನಗೆ ಇನ್ನೂ ಸ್ವಲ್ಪ ಸ್ಪಷ್ಟವಾಗಿ ಹೇಳುವೆಯಾ?".

"ಹಾಗೇ ಆಗಲಿ. ನಾನು ನಿನಗೆ ಒಂದು ಉದಾಹರಣೆಯನ್ನು ನೀಡುತ್ತೇನೆ. ಒಂದು ಮರ ಇದೆ ಎಂದಿಟ್ಟುಕೋ. ಅದರ ಬೀಜಗಳು ಸಾವಿರಗಟ್ಟಲೆ ಇರುತ್ತವೆ. ಅವು ಸರಿಯಾಗಿ ಮರದ ಕೆಳಗೆ ಬೀಳುತ್ತವೆ ಎಂದುಕೋ. ಸಣ್ಣ ಸಣ್ಣ ಗಿಡಗಳು ತಾಯಿಗಿಡದ ಸುತ್ತಲೂ ಚಿಗುರುತ್ತವೆ. ಅವೆಲ್ಲವೂ ಮಣ್ಣಿನ ತೇವಾಂಶವನ್ನು ಮತ್ತು ಜೈವಿಕ ಲವಣಾಂಶಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ಗಿಡಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಪ್ರತಿ ಗಿಡಕ್ಕೂ ಬೇಕಾದ ಪೋಷಕಾಂಶಗಳು ಬಹಳ ಕಡಿಮೆ ಪ್ರಮಾಣದಲ್ಲಿ ಸಿಗುತ್ತವೆ. ಅಲ್ಲದೆ ಅವಕ್ಕೆ ದೊರೆಯುವ ಬಿಸಿಲೂ ಕಡಿಮೆಯೇ ಆಗುತ್ತದೆ. ಆದ್ದರಿಂದ ಅವು ದೊಡ್ಡ ಮರದ ನೆರಳಿನಲ್ಲಿ ಬೆಳೆಯಬೇಕಾಗುತ್ತದೆ. ಈ ಕಾರಣದಿಂದಾಗಿ ಅನಾರೋಗ್ಯಕ್ಕೆ ಈಡಾಗಿ ಚಿಕ್ಕ ಚಿಕ್ಕ ಗಿಡಗಳು ಸಾಯಲೇಬೇಕಾಗುತ್ತದೆ."

"ಇಂಥ ಹೊತ್ತಿನಲ್ಲಿ ತಾಯಿಗಿಡ ಆ ಇಡೀ ನಾಶವನ್ನು ತಡೆಯಲು ಏಕೆ ಏನೂ ಮಾಡುವುದಿಲ್ಲ?" ಎಂದು ಮರ ಕಡಿಯುವವನು ಕೇಳಿದ.

"ಇಲ್ಲ. ತಾಯಿಗಿಡ ಅಸಹಾಯಕವಾಗಿದೆ ಅನ್ನಿಸುತ್ತದೆ."

"ಹಾಗಾದರೆ ಇಂಥ ದುರದೃಷ್ಟಕರ ಪರಿಸ್ಥಿತಿಯನ್ನು ಬದಲಾಯಿಸಲು ಬೀಜವೇ ಏಕೆ ಪ್ರಯತ್ನಿಸಬಾರದು?" ಮರ ಕಡಿಯುವವನು ಒತ್ತು ಕೊಟ್ಟು ಕೇಳಿದ.

"ನಾನು ನಿನಗೆ ಮೊದಲೇ ಹೇಳಿದ ಹಾಗೆ ಮರ ಅಥವಾ ಅದರ ಬೀಜಗಳು ತಮ್ಮಷ್ಟಕ್ಕೆ ತಾವೇ ಯೋಚಿಸಲಾರವು. ಅಥವಾ ಕೆಲಸ ಮಾಡಲಾರವು. ಅದನ್ನು ನೀನು ನೆನಪಿಟ್ಟುಕೊಳ್ಳಬೇಕು" ಎಂದು ವನದೇವತೆ ಹೇಳಿದಳು.

ಮರ ಕಡಿಯುವವನು ಒಂದು ಕ್ಷಣ ಯೋಚಿಸಿದ. ನಂತರ ತನ್ನ ಅಭಿಪ್ರಾಯ ಹೇಳಿದ: "ಬಹುಶಃ ಆ ಹೊತ್ತಿನಲ್ಲಿ ಪರಿಸ್ಥಿತಿಗೆ ಹೊಂದಿಕೆಯಾಗುವಂತೆ ಸ್ವಾಭಾವಿಕವಾಗಿ ಏನಾದರೂ ಬದಲಾವಣೆ ಆಗುತ್ತದೆ ಅಂತ ನನಗೆ ಅನ್ನಿಸುತ್ತದೆ."

"ನೀನು ಹೇಳಿದ್ದು ಸರಿಯಾಗಿದೆ. ಅದರ ಬಗ್ಗೆ ಇನ್ನೂ ಸ್ವಲ್ಪ ವಿವರವಾಗಿ ತಿಳಿಸುವೆನು. ಆದರಿಂದ ನಿನಗೆ ಚೆನ್ನಾಗಿ ಅರ್ಥವಾಗುತ್ತದೆ" ಎಂದು ವನದೇವತೆ ಹೇಳಿದಳು. "ಒಂದು ಮರ ತನ್ನ ಜೀವಿತದ ಅವಧಿಯಲ್ಲಿ ಕೋಟ್ಯಾನುಕೋಟಿ ಬೀಜಗಳನ್ನು ತಯಾರಿಸುತ್ತದೆ. ಆದರೆ ಆ ಎಲ್ಲ ಬೀಜಗಳೂ ಒಂದೇ ರೀತಿ ಇರುವುದಿಲ್ಲ. ಅವು ಎಷ್ಟೇ ಸಣ್ಣವಿದ್ದರೂ ವ್ಯತ್ಯಾಸಗಳನ್ನು ಹೊಂದಿರುತ್ತವೆ."

"ಮನುಷ್ಯರಲ್ಲಿದ್ದ ಹಾಗೆಯೇ ಎಂದು ನನಗೆ ಅನ್ನಿಸುತ್ತದೆ. ಒಬ್ಬ ತಾಯಿಯ ಎಲ್ಲ ಮಕ್ಕಳು ಒಂದೇ ರೀತಿ ಕಾಣುವುದಿಲ್ಲ" ಮರ ಕಡಿಯುವವನು ತನ್ನ ಅಭಿಪ್ರಾಯ ಹೇಳಿದನು.

"ಆದ್ದರಿಂದಲೇ ಕೆಲವು ಬೀಜಗಳು ಒಂದು ನಿರ್ದಿಷ್ಟ ಪರಿಸರಕ್ಕೆ ಹೊಂದಿಕೊಂಡು ಚೆನ್ನಾಗಿ ಬೆಳೆಯುವಂತೆ ಸೃಷ್ಟಿಯಾಗಿರುತ್ತವೆ. ಹೊಂದಾಣಿಕೆ ಮಾಡಿಕೊಳ್ಳಲಾಗದ ಬೀಜಗಳು ನಾಶವಾಗುತ್ತವೆ. ಅಲ್ಲಿಗೆ ಆ ಬೀಜಗಳ ಕತೆ ಮುಗಿಯಿತು. ಈಗ ತಾವು ಬದುಕುಳಿಯಲು ಹುಟ್ಟಿದ ಮೊದಲ ರೀತಿಯ ಬೀಜಗಳ ಬಗ್ಗೆ ತಿಳಿದುಕೊಳ್ಳೋಣ. ತಾಯಿ ಮರದ ಹತ್ತಿರವೇ ಬಿದ್ದು ಅವುಗಳಿಂದ ಹುಟ್ಟಿದ ಸಸ್ಯಗಳು ಸಾಯುತ್ತದ ಎಂದು ನಾವು ತಿಳಿದಿದ್ದೇವೆ. ಆದ್ದರಿಂದ ಸ್ವಾಭಾವಿಕವಾಗಿಯೇ ಅನೇಕ ಮಾರ್ಪಾಟುಗಳು ನಡೆದು ಗಿಡಗಳು ಉಳಿಯಲು ಸಹಾಯವಾಗುತ್ತದೆ."

ಮರ ಕಡಿಯುವವನು ಮೌನವಾಗಿ ತಲೆಯಲ್ಲಾಡಿಸುತ್ತಾ ವನದೇವತೆ ಹೇಳುವುದನ್ನೇ ಆಲಿಸಿ ಕೇಳತೊಡಗಿದ.

“ಉದಾಹರಣೆಗೆ ಬೀಜಗಳು ಮಾರ್ಪಾಟಾಗಿ ಅವುಗಳ ಮೇಲೆ ಪುಕ್ಕಗಳಂಥವು ಬೆಳೆಯಬಹುದು. ಪುಕ್ಕಗಳಂಥ ರಚನೆಯಿಂದಾಗಿ ಬೀಜವನ್ನು ಗಾಳಿಯು ಸುಲಭವಾಗಿ ತಳ್ಳಿಕೊಂಡು ಹೋಗಬಹುದು. ಹೀಗೆ ಬೀಜವು ತಾಯಿಮರದಿಂದ ದೂರಹೋಗಿ ಬೇರೆಲ್ಲಾದರೂ ಬೆಳೆಯತೊಡಗುತ್ತದೆ.”

“ಹೂಂ!” ಮರ ಕಡಿಯುವವನು ಬದುಕುಳಿಯುವ ಬೀಜಗಳ ಬಗೆಗೆ ಇನ್ನೂ ಹೆಚ್ಚು ತಿಳಿಯಲು ಕುತೂಹಲ ತೋರಿದ.

“ಕಾಲಕಳೆದಂತೆ ಈ ಬೀಜ ಬೆಳೆದು ಮರವಾದಾಗ, ಅದರ ಬೀಜಗಳು ರೆಕ್ಕೆಗಳ ರಚನೆಯನ್ನು ಹೊಂದಿರುತ್ತವೆ. ದೊಡ್ಡ ಪುಕ್ಕಗಳನ್ನು ಹೊಂದಿರುವ ಬೀಜಗಳು ಬಹಳ ದೂರ ಚಲಿಸುತ್ತವೆ. ಅದೇ ಕಾರಣದಿಂದ ಚೆನ್ನಾಗಿ ಬದುಕಲು ಉತ್ತಮ ಅವಕಾಶ ಪಡೆಯುತ್ತವೆ. ಮುಂದಿನ ಪೀಳಿಗೆಯ ಮರಗಳು ಇನ್ನೂ ಉತ್ತಮ ಅವಕಾಶ ಪಡೆದು ಬೆಳೆಯುವ ಬೀಜಗಳನ್ನು ತಯಾರಿಸುತ್ತವೆ.”

“ಓಹೋ, ಹಾಗೋ! ಈಗ ಅರ್ಥವಾಯಿತು” ಮರ ಕಡಿಯುವವನು ಹೇಳಿದ. “ತಾಯಿಗಿಡದಿಂದ ದೂರದೂರ ಚಲಿಸಿದ ಬೀಜಗಳು ಬದುಕಿ ಉಳಿಯುವ ಉತ್ತಮ ಅವಕಾಶಗಳನ್ನು ಪಡೆದು ಚೆನ್ನಾಗಿ ಬೆಳೆಯುತ್ತವೆ. ತಾಯಿಗಿಡದ ಹತ್ತಿರವೇ ಬಿದ್ದ ಬೀಜಗಳಿಗೆ ಬದುಕುವ ಅವಕಾಶ ಬಹಳ ಕಡಿಮೆ ಆಗಿ ಅವು ಸಾಯುತ್ತವೆ.”

“ಸಸ್ಯಗಳು ತಮಗೆ ತಾವೇ ಬದಲಾವಣೆಗಳನ್ನು ಕುರಿತು ಚಿಂತಿಸಲಾರವು. ತಮಗೆ ಬೇಕಾದ ಬದಲಾವಣೆ ಮಾಡಿಕೊಳ್ಳಲಾರವು. ಇರುವ ಪರಿಸರಕ್ಕೆ ತಕ್ಕಂತೆ ಸ್ವಾಭಾವಿಕವಾಗಿಯೇ ಅವುಗಳಲ್ಲಿ ಬದಲಾವಣೆಗಳು ಆಗುತ್ತವೆ” ಎಂದು ವನದೇವತೆ ಹೇಳಿದಳು.

“ಆಕಸ್ಮಿಕವಾಗಿ ಮತ್ತು ಪರಿಸ್ಥಿತಿಗೆ ತಕ್ಕಂತೆ ಬೀಜಗಳು ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತವೆ ಎಂದು ವಿವರಿಸಿ ತುಂಬ ಉಪಕಾರ ಮಾಡಿದೆ” ಎಂದು ಮರ ಕಡಿಯುವವನು. ಹೇಳಿದ.

“ಹಾಗಾದರೆ ಬೀಜಗಳು ಪಸರಿಸಿಕೊಳ್ಳಲು ವಿವಿಧ ದಾರಿಗಳನ್ನು ಸೃಷ್ಟಿಸಿಕೊಳ್ಳುವ ಸಾಮರ್ಥ್ಯ ಪಡೆದಿದೆ ಎಂದು ಅರ್ಥವಾಯಿತಲ್ಲವೆ? ಈಗ ನಾವು ಬೀಜವು ಹೇಗೆ ಮೊಳಕೆ ಒಡೆದು, ಬೆಳೆದು ಮರವಾಗುತ್ತದೆ ಎಂದು ನೋಡೋಣ. ಬೆಳೆದ ಮರವು ಹೇಗೆ ಹೂಗಳನ್ನು ಚಿಗುರಿಸಿ, ಹಣ್ಣುಗಳನ್ನು ಬಿಡುತ್ತದೆ ಎಂಬುದನ್ನೂ ತಿಳಿಯೋಣ” ವನದೇವತೆ ಹೇಳಿದಳು.

“ದಯವಿಟ್ಟು ಬೀಜದ ಕತೆಯನ್ನು ಮುಂದುವರೆಸು. ಬೀಜ ಹೇಗೆ ಬೆಳೆಯುತ್ತದೆ ಎಂದು ಹೇಳು. ನಾನು ಕೇಳಲು ತಯಾರಾಗಿದ್ದೇನೆ. ಈ ಕತೆ ತುಂಬ ಮೋಹಕವಾಗಿದೆ” ಎಂದು ಮರ ಕಡಿಯುವವನು ಹೇಳಿದನು.

# ೮

“ಬೀಜ ಯಾವಾಗ ನೀರಿನ ಜೊತೆ ಸಂಬಂಧ ಬೆಳೆಸುವುದೋ ಆಗ ಅದು ಮೇಲಕ್ಕೆದ್ದು ಮೊಳಕೆ ಒಡೆಯುತ್ತದೆ. ಮೊಳಕೆ ಒಡೆದ ಕಾಳಿಗೆ ಬೇರು ಬಿಡಲು ಮಣ್ಣು ಬೇಕು. ಅದಾದ ನಂತರ, ಬೆಳೆದು ದೊಡ್ಡದಾಗಲು ಸೂರ್ಯನ ಬೆಳಕು ಮತ್ತು ಗಾಳಿ ಬೇಕೇ ಬೇಕು. ಆದ್ದರಿಂದ ಈ ಎಲ್ಲ ನಾಲ್ಕು ವಸ್ತುಗಳು ಒಟ್ಟಿಗೆ ಸಿದ್ಧವಾಗಿ ಸಿಕ್ಕರೆ ಬೀಜ ಮೊಳಕೆ ಒಡೆಯಲು ಸಾಧ್ಯವಾಗುತ್ತದೆ ಮತ್ತು ಬೇರು ಬಿಟ್ಟು ಬೆಳೆಯುತ್ತದೆ” ವನದೇವತೆ ಹೇಳಿದಳು.

“ಹೂಂ! ಇವು ನಾಲ್ಕು ಪ್ರಮುಖ ವಸ್ತುಗಳು” ಮರಕಡಿಯುವವನು ಗೊಣಗಿದ ಮತ್ತು ಮನಸ್ಸಿನಲ್ಲೇ ಆ ಹೆಸರುಗಳನ್ನು ಹೇಳಿಕೊಂಡ.

“ಇಲ್ಲವಾದಲ್ಲಿ ಬೀಜ ಒಂದು ಗಿಡವಾಗಿ ಬೆಳೆದು ವೃದ್ಧಿಸುವುದಿಲ್ಲ. ಹೀಗಾಗಿ, ತಾಯಿಗಿಡ ಅಂತಹ ಅಸಂಖ್ಯಾತ ಬೀಜಗಳನ್ನು ತಯಾರಿಸುವಂತೆ ಪ್ರಕೃತಿ ಮಾತೆ ಪ್ರೇರೇಪಿಸುತ್ತಾಳೆ. ಅವುಗಳಲ್ಲಿ ಅನೇಕ ಬೀಜಗಳು ಒಂದಲ್ಲ ಒಂದು ರೀತಿಯಲ್ಲಿ ನಾಶವಾಗುತ್ತವೆ. ಯಾಕೆಂದರೆ ಅವುಗಳಿಗೆ ಮೇಲೆ ಹೇಳಿದ ವಸ್ತುಗಳಲ್ಲಿ ಒಂದಲ್ಲ ಒಂದರ ಕೊರತೆಯುಂಟಾಗುತ್ತದೆ. ಅಷ್ಟಾದರೂ, ಕೊನೆಯಲ್ಲಿ ಒಂದು ಕೈ ಹಿಡಿಯಷ್ಟು ಬೀಜಗಳು ಮೊಳಕೆ ಒಡೆಯುತ್ತವೆ. ಅವು ಪರಿಸರಕ್ಕೆ ಹೊಂದಿಕೊಂಡು ಚೆನ್ನಾಗಿ ಬೆಳೆಯುತ್ತವೆ. ಅವುಗಳು ಮತ್ತೆ ತಮ್ಮ ಸರದಿಯಂತೆ ವಿಪುಲ ಬೀಜಗಳನ್ನು ಬಿಡುತ್ತವೆ. ಮತ್ತೆ ಅವುಗಳಲ್ಲಿ ಕೆಲವು ಮಾತ್ರ ತಮ್ಮ ಸಂತತಿಯನ್ನು ಬೆಳೆಸುವ ಸಾಮರ್ಥ್ಯ ಪಡೆದಿರುತ್ತವೆ.”

“ಗಿಡಗಳು ಹೀಗೆ ವಿಪುಲವಾಗಿ ಬೀಜಗಳನ್ನು ಬಿಡುವುದರಲ್ಲಿ ಆಶ್ಚರ್ಯವೇನಿಲ್ಲ” ಮರಕಡಿಯುವವನು ತನ್ನ ಅಭಿಪ್ರಾಯ ಸೇರಿಸಿದನು.

“ಇದು ಸಂತತಿಗಳನ್ನು ಕಾಪಾಡಲು ಪ್ರಕೃತಿ ಮಾಡಿಕೊಟ್ಟ ದಾರಿ. ಅಷ್ಟೊಂದು ಬೀಜಗಳಲ್ಲಿ ಕೆಲವು ಮಾತ್ರ ಒಳ್ಳೆಯ ಅವಕಾಶ ಪಡೆದು ಚೆನ್ನಾಗಿ ಬೆಳೆಯುತ್ತವೆ” ಎಂದು ವನದೇವತೆ ವಿವರಿಸಿದಳು. “ಇನ್ನು ಮುಂದೆ ಬೀಜ ಪರಿಸರದ ಎಲ್ಲ ಅವಕಾಶಗಳನ್ನು ಪಡೆದು ತಾನೇ ಹೇಗೆ ಬೆಳೆಯುವುದು ಎಂಬುದು ಆಸಕ್ತಿಯ ಕತೆ.”

“ಓಹೋ! ಅದರ ಬಗ್ಗೆ ದಯವಿಟ್ಟು ನನಗೆ ಹೇಳು” ಎನ್ನುತ್ತಾ ಮರಕಡಿಯುವವನು ಉತ್ಸಾಹ ತೋರಿದ.



ವನದೇವತೆ ಮುಂದುವರಿಸಿದಳು, "ಬೀಜ ತೇವಗೊಂಡ ನೆಲವನ್ನು ಪ್ರವೇಶಮಾಡಿ ಅದರಲ್ಲಿನ ತೇವಾಂಶವನ್ನು ಹೀರತೊಡಗುತ್ತದೆ. ಅದುವರೆಗೂ, ಶಾಂತವಾಗಿ ಮಲಗಿದ್ದ ಮರಿಸಸ್ಯ ಮಣ್ಣಿನ ತೇವಾಂಶದಲ್ಲಿ ಮೇಲೇಳುತ್ತದೆ. ಅದಕ್ಕೆ ತಕ್ಷಣವೆ ಆಹಾರ ಬೇಕಾಗುತ್ತದೆ. ಆದರೆ, ಬೀಜ ತನ್ನಲ್ಲೆ ಆಹಾರದ ಚೀಲವನ್ನು ಹೊಂದಿರುವುದರಿಂದ ಕಷ್ಟವೇನೂ ಆಗುವುದಿಲ್ಲ. ಆದರೂ ಆ ಆಹಾರ ಒಣಗಿ, ಮರಿಸಸ್ಯ ತಿನ್ನಲಾರದಷ್ಟು ಗಟ್ಟಿಯಾಗಿರುತ್ತದೆ. ಬಹಳ ಕಾಲ ಬಾಳಿಕೆ ಬರಲೆಂದೇ ಅದರ ಕವಚ ಉದ್ದೇಶಪೂರ್ವಕವಾಗಿ ಗಟ್ಟಿಯಾಗಿ ರಚಿತವಾಗಿದೆ. ಈಗ ಬೀಜದೊಳಗಿನ ಆಹಾರವು ಮರಿಸಸ್ಯ ತಿನ್ನಲು ಯೋಗ್ಯವಾಗುವಂತೆ ಮಾಡಬೇಕು. ಒಳಹೊಕ್ಕ ನೀರು ಈ ಕೆಲಸವನ್ನು ಮಾಡುತ್ತದೆ."

"ನನಗೆ ತಿಳಿಯಿತು. ನೀರು ಬೀಜದೊಳಗಿನ ಆಹಾರವನ್ನು ತೇವದಿಂದ ಮೃದುಗೊಳಿಸಿ ಮರಿಸಸ್ಯಕ್ಕೆ ತಿನ್ನಲು ಅನುವುಮಾಡಿಕೊಡುತ್ತದೆ" ಎಂದು ಮರ ಕಡಿಯುವವನು ತನ್ನ ಮಾತು ಸೇರಿಸಿದ.

"ಅಲ್ಲ. ಆಹಾರವನ್ನು ಬರೀ ಹಸಿಮಾಡಿ ಮೃದುಗೊಳಿಸಿದರೆ ಸಾಲದು. ಆಗಲೂ ಮರಿಸಸ್ಯಕ್ಕೆ ತಿನ್ನಲಾಗುವುದಿಲ್ಲ. ಬೀಜದ ಆಹಾರದಲ್ಲಿ ಕೆಲವು ನಿರ್ದಿಷ್ಟ ಕಿಣ್ವಗಳಿರುತ್ತವೆ. ಅವು ತೇವಗೊಂಡಾಗ ಕೆಲಸ ಪ್ರಾರಂಭಿಸುತ್ತವೆ.

"ಅವುಗಳ ಮುಖ್ಯ ಕೆಲಸ ಆಹಾರವನ್ನು ಉತ್ಪಾದನಾ ಘಟಕಗಳನ್ನಾಗಿ ರೂಪಾಂತರಿಸುವುದು. ಆಗ ಆಹಾರವನ್ನು ಮರಿಸಸ್ಯ ಸುಲಭವಾಗಿ ಜೀರ್ಣಿಸಿಕೊಳ್ಳುತ್ತದೆ. ಉದಾಹರಣೆಗೆ ಆಹಾರದ ಚೀಲಗಳಲ್ಲಿ ಶರ್ಕರ ಪಿಷ್ಟಾದಿಗಳು ಇದ್ದು ಈ ಕಿಣ್ವಗಳಿಂದ ಸುಲಭವಾಗಿ ರೂಪಾಂತರ ಹೊಂದಿ ಸಕ್ಕರೆ ಆಗುತ್ತವೆ. ಅದು ಸುಲಭವಾಗಿ ನೀರಲ್ಲಿ ಕರಗಲು ಸಿದ್ಧವಾಗುತ್ತದೆ. ಅದೇ ರೀತಿ ಪ್ರೊಟೀನುಗಳು ಮತ್ತು ಕೊಬ್ಬುಗಳು ಕೂಡ ರೂಪಾಂತರ ಹೊಂದಿ ಸುಲಭವಾಗಿ ಜೀರ್ಣವಾಗುವ ವಸ್ತುಗಳಾಗುತ್ತವೆ. ಮರಿಸಸ್ಯ ಅದನ್ನು ತಿನ್ನತೊಡಗಿದಾಗ ಬೇರು ಬಿಟ್ಟು ಕಾಂಡ ಮತ್ತು ಎಲೆಯಾಗಿ ಬೆಳೆಯುತ್ತದೆ. ಗಿಡದ ಮೊದಲ ಭಾಗ ಬೇರಿನ ಆಕಾರ ತಳೆಯುತ್ತದೆ. ಮಣ್ಣಿನೊಳಗೆ ಬಲವಾಗಿ ಊರಿಕೊಳ್ಳುತ್ತದೆ. ನಂತರ ಕಾಂಡ ಮೇಲೇಳುತ್ತದೆ. ಕೊನೆಯಲ್ಲಿ ಎಲೆಗಳು ಆಕಾರಪಡೆಯುತ್ತವೆ" ವನದೇವತೆ ಹೇಳಿದಳು.

"ಈ ಕಿಣ್ವಗಳ ಬಗ್ಗೆ ಎಂದೂ ಮೊದಲು ಕೇಳಿರಲಿಲ್ಲ. ಅವು ಪ್ರೊಟೀನುಗಳು, ಶರ್ಕರ ಪಿಷ್ಟಾದಿಗಳು ಮತ್ತು ಕೊಬ್ಬುಗಳನ್ನು ಸುಲಭವಾಗಿ ಜೀರ್ಣವಾಗುವ ಹಾಗೆ ಪರಿವರ್ತಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ತಿಳಿಯಿತು. ಅಲ್ಲದೆ ಮರಿಸಸ್ಯವು ಅವುಗಳನ್ನು ತಿಂದು ಬೆಳೆಯಲು ಸಹಾಯ ಮಾಡುತ್ತದೆ ಎಂದು ಕಾಣುತ್ತೆ" ಎಂದು ಮರಕಡಿಯುವವನು ಹೇಳಿದ.

"ನೀನು ಸರಿಯಾಗಿ ಹೇಳಿದೆ. ಆದರೆ ಇದು ಬರೀ ಹೊಟ್ಟೆಯಲ್ಲಿದ್ದ ಮಗುವಿಗೆ ಗಮನಕೊಟ್ಟಂತೆ. ಮಗುವಿಗಾಗಿ ಶೇಖರಿಸಿಟ್ಟ ಆಹಾರದ ಪೊಟ್ಟಣ ಬಹಳ ಕಾಲ ಬರುವುದಿಲ್ಲ. ಅದು ತನ್ನಷ್ಟಕ್ಕೆ ತಾನೇ ತನ್ನ ಆಹಾರ ಸಿಗುವ ಪದಾರ್ಥಗಳನ್ನು ಸಂಗ್ರಹಿಸಲು ಕಲಿಯಬೇಕಾಗುತ್ತದೆ. ಆದ್ದರಿಂದ ಅದು ತನ್ನ ಬೇರನ್ನು ಆದಷ್ಟು ಬೇಗ ಮಣ್ಣಿನ ಆಳಕ್ಕೆ ಇಳಿಯುವಂತೆ ಮಾಡುತ್ತದೆ. ಹಾಗೇ ಮಣ್ಣಿನಲ್ಲಿರುವ ತೇವ ಮತ್ತು ಲವಣಗಳನ್ನು ಸಂಗ್ರಹಿಸತೊಡಗುತ್ತದೆ. ಅದೇ ವೇಳೆಗೆ ಮರ ಚಿಗುರೊಡೆಯಲು ಪ್ರಾರಂಭಿಸಿ ಕೊನೆಯಲ್ಲಿ ಎಲೆಗಳು ಕಾಣಿಸತೊಡಗುತ್ತವೆ. ಎಲೆಗಳು ಸೂರ್ಯನ ಬೆಳಕಿಗೆ ತಲೆ ಎತ್ತುತ್ತವೆ."

"ಏನು? ಹಾಗಾದರೆ ಬೇರು ಮಣ್ಣಿನಿಂದ ನೀರು ಮತ್ತು ಲವಣಗಳನ್ನು ಮಾತ್ರ ಹೀರಿಕೊಳ್ಳುತ್ತದೆಂದು ಕಾಣುತ್ತದೆ. ಹೀಗಿರುವಾಗ ಸಸ್ಯ ತನ್ನ ಪೌಷ್ಟಿಕಾಂಶಗಳನ್ನು ಎಲ್ಲಿಂದ ಪಡೆಯುತ್ತದೆ?" ಎಂದು

ಮರಕಡಿಯುವವನು ಆಸಕ್ತಿಯಿಂದ ಕೇಳಿದ.

"ಸಂಕ್ಷಿಪ್ತವಾಗಿ ಹೇಳುವುದಾದರೆ, ನೀರು ಮತ್ತು ಲವಣಗಳು ನೆಲದಿಂದ ದೊರೆತರೂ, ಗಿಡಕ್ಕೆ ಬೇಕಾದ ಪೌಷ್ಟಿಕಾಂಶಗಳು ಸಿಗುವುದಿಲ್ಲ. ಆದರೂ ಇವೆಲ್ಲ ಗಿಡದ ಆಹಾರಕ್ಕೆ ಮೂಲಭೂತ ಘಟಕಗಳಾಗಿವೆ. ಮೂರನೆಯದಾಗಿ ಗಿಡ ತನ್ನ ಸುತ್ತಲೂ ಇರುವ ಗಾಳಿಯಿಂದ ತೆಗೆದುಕೊಳ್ಳುವ ಇಂಗಾಲದ ಡೈಆಕ್ಸೈಡ್ ಆಗಿದೆ. ಇವುಗಳೆಲ್ಲವೂ ಸೂರ್ಯನ ಬೆಳಕಲ್ಲಿ ರುಚಿಭರಿತ ಆಹಾರವಾಗಿ ಪರಿವರ್ತನೆಗೊಳ್ಳುತ್ತದೆ" ಎಂದು ವನದೇವತೆ ವಿವರಿಸಿದಳು.

"ಹಾಗಾದರೆ ಅದರ ಕೆಲಸದಲ್ಲಿ ಏನೋ ಮಾಂತ್ರಿಕತೆ ಇರುವ ಹಾಗೆ ಕಾಣುತ್ತದೆ" ಎಂದು ದಿಗ್ಮೂಢನಂತೆ ಮರ ಕಡಿಯುವವನು ಕೇಳಿದ, "ದಯವಿಟ್ಟು, ಈ ಎಲ್ಲ ಮೂಲಭೂತ ಘಟಕಗಳಿಂದ ಅಷ್ಟು ರುಚಿಯಾದ ಆಹಾರವನ್ನು ಸಸ್ಯ ಹೇಗೆ ತಯಾರಿಸಿಕೊಳ್ಳುವುದು ಎಂದು ಹೇಳು."

"ಮಾಂತ್ರಿಕತೆ ಎಂದು ಅದನ್ನು ಕರೆಯುವುದರಲ್ಲಿ ತಪ್ಪೇನೂ ಇಲ್ಲ. ಗಿಡ, ನೀರು, ಲವಣಗಳು ಮತ್ತು ಜಲಜನಕ ಅಥವ ಇಂಗಾಲದ ಡೈಆಕ್ಸೈಡನ್ನು ಬಳಸಿಕೊಂಡು ರಸಭರಿತ ಹಣ್ಣುಗಳನ್ನು, ಪುಷ್ಟಿಕರ ತರಕಾರಿಗಳನ್ನು ತಯಾರಿಸುತ್ತದೆ ಎನ್ನುವುದು ನಿಜಕ್ಕೂ ಆಶ್ಚರ್ಯಕರವಾಗಿದೆ. ಆದರೆ ಈ ಕೆಲಸವನ್ನು ವಿವರವಾಗಿ ತಿಳಿಯಲು ನಾವು ಮೊದಲಿನಿಂದ ಪ್ರಾರಂಭಿಸೋಣ."

"ನೀನು ಹೇಗೆ ಹೇಳಿದರೂ ನಾನು ಕೇಳಲು ತಯಾರಾಗಿದ್ದೇನೆ" ಎಂದು ಮರಕಡಿಯುವವನು ಆಸಕ್ತಿ ವ್ಯಕ್ತಪಡಿಸಿದನು. ಹೀಗೆ ವನದೇವತೆ ಬೇರಿನ ಕತೆಯನ್ನು ಶುರು ಮಾಡಿದಳು.

# ೬

“ನಾನು ಮೊಳಕೆ ಕಾಳಿನಿಂದ ಪ್ರಾರಂಭಿಸುತ್ತೇನೆ. ಇದೂವರೆಗೂ ಮಲಗಿದ್ದ ಬೀಜ ಮಣ್ಣಿನ ತೇವದಲ್ಲಿ ಎದ್ದು ಮೊಳಕೆ ಒಡೆಯುತ್ತದೆ. ಮೊದಲು ಚಿಗುರುವುದು ಬೇರು, ಕಾಂಡವಲ್ಲ. ಅದೇ ಯಾಕೆ ಮೊದಲು ರೂಪತಾಳುತ್ತದೆ ಎಂದು ನಿನಗೆ ಗೊತ್ತಿದೆಯಲ್ಲ”

“ಇಲ್ಲ ನನಗೆ ಗೊತ್ತಿಲ್ಲ”

“ಪ್ರತಿಯೊಂದು ಗಿಡಕ್ಕೂ ಮಣ್ಣಿನಲ್ಲಿ ಎದ್ದು ನಿಲ್ಲಲು ಬೇರು ಮಾತ್ರ ಸಹಾಯ ಮಾಡುತ್ತದೆ. ಅಲ್ಲದೆ, ಗಿಡ ಬೆಳೆಯಲು ಸದಾ ನೀರಿನ ಸರಬರಾಜು ಇರಬೇಕು. ಗಿಡ ನೀರನ್ನು ಪಡೆಯಲು ಬೇರು ಸಹಾಯ ಮಾಡುತ್ತದೆ. ಆದ್ದರಿಂದ ಬೇರು ಮೊದಲು ಚಿಗುರುವುದು ಅವಶ್ಯಕವಾಗಿರುತ್ತದೆ. ಈಗ ನಾನು ಬೇರಿನ ರಚನೆ, ಅದರ ಕಾರ್ಯದ ಬಗ್ಗೆ ನಿನಗೆ ವಿವರಿಸುತ್ತೇನೆ.”

ಮರ ಕಡಿಯುವವನು ಗಮನಕೊಟ್ಟು ಕೇಳತೊಡಗಿದ.

“ಬೀಜದಿಂದ ಹೊರಬಂದ ಬೇರು ಬಹಳ ಸೂಕ್ಷ್ಮವಾಗಿರುತ್ತದೆ. ಅದು ಹೇಗಾದರೂ ಕಲ್ಲು ಮತ್ತು ಒರಟಾದ ಮರಳಿನ ಕಣಗಳ ಮೂಲಕ ನೆಲದಲ್ಲಿ ತನ್ನ ದಾರಿ ಹುಡುಕಿಕೊಳ್ಳಬೇಕಾಗುತ್ತದೆ. ಆಗ ಬೀಜಕ್ಕೆ ಕೆಲವು ರೀತಿಯ ರಕ್ಷಣೆ ಬೇಕಾಗುತ್ತದೆ. ದನಗಳು ತಮ್ಮ ಅಂಗಾಲವನ್ನು ರಕ್ಷಿಸಿಕೊಳ್ಳಲು ಲಾಳ ಅಥವಾ ಗೊರಸನ್ನು ಹೊಂದಿವೆ. ಮನುಷ್ಯರಿಗೆ ಅಂತಹ ರಕ್ಷಣೆ ಇರುವುದಿಲ್ಲ. ನೀನು ಕಲ್ಲು, ಮುಳ್ಳಿನ ಮೇಲೆ ನಡೆಯುವಾಗ ನಿನ್ನ ಪಾದಗಳನ್ನು ಹೇಗೆ ಕಾಪಾಡಿಕೊಳ್ಳುವೆ?” ವನದೇವತೆ ಕೇಳಿದ ಈ ಪ್ರಶ್ನೆಗೆ, ಮರ ಕಡಿಯುವವನು, “ನಾವು ಚರ್ಮದ ಚಪ್ಪಲಿಗಳನ್ನು ಧರಿಸುತ್ತೇವೆ” ಎಂದು ಉತ್ತರಿಸಿದನು.

“ಬೇರು ಕೂಡ, ತನ್ನ ತುದಿಯಲ್ಲಿ ಒರಟಾದ ಕವಚವನ್ನು ಹೊಂದಿದೆ. ಅದನ್ನು ಬೇರಿನ ಟೋಪಿ ಎಂದು ಕರೆಯುತ್ತಾರೆ. ಯಾಕೆಂದರೆ, ಅದರ ದಾರಿ ಸುಗಮವಾಗಿಲ್ಲ. ಕಷ್ಟಕರವಾದ ಕಲ್ಲು ಮಣ್ಣಿನೊಳಗೆ ತನ್ನ ದಾರಿಯನ್ನು ಹುಡುಕಿಕೊಳ್ಳಬೇಕು. ಹೀಗಾಗಿ ಬೇರಿನ ಟೋಪಿ ಜಿಗುಟಾಗಿ ಮತ್ತು ಒರಟಾಗಿ ಇರುತ್ತದೆ. ಅದು ಸುಲಭವಾಗಿ ಕಳಚಿಕೊಳ್ಳುವುದಿಲ್ಲ. ಹಾಗೆ ಒಂದು ಪಕ್ಷ ಅದು ಕಾಲಕಳೆದಂತೆ ಸವೆದರೆ ಇನ್ನೊಂದು ಹುಟ್ಟಿಕೊಳ್ಳುತ್ತದೆ. ಹೀಗೆ, ಸೂಕ್ಷ್ಮವಾದ ಬೇರಿನ ಕೂದಲುಗಳು ತನ್ನದೇ ಆದ ರಕ್ಷಣಾವಿಧಾನ ಹೊಂದಿವೆ.”

ಬೇರು ತನ್ನ ರಕ್ಷಣೆಯನ್ನು ಎಂತಹ ವಿಚಿತ್ರವಾದ ರೀತಿಯಲ್ಲಿ ಮಾಡಿಕೊಳ್ಳುತ್ತದೆ. ಎಂದು ಮರಕಡಿಯುವವನು ಹೇಳಿದನು.

"ಬೇರಿನ ಟೋಪಿಯ ಮೇಲೆ ನವಿರಾದ ಕೂದಲುಗಳಿರುತ್ತವೆ. ಅವು ತೇವ ಹೀರಿಕೊಳ್ಳಲು ಸಹಾಯ ಮಾಡುತ್ತವೆ."

"ಬೇರಿನ ಕೂದಲ ಕೆಲಸದ ಬಗ್ಗೆ ನಾನು ಹಾಗೆ ಎಣಿಸಿದ್ದೆ" ಎಂದು ಮರಕಡಿಯುವವನು ಹೇಳಿದ.

"ಅದಕ್ಕೆ ಇನ್ನೊಂದು ದಾರಿ ಇದೆ. ಬೇರುಗಳು ನೀರು ಹೀರಿಕೊಳ್ಳುವ ಬದಲು, ಮಣ್ಣಿನಲ್ಲಿರುವ ನೀರು ತನಗೆ ತಾನೇ ಬೇರಿನ ಕೂದಲುಗಳ ಮೂಲಕ ಹರಿಯುತ್ತದೆ."

"ಬೇರಿನ ಕೂದಲುಗಳೇ ಮಣ್ಣಿನಿಂದ ನೀರನ್ನು ಹೀರಿಕೊಳ್ಳುತ್ತವೆ ಎಂದು ನನಗೆ ಅನಿಸುವುದು" ಸ್ವಲ್ಪ ಗೊಂದಲದಲ್ಲಿ ಅವನು ಹೇಳಿದ.

"ನೀರು ಬೇರುಗಳೊಳಗೆ ಹೇಗೆ ಹರಿಯುತ್ತದೆಂದು ನಾನು ನಿನಗೆ ವಿವರಿಸುತ್ತೇನೆ. ಪ್ರಕೃತಿಯ ದಾರಿಗಳು ಮನುಷ್ಯರಿಗೆ ವಿಚಿತ್ರವಾಗಿ ಕಾಣುತ್ತವೆ. ನೀರಿನ ವಿಶಿಷ್ಟಗುಣ ತನ್ನಷ್ಟಕ್ಕೆ ಹರಿಯುವುದು. ನೀರು ಯಾವಾಗಲೂ ಎತ್ತರದ ಜಾಗದಿಂದ ತಗ್ಗಿನ ಕಡೆ ಹರಿಯುವುದು. ಆ ವಿಷಯ ನಿನಗೆ ತಿಳಿದೇ ಇದೆ."

"ಹೌದು, ನನಗೆ ಅದು ಗೊತ್ತು"

"ನೀರಿನಲ್ಲಿ ಲವಣಗಳು ಮತ್ತು ಖನಿಜಗಳು ಕರಗಿದ್ದರೂ ಕೂಡ, ಅದರ ಗುಣ ವಿಶೇಷ ಒಂದೇ ಆಗಿ ಕಾಣುತ್ತದೆ. ಲವಣದಿಂದ ನೀರು ಘನರೂಪ ಹೊಂದಿದ್ದರೆ, ಕರಗಿದ ಲವಣ ನೀರಿಗೆ ಬೇರೊಂದು ಗುಣವನ್ನು ಸೇರಿಸಿರುತ್ತದೆ. ಅದರಿಂದಾಗಿ ಅದು ಘನರೂಪವನ್ನು ದುರ್ಬಲಗೊಳಿಸಿಕೊಳ್ಳುತ್ತದೆ. ಆಗ ಕಡಿಮೆ ಘನರೂಪದ ನೀರು ಯಾವಾಗಲೂ ಹೆಚ್ಚು ಘನರೂಪದ ನೀರಿನ ಕಡೆಗೆ ಹರಿಯುತ್ತದೆಯೇ ವಿನಃ ಅದರ ವಿರುದ್ಧವಲ್ಲ."

"ಓಹೋ! ನೀರು ಎತ್ತರದ ಜಾಗದಿಂದ ತಗ್ಗಿನ ಕಡೆ ಯಾಕೆ ಹರಿಯುವುದು ಎಂದು ನನಗೀಗ ತಿಳಿಯಿತು. ನೀರಿನಲ್ಲಿ ಲವಣಗಳು ಬೇರೆ ಬೇರೆ ಪ್ರಮಾಣದಲ್ಲಿ ಕರಗಿದ್ದಾಗ ಮಾತ್ರ ಅದು ಕಡಿಮೆ ಘನರೂಪದಿಂದ ಹೆಚ್ಚು ಘನರೂಪದೆಡೆಗೆ ಹರಿಯುತ್ತದೆ" ಮರ ಕಡಿಯುವವನು ನೀರಿನ ಹೊಸ ಗುಣವನ್ನು ಅರ್ಥಮಾಡಿ ಕೊಂಡವನಂತೆ ತನಗೆ ತಾನೇ ಹೇಳಿಕೊಂಡ. ವನದೇವತೆ ಮಾತು ಮುಂದುವರೆಸಿದಳು:

"ಬೇರಿನ ಕೂದಲುಗಳಲ್ಲಿರುವ ದ್ರವ, ಜೈವಿಕ ಲವಣಗಳಿಂದಾಗಿ ಘನರೂಪದಿಂದ ಇರುತ್ತದೆ. ಆದರೆ ಒಳಪದರದ ಮಣ್ಣಿನ ನೀರು ಬಹಳ ಕಡಿಮೆ ಪ್ರಮಾಣದಲ್ಲಿ ಕರಗಿದ ಲವಣಗಳನ್ನು ಹೊಂದಿರುತ್ತದೆ. ಆದ್ದರಿಂದ ನೀರು ಸುಲಭವಾಗಿ ಮಣ್ಣಿನಿಂದ ಬೇರಿನ ಅಂಗಾಂಶಗಳ ಮೂಲಕ ಹರಿಯುತ್ತದೆ."

"ಆದ್ದರಿಂದ ಬೇರು ಮಣ್ಣಿನ ನೀರನ್ನು ಹೀರಿಕೊಂಡು ಸಂಗ್ರಹಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ನೀರು ತನ್ನಷ್ಟಕ್ಕೆ ತಾನೇ ಬೇರಿನೊಳಕ್ಕೆ ಹರಿಯುತ್ತದೆ. ಪ್ರಕೃತಿಯ ವಿಧಾನಗಳು ನಿಜಕ್ಕೂ ವಿಚಿತ್ರವಾಗಿವೆ" ಎಂದು ಮರ ಕಡಿಯುವವನು ಹೇಳಿದ.

"ವಿವಿಧ ಗಿಡಗಳು ವಿವಿಧ ರೀತಿಯ ಬೇರುಗಳನ್ನು ಹೊಂದಿವೆ. ಅವುಗಳ ರಚನೆ ಗಿಡಗಳ ಅವಶ್ಯಕತೆ ಪೂರೈಸಲು ಅನುಕೂಲವಾಗುವಂತಿರುತ್ತದೆ. ಪೊದೆ, ಬಳ್ಳಿ, ಸಣ್ಣ ಮತ್ತು ದೊಡ್ಡ ಗಿಡಗಳೆಲ್ಲವೂ ಬೇರೆ ಬೇರೆ ರೀತಿಯ ಬೇರುಗಳನ್ನು ಹೊಂದಿವೆ" ಎಂದು ವನದೇವತೆ ಹೇಳಿದಳು.

"ನಿಜವಾಗಲೂ?" ಮರಕಡಿಯುವವನು ಅತ್ಯಂತ ಆಶ್ಚರ್ಯ ವ್ಯಕ್ತಪಡಿಸಿದ.

"ನೀನು ನಿನ್ನ ಇದುವರೆಗಿನ ಜೀವನದಲ್ಲಿ ನೂರಾರು ಮರಗಳನ್ನು ಕಡಿದುರುಳಿಸಿರುವೆ. ಆ ಕಡಿದ ಮರದ ಬೇರುಗಳನ್ನು ಎಂದೂ ಗಮನಿಸಲಿಲ್ಲವೇ?" ವನದೇವತೆ ಕೇಳಿದಳು.

"ಮರಕಡಿಯುವವರು ಸಾಮಾನ್ಯವಾಗಿ ಮಣ್ಣಿನಿಂದ ಸ್ವಲ್ಪಭಾಗ ಬಿಟ್ಟು ಮೇಲಿನ ಉಳಿದ ಭಾಗವನ್ನು

ಮಾತ್ರ ಕಡಿಯುವರು. ಏಕೆಂದರೆ ಮಣ್ಣಿನ ಆಳದಲ್ಲಿ ಹೂತು ಹೋದ ಬೇರುಗಳನ್ನು ತೋಡಿ ತೆಗೆಯುವುದು ಅಷ್ಟು ಸುಲಭವಲ್ಲ. ಆದ್ದರಿಂದ ನಾವು ಅವುಗಳನ್ನು ತೋಡುವುದಿಲ್ಲ" ಎಂದು ಮರ ಕಡಿಯುವವನು ವಿವರಿಸಿದ.

"ಹ್ಞೂಂ! ಮರಗಳನ್ನು ನಾಶಮಾಡುವುದರಲ್ಲೇ ಆಸಕ್ತಿ ತಳೆದಿರುವ ನೀನು ಬೇರುಗಳ ಆಕಾರ ಮತ್ತು ರಚನೆಯ ಬಗ್ಗೆ ಏಕೆ ಚಿಂತೆಮಾಡುವೆ? ಆದರೆ ಈಗ ನಿನಗೆ ಮರಗಳ ಬಗ್ಗೆ ಆಸಕ್ತಿ ಬಂದಿರುವುದರಿಂದ ನಾನು ಹೇಳುವುದನ್ನು ಸರಿಯಾಗಿ ಕೇಳಿಸಿಕೊಳ್ಳಬಹುದು."

"ಹೌದು, ಹೌದು. ದಯವಿಟ್ಟು ನನಗೆ ಹೇಳು" ಮರ ಕಡಿಯುವವನು ಹೇಳಿದ.

"ಭತ್ತ, ಗೋಧಿ, ಮೆಕ್ಕೆಜೋಳದಂತಹ ಸಸ್ಯಗಳು ವಾರ್ಷಿಕ ಬೆಳೆಗಳಾಗಿವೆ. ಆದ್ದರಿಂದ ಅವು ಸಣ್ಣ ಗಿಡಗಳಾಗಿವೆ. ತೇಗ, ಹುಣಸೆಮರ ಮತ್ತು ಮಾವಿನಮರಗಳು ಬಹುಕಾಲ ಬಾಳುವ ಮರಗಳಾಗಿವೆ. ಅವು ಅನೇಕ ವರ್ಷ ಬದುಕುತ್ತವೆ. ಆದ್ದರಿಂದ ಅವು ಬಲವಾದ ಮತ್ತು ದೊಡ್ಡ ಮರಗಳಾಗಿವೆ. ಈ ಎರಡು ಸಸ್ಯಗಳ ಬೇರುಗಳು ಬೇರೆ ಬೇರೆ ಆಗಿರುತ್ತವೆ.

ಮೊದಲನೆಯದು ಮನುಷ್ಯನ ಕೂದಲಿನ ಹಾಗೆ ಗೊಂಚಲು ಬೇರುಗಳನ್ನು ಹೊಂದಿರುತ್ತದೆ. ಅವುಗಳನ್ನು ಸಣ್ಣ ನಾರುಗಳ ಬೇರುಗಳೆಂದು ಕರೆಯುತ್ತಾರೆ. ಅವು ಕಾಂಡದಿಂದ ನೇರವಾಗಿ ಮಣ್ಣಿನ ಎಲ್ಲ ದಿಕ್ಕುಗಳಲ್ಲಿ ಹರಡಿಕೊಳ್ಳುತ್ತವೆ. ಇವು ಮಣ್ಣಿನಲ್ಲಿ ಅಡಗಿರುವ ನೀರನ್ನು ವೇಗವಾಗಿ ಹೀರಿಕೊಳ್ಳುವ ಸಾಮರ್ಥ್ಯ ಪಡೆದಿವೆ. ಗಿಡಗಳು ಅಲ್ಪಾಯುಗಳಾಗಿರುವುದರಿಂದ ಅವು ಬಹಳ ಬೇಗ ಬೆಳೆಯಬೇಕಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಗಿಡಗಳ ಬೇರುಗಳು ಅದರ ಕಾಂಡ ಮತ್ತು ಎಲೆಗಳಿಗೆ ಆಧಾರವಾಗಿರುವುದರಲ್ಲಿ ಮುಖ್ಯ ಪಾತ್ರ ವಹಿಸುವುದಿಲ್ಲ. ಹೀಗಾಗಿ ಸಸ್ಯಗಳು ನವಿರಾಗಿರುತ್ತವೆ. ಈ ಕಾರಣದಿಂದ ಅವುಗಳ ಬೇರುಗಳು ಅಸಂಖ್ಯಾತವಾಗಿದ್ದು ಬಳುಕುವ ಗೊಂಚಲರೂಪ ಪಡೆಯುತ್ತವೆ."

"ನಿಸ್ಸಂಶಯವಾಗಿ, ಅದು ಸಣ್ಣ ಗಿಡಗಳಿಗೆ ಸರಿಹೊಂದುವ ಬೇರುಗಳು" ಎಂದು ಮರಕಡಿಯುವವನು ತನ್ನ ಅಭಿಪ್ರಾಯ ಹೇಳಿದ.

"ದೊಡ್ಡ ಮರದ ಬೇರುಗಳು ಸಂಪೂರ್ಣವಾಗಿ ಬೇರೆ ಆಕಾರದಲ್ಲಿವೆ. ಮರಗಳು ಬೆಳೆದಂತೆಲ್ಲ ಅವುಗಳ ಗಾತ್ರ ದಪ್ಪಗಾಗುತ್ತದೆ. ಅದರ ಹೊರ ಭಾಗವನ್ನು ತಡೆದುಕೊಳ್ಳಲು ಬಲವಾದ ಬೇರುಗಳೇ ಬೇಕಾಗುತ್ತವೆ. ಅಂದರೆ ದಪ್ಪ ಬೇರುಗಳು ಬೇಕು. ಅವುಗಳ ಮಣ್ಣಿನ ಕೆಳಗೆ ನೇರವಾಗಿ ಬೆಳೆಯುತ್ತವೆ. ಅದರ ಉದ್ದವಾದ ಬೇರು ತಾಯಿ ಬೇರಾಗುವುದು. ಅದರ ಅಕ್ಕ ಪಕ್ಕದಲ್ಲೆಲ್ಲಾ ಪಾರ್ಶ್ವ ಬೇರುಗಳು ಅವಷ್ಟಕ್ಕೆ ಅವೇ ಬೆಳೆದು ಸುತ್ತಲೂ ಹರಡಿಕೊಳ್ಳುತ್ತವೆ. ಅವು ಕವಲುಬೇರುಗಳು. ಅವುಗಳೆರಡೂ ಸೇರಿಕೊಂಡು ದೊಡ್ಡಮರದ ಅವಶ್ಯಕತೆಗೆ ಬೇಕಾದಷ್ಟು ನೀರನ್ನು ಸಂಗ್ರಹಿಸಿ ಪೂರೈಸುತ್ತವೆ. ಮರದ ಭಾರಕ್ಕೆ ಆಧಾರವಾಗುವ ಶಕ್ತಿ ಮತ್ತು ಸಾಮರ್ಥ್ಯ ಹೊಂದಿವೆ."

"ಹಾಗಾದರೆ, ಬೇರುಗಳು ಎರಡು ಉದ್ದೇಶಗಳನ್ನು ಈಡೇರಿಸುವ ಕೆಲಸ ಮಾಡುತ್ತವೆ. ನೀರಿನಿಂದ ಖನಿಜಾಂಶವುಳ್ಳ ನೀರನ್ನು ಶೇಖರಿಸಿಕೊಂಡು ಸಸ್ಯಕ್ಕೆ ಸರಬರಾಜು ಮಾಡುವುದು ಒಂದು ಉದ್ದೇಶ ಮತ್ತು ಗಿಡವನ್ನು ಎತ್ತಿ ಹಿಡಿಯುವುದು ಇನ್ನೊಂದು" ಎಂದು ಮರ ಕಡಿಯುವವನು ಹೇಳಿದ.

"ಅನೇಕ ಗಿಡಗಳು ಈ ಎರಡೂ ಉದ್ದೇಶಗಳನ್ನು ಪೂರೈಸುವ ಬೇರುಗಳನ್ನು ಹೊಂದಿವೆ. ಆದರೆ, ಬೇರುಗಳು ಬೇರೆ ಕೆಲಸವನ್ನೂ ಮಾಡುತ್ತವೆ" ಎಂದು ವನದೇವತೆ ಹೇಳಿದಾಗ,

"ನಿಜವಾಗಲೂ! ಹಾಗಾದರೆ, ಆ ಉದ್ದೇಶವೇನು?" ಎಂದು ಮರಕಡಿಯುವವನು ಆಶ್ಚರ್ಯದಿಂದ ಕೇಳಿದನು.

# ೧೦

"ಕೆಲವು ಸಸ್ಯಗಳ ಬೇರುಗಳು ಊಟದ ದಾಸ್ತಾನು ಕೋಣೆಯಂತೆ ಉಪಯೋಗವಾಗುತ್ತವೆ" ಎಂದು ವನದೇವತೆ ಹೇಳಿದಾಗ, ಮರಕಡಿಯುವವನು ಆಶ್ಚರ್ಯದಿಂದ ಸಿಳ್ಳು ಹಾಕಿದ.

"ಏನು? ಬೇರುಗಳು ಊಟದ ದಾಸ್ತಾನುಮನೆಗಳೇ" ಎಂದು ಕೇಳಿದ.

"ಹೌದು, ಹಾಗೇ ತಿಳಿದುಕೊ. ನೀನು ಗಜ್ಜರಿ (ಕ್ಯಾರೆಟ್), ಮೂಲಂಗಿ, ಮತ್ತು ಗೆಣಸಿನ ರುಚಿ ಸವಿದಿರುವೆ ಅಲ್ಲವೆ? ಅವು ಬೇರುಗಳಲ್ಲದೆ ಮತ್ತೇನೂ ಅಲ್ಲ. ಬೇರುಗಳು ಆಹಾರದ ಶೇಖರಣೆಗಾಗಿಯೂ ಬಳಕೆ ಆಗುತ್ತವೆ" ವನದೇವತೆ ಹೇಳಿದಳು.

"ಆಲೂಗಡ್ಡೆಯನ್ನು ಸಾಮಾನ್ಯವಾಗಿ ಎಲ್ಲರೂ ಇಷ್ಟಪಡುತ್ತಾರೆ. ಅದರ ವಿಷಯವೇನು? ಅದನ್ನು ಹೇಳುವುದು ನೀನು ಮರೆತ ಹಾಗಿದೆ" ಎಂದು ಮರಕಡಿಯುವವನು ನೆನಪಿಸಿದ.

"ನಾನು ಅದನ್ನ ಯಾಕೆ ತಿಳಿಸಲಿಲ್ಲವೆಂದರೆ, ಅದು ಈ ಗುಂಪಿಗೆ ಸೇರುವುದಿಲ್ಲ" ಎಂದಳು.

"ಅದು ಬೇರು ಅಲ್ಲದಿದ್ದರೆ ಮತ್ತೇನು?" ಮರಕಡಿಯುವವನು ಕೇಳಿದ.

"ಅದು ನಿಜವಾಗಲೂ ಕಾಂಡದ ಕೆಳಭಾಗದ ಬೇರು ಅಷ್ಟೆ. ಸಸ್ಯಗಳು ತಮ್ಮ ಹೆಚ್ಚುವರಿ ಆಹಾರವನ್ನು ಇಲ್ಲಿ ಸಂಗ್ರಹಿಸಿಕೊಂಡಿರುತ್ತವೆ. ಆದ್ದರಿಂದ ಆ ಭಾಗದ ಕಾಂಡ ಉಬ್ಬಿಕೊಂಡು ಆಲೂಗಡ್ಡೆಯಂತೆ ಕಾಣುತ್ತದೆ."

"ಆಲೂಗಡ್ಡೆ ಮಣ್ಣಿನೊಳಗೆ ಸಿಗುವದರಿಂದ ಅದನ್ನು ಬೇರು ಎಂದು ತಿಳಿದಿದ್ದೆ" ಎಂದು ಮರ ಕಡಿಯುವವನು ತನ್ನ ನಂಬಿಕೆಯನ್ನು ಒತ್ತಿ ಹೇಳಿದ.

"ನೀನು ತಪ್ಪಾಗಿ ತಿಳಿದಿರುವೆ. ಆಲೂಗಡ್ಡೆ ಬೇರಿನಿಂದ ಬೆಳೆಯುವುದಿಲ್ಲ. ಕಾಂಡವೇ ಮಣ್ಣಿನೊಳಗೆ ವಿಸ್ತರಿಸಿಕೊಂಡಿರುತ್ತದೆ. ಅದರ ತುದಿ ಆಲೂಗಡ್ಡೆಯೊಂದಿಗೆ ಕೊನೆಗೊಂಡಿರುತ್ತದೆ. ಒಂದು ಕಾಂಡ ಬೆಳೆದು ನೆಲದ ಕೆಳಗೆ ಬೇರಿನ ಹಾಗೆ ಹರಡಿಕೊಳ್ಳುತ್ತದೆ ಎಂಬುದನ್ನು ಕಲ್ಪಿಸಿಕೊ."

"ಅದ್ಭುತ! ಆಶ್ಚರ್ಯಗಳಲ್ಲಿ ಆಶ್ಚರ್ಯ!" ಎಂದು ಮರಕಡಿಯುವವನು ಉತ್ಸಾಹದಿಂದ ಕೂಗಿದ.

"ಇನ್ನೂ ಅನೇಕ ಆಶ್ಚರ್ಯಕರ ಸಂಗತಿಗಳು ಗಿಡದೊಳಗೆ ನಡೆಯುತ್ತವೆ. ಅವುಗಳ ಬಗ್ಗೆ ನಾನು ಈಗ ನಿನಗೆ ಹೇಳುವೆ" ಎಂದು ವನದೇವತೆ ಮುಂದುವರಿಸಿದಳು.



“ಈರುಳ್ಳಿಯನ್ನು ಏನೆಂದು ಕರೆಯುತ್ತೀ - ಕಾಂಡವೊ ಅಥವಾ ಬೇರೋ? ನಿಜವಾಗಿ, ಅದು ಎರಡೂ ಅಲ್ಲ. ನೀನು ಹಾಗೇ ನಂಬಿಕೊಂಡು ಹಾಗೇ ಹೇಳಬಹುದು, ಏಕೆಂದರೆ ಅದೂ ಕೂಡ ನೆಲದೊಳಗೆ ಸಿಗುವಂತದು. ಆದರೆ ಅದು ಬರೀ ಎಲೆಯ ರಚನೆಯ ಭಾಗವಾಗಿದೆ. ಈಗ ನಾವು ಮೂಲಬೇರಿನ ವಿಷಯಕ್ಕೆ ಹಿಂದಿರುಗಿದರೆ ಅದು ಹೇಗೆಲ್ಲಾ ಸಸ್ಯಗಳಿಗೆ ಸಹಾಯ ಮಾಡುತ್ತದೆ ಎಂದು ತಿಳಿಯಬಹುದು. ಕೆಲವು ಮರಗಳು ತಮ್ಮ ಕೊಂಬೆಗಳನ್ನು ಅಗಲವಾಗಿ ಹರಡಿಕೊಳ್ಳಲು ಮತ್ತು ಅವುಗಳ ಭಾರಕ್ಕೆ ಆಧಾರವಾಗಿರಲು ಬಿಳಲು ಬೇರುಗಳನ್ನು ಹೊಂದಿರುತ್ತವೆ. ಅವೇ ಮುಂದೆ ದೊಡ್ಡವಾಗಿ ಕಾಂಡಗಳಾಗುತ್ತವೆ.”

“ಓಹೋ! ನೀನು ಹೇಳುತ್ತಿರುವುದು ಆಲದಮರದ ಬಗ್ಗೆ ಅಲ್ಲವೇ?”

“ಹೌದು. ಆಲದಮರದಿಂದ ಜೋತುಬಿದ್ದ ಬಿಳಲು ಬೇರುಗಳು ಇದಕ್ಕೆ ಸರಿಯಾದ ಉದಾಹರಣೆ. ಅವು ಕಾಂಡದಿಂದ ಕೆಳ ಮುಖವಾಗಿ ಬೆಳೆಯುತ್ತವೆ. ಅವು ವಿಶಾಲವಾಗಿ ಹರಡಿಕೊಂಡ ಕಾಂಡಗಳಿಗೆ ಅತ್ಯುತ್ತಮ ಆಧಾರವಾಗಿವೆ. ಕಾಲ ಕಳೆದಂತೆ ಅವೇ ಕಾಂಡಗಳಾಗಿ ಕವಲೊಡೆದು ಮತ್ತೆ ಮತ್ತೆ ಬೆಳೆಯತೊಡಗುತ್ತವೆ. ಈ ರೀತಿಯಾಗಿ ಆಲದಮರ ತನಗೆ ತಾನೇ ಎಲ್ಲಾ ಭಾಗಗಳಲ್ಲಿ ಹರಡಿಕೊಳ್ಳುವುದು.”

“ಹೌದು. ಒಂದು ಇಡೀ ಸೈನ್ಯ ಒಂದು ಆಲದಮರದ ಕೆಳಗೆ ವಿಶ್ರಾಂತಿ ಪಡೆಯಬಹುದೆಂದು ಜನರು ಹೇಳುತ್ತಾರೆ.” ಮರ ಕಡಿಯುವವನು ತನ್ನ ಮಾತು ಸೇರಿಸಿದ.

“ಬಿಳಲು ಬೇರುಗಳು ಜವುಗು ನೆಲದ ಗಿಡಗಳಿಗೆ ತುಂಬಾ ಉಪಯುಕ್ತವಾಗಿವೆ. ಆ ಗಿಡಗಳ ರೆಂಬೆಗಳು ನೀರಿನ ಮೇಲ್ಭಾಗದಿಂದ ಸ್ವಲ್ಪ ದೂರದಲ್ಲಿರುತ್ತವೆ. ಬಿಳಲು ಬೇರುಗಳು ಕಾಂಡದಿಂದ ಬೆಳೆದು ನೀರಿನ ಎಲ್ಲ ಭಾಗಗಳಲ್ಲಿ ಹರಡಿಕೊಳ್ಳುತ್ತವೆ. ಅವು ಜಾಗವನ್ನು ಭದ್ರವಾಗಿ ಆಕ್ರಮಿಸಿಕೊಂಡು ಜವುಗು ನೆಲದಲ್ಲಿ ಗಿಡಗಳಿಗೆ ಆಧಾರವಾಗುತ್ತವೆ.”

"ಬರೀ ಬೇರುಗಳು ಅಷ್ಟೊಂದು ವಿವಿಧ ಕೆಲಸಗಳನ್ನು ಮಾಡುತ್ತವೆಯೇ?" ಎಂದು ಮರಕಡಿಯುವವನು ಆಶ್ಚರ್ಯಪಟ್ಟನು.

"ಇಷ್ಟಕ್ಕೇ ಅದರ ಕತೆ ಮುಗಿದಿಲ್ಲ" ವನದೇವತೆ ಮತ್ತೆ ಮುಂದುವರಿಸಿದಳು. "ವೀಳೆಯದೆಲೆ ಅಥವ ಮೆಣಸಿನಗಿಡಗಳನ್ನು ಗಮನಿಸಿದರೆ, ಬೇರುಗಳು ಕಾಂಡದ ಎಲ್ಲ ಕಡೆಯೂ ಕಾಣಿಸಿಕೊಳ್ಳುತ್ತವೆ. ಇವು ಬೇರೆ ಗಿಡಗಳ ಮೇಲೆ ಗಟ್ಟಿಯಾಗಿ ಹಬ್ಬಿಕೊಳ್ಳಲು ಸಹಾಯಮಾಡುತ್ತವೆ. ಇವುಗಳನ್ನು 'ಹತ್ತುವ ಬೇರುಗಳು' ಎನ್ನುವರು. ಈ ಬೇರುಗಳು ಉದ್ದುದ್ದಕ್ಕೆ ಮೇಲಕ್ಕೆ ಹಬ್ಬುತ್ತವೆ."

"ಅವುಗಳಲ್ಲದೆ ಇನ್ನೂ ಬೇರೆ ರೀತಿಯ ಗಿಡಗಳಿವೆ" ಎಂದು ವನದೇವತೆ ವಿವರಿಸುತ್ತಾ ಹೊರಟಳು. "ಆ ಗಿಡಗಳು ತಮ್ಮಷ್ಟಕ್ಕೆ ನಿಂತುಕೊಳ್ಳುವುದಿಲ್ಲ, ತಮ್ಮ ಆಹಾರವನ್ನು ತಯಾರಿಸಿಕೊಳ್ಳುವುದೂ ಇಲ್ಲ. ಅವು ಬಲವಾದ ಗಿಡಗಳಿಗೆ ಅಂಟಿಕೊಂಡು ಅವುಗಳ ಮೇಲೆಯೇ ಬೆಳೆಯುತ್ತವೆ. ಅವು ತಮ್ಮ ಬೇರುಗಳನ್ನು ತಮಗೆ ಆಶ್ರಯಕೊಟ್ಟ ಗಿಡದ ಕಾಂಡಗಳೊಳಗೆ ಇಳಿ ಬಿಟ್ಟುಕೊಂಡು ಅವುಗಳಿಂದ ಆಹಾರವನ್ನು ಎಳೆದುಕೊಳ್ಳುತ್ತವೆ ಇಂಥವನ್ನು 'ಪರಾವಲಂಬಿ ಗಿಡಗಳು' ಎನ್ನುವರು."

"ಕೀಟಗಳಲ್ಲಿ ಪರಾವಲಂಬಿಗಳ ಬಗ್ಗೆ ಕೇಳಿದ್ದೆ. ಸಸ್ಯಗಳಲ್ಲೂ ಪರಾವಲಂಬಿಗಳು ಇರುವ ಹಾಗೆ ಕಾಣುತ್ತದೆ. ನಿಜವಾಗಲೂ, ಎಂತಹ ಕುತೂಹಲಭರಿತ ಬೇರುಗಳು! ವಿಚಿತ್ರ ಬೇರುಗಳ ಹಾಗೆ ವಿಚಿತ್ರ ಗಿಡಗಳೂ ಇರುತ್ತವೆಯೇ?" ಎಂದು ತುಂಬು ಕುತೂಹಲದಿಂದ ಮರ ಕಡಿಯುವವನು ಕೇಳಿದ.

"ಪ್ರಕೃತಿ ನಿಯಮವನ್ನು ನಾನು ನಿನಗೆ ವಿವರಿಸಲಿಲ್ಲವೆ? ಯಾವುದೇ ಜೀವಂತ ವಸ್ತು ತನ್ನ ಉಳಿವಿಗಾಗಿ ಪರಿಸರದೊಂದಿಗೆ ತನ್ನ ಜೀವನ ವಿಧಾನವನ್ನು ಹೊಂದಿಸಿಕೊಂಡು ತಾನೇ ಸರಿದೂಗಿಸಿಕೊಳ್ಳುತ್ತದೆ. ಇಲ್ಲದಿದ್ದರೆ ಅದು ನಾಶವಾಗುತ್ತದೆ. ಅದಕ್ಕಾಗಿಯೇ ಬೇರುಗಳು ತಮ್ಮ ಪರಿಸರಕ್ಕೆ ಅನುಗುಣವಾಗಿ ವಿವಿಧ ರಚನೆಗಳನ್ನು ಅನಿವಾರ್ಯವಾಗಿಯೇ ಹೊಂದಿವೆ. ಅಲ್ಲದೆ ಪರಿಸರದಲ್ಲಿ ಗಿಡಗಳು ಬೆಳೆಯಲು ಸಹಕಾರಿಯಾಗಿವೆ. ಈಗ ನಾವು ಗಿಡದ ಬೇರೆ ಬೇರೆ ಭಾಗಗಳ ಬಗ್ಗೆ ತಿಳಿದುಕೊಳ್ಳೋಣ. ನಾನು ನಿನಗೆ ಕಾಂಡದ ಬಗ್ಗೆ ಹೇಳುತ್ತೇನೆ."

# ೧೧

“ಹಾಗಾದರೆ, ವಿವಿಧ ರೀತಿಯ ಕಾಂಡಗಳೂ ಇರುತ್ತವೆಯೇ?” ಎಂದು ಗಲಿಬಿಲಿಗೊಂಡಂತೆ ಕೇಳಿದ.

“ಹೌದು ಇವೆ. ನಾನು ಈಗಾಗಲೇ ಕಾಂಡ ಮಣ್ಣಿನೊಳಗೆ ಸೇರಿ ಹರಡಿಕೊಳ್ಳುವ ವಿಷಯ ಹೇಳಿದ್ದೇನೆ. ಅದು ತನ್ನ ತುದಿಯಲ್ಲಿ ಆಹಾರ ಶೇಖರಿಸಿಕೊಂಡಿರುತ್ತದೆ ಎಂದು ನಿನಗೆ ತಿಳಿದಿದೆ. ಕಾಂಡ ಕೆಳಗಿರುವ ಬೇರಿಗೂ, ಮೇಲಿರುವ ರೆಂಬೆ ಮತ್ತು ಎಲೆಗಳಿಗೂ ನಡುವೆ ಸೇತುವೆಯಂತೆ ಕೆಲಸ ನಿರ್ವಹಿಸುತ್ತದೆ. ರೆಂಬೆ ಮತ್ತು ಎಲೆಗಳಿಗೆ ಆಧಾರವಾಗಿರುತ್ತದೆ. ಅವುಗಳ ಸಹಾಯದಿಂದ ಎಲೆಗಳು ಸೂರ್ಯನ ಬೆಳಕಿಗೆ ತಮ್ಮನ್ನು ಚೆನ್ನಾಗಿ ಒಡ್ಡಿಕೊಳ್ಳುತ್ತವೆ.” ಎಂದು ವನದೇವತೆ ಹೇಳಿದಳು.

“ಕಾಂಡ ಯಾವ ರೀತಿಯ ಸೇತುವೆ?” ಎಂದು ಮರಕಡಿಯುವವನು ತಿಳಿಯುವ ಹಂಬಲದಿಂದ ಕೇಳಿದ.

“ನದಿಯ ಮೇಲಿರುವ ಸೇತುವೆ ಎರಡು ದಡಗಳನ್ನೂ ಸೇರಿಸುತ್ತದಲ್ಲವೆ? ಹಾಗೆಯೇ ಕಾಂಡವು ಕೆಳಗಿನ ಬೇರು ಮತ್ತು ಮೇಲಿರುವ ರಂಬೆ ಹಾಗೂ ಎಲೆಗಳನ್ನು ಸೇರಿಸುವ ಕೊಂಡಿಯಾಗಿರುತ್ತದೆ. ಮಣ್ಣಿನಲ್ಲಿರುವ ಲವಣಗಳಿಂದ ಕೂಡಿದ ನೀರು ಈ ಸೇತುವೆ-ಕಾಂಡದ ಮೂಲಕ ಎಲೆಗಳಿಗೆ ಹರಿದು ಹೋಗುತ್ತದೆ, ಎಲೆಗಳಿಗೆ ಆಹಾರ ತಯಾರಿಸುವ ಘಟಕಗಳಾಗಿ ನೆರವಾಗುತ್ತದೆ” ವನದೇವತೆ ವಿವರಿಸಿದಳು.

“ಏನು? ನಾನು ಸರಿಯಾಗಿ ಕೇಳಿಸಿಕೊಂಡೆನೇ? ಎಲೆಗಳು ತಯಾರಿಸುವ ಆಹಾರದ ಘಟಕಗಳಾಗುತ್ತವೆಯೇ?” ಎಂದು ಮರಕಡಿಯುವವನು ತುಂಬ ಆಶ್ಚರ್ಯದಿಂದ ಕೇಳಿದ.

“ಹೌದು. ಆದರೆ, ಅದರ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಈಗ ಕಾಂಡದ ಕತೆಯನ್ನು ಮೊದಲು ಮುಗಿಸುತ್ತೇನೆ” ವನದೇವತೆ ಮುಂದುವರೆಸಿದಳು. “ಎಲೆಗಳು ಸೂರ್ಯನ ಬೆಳಕಿಗೆ ತೆರೆದುಕೊಂಡಾಗ ಬೇರಿನಿಂದ ಖನಿಜಾಂಶವುಳ್ಳ ನೀರನ್ನು ಎಲೆಗೆ ಮತ್ತು ಎಲೆಗಳು ತಯಾರಿಸಿದ ಆಹಾರವನ್ನು ಬೇರಿಗೆ ಕಾಂಡವು ತಲುಪಿಸುತ್ತದೆ. ಈ ಮೂರು ಮುಖ್ಯ ಕೆಲಸಗಳನ್ನು ಕಾಂಡವು ನಿರ್ವಹಿಸುತ್ತದೆ” ಎಂದು ವನದೇವತೆ ವಿವರಿಸಿದಳು.

“ಎಲೆಗಳಿಗೆ ನೀರನ್ನೂ ಒಯ್ಯುತ್ತಾ ಅದೇ ವೇಳೆಗೆ ಬೇರುಗಳಿಗೆ ಆಹಾರವನ್ನೂ ತರುವ ಕೆಲಸವನ್ನು ಕಾಂಡವು ಹೇಗೆ ಮಾಡುತ್ತದೆ?” ಮರ ಕಡಿಯುವವನು ಗೊಂದಲಗೊಂಡವನಂತೆ ಕೇಳಿದ.



"ಕಾಂಡ ಅಥವ ಗಿಡದ ಬೊಡ್ಡೆಯಲ್ಲಿ ನಲ್ಲಿಯಂತಹ ಅಥವ ಕೊಳವೆಯಂತಿರುವ ಪೈಪುಗಳಿದ್ದು ನೀರನ್ನು ಮೇಲಕ್ಕೆ ಒಯ್ಯುತ್ತವೆ. ಅವುಗಳಲ್ಲಿ ಇನ್ನೂ ಕೆಲವು ಕೊಳವೆಗಳು ಎಲೆಗಳಿಂದ ಆಹಾರವನ್ನು ಕೆಳಕ್ಕೆ ಹರಿಯುವಂತೆ ಮಾಡುವವು. ಈ ಕೆಲಸಗಳಲ್ಲದೆ ಕಾಂಡವು ಇನ್ನೂ ಕೆಲವು ನಿರ್ದಿಷ್ಟ ಕೆಲಸಗಳನ್ನು ಮಾಡುತ್ತದೆ" ವನದೇವತೆ ಹೇಳಿದಳು.

"ಕಾಂಡದ ಆ ಕರ್ತವ್ಯಗಳೇನು? ನಾನೂ ತಿಳಿಯಬಹುದೆ?" ಮರಕಡಿಯುವವನು ಕೇಳಿದನು.

"ಕೆಲವು ಜಾತಿಯ ಗಿಡಗಳು ಹಬ್ಬಿ ಬೆಳೆಯುವ ಗುಣಗಳನ್ನು ಹೊಂದಿರುತ್ತವೆ. ಅವುಗಳ ಕಾಂಡಗಳು ತಮ್ಮಷ್ಟಕ್ಕೆ ತಾವು ನಿಲ್ಲುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಅವುಗಳಿಗೆ ಬೇರೆ ಗಿಡಗಳು ಅಥವ ಮರಗಳ ಆಧಾರ ಬೇಕು. ಅಂತಹ ಬಳ್ಳಿಯ ಕಾಂಡಗಳು ಕೊಂಡಿಯಾಕಾರದ ಕುಡಿಗಳನ್ನು ಬಳ್ಳಿಗಳಲ್ಲಿ ಬೆಳಸಿಕೊಳ್ಳುತ್ತವೆ. ಅವು ಆಶ್ರಿತ ಕಾಂಡವನ್ನು ಏರುತ್ತಾ ತಮ್ಮಷ್ಟಕ್ಕೇ ಹರಡಿಕೊಳ್ಳುತ್ತವೆ. ಇನ್ನು ಕೆಲವು ಗಿಡಗಳಿಗೆ ದುರ್ಬಲ ಕಾಂಡಗಳಿದ್ದು ಅವು ಕೊಂಡಿಗಳಂತಹ ಕುಡಿಗಳನ್ನಾಗಲೀ ಚಿಗುರುಗಳನ್ನಾಗಲೀ ಹೊಂದಿರುವುದಿಲ್ಲ. ಆ ಕಾಂಡಗಳನ್ನು ದಾರದ ಬಳ್ಳಿಗಳೆಂದು ಕರೆಯುವವರು. ಅವು ಆಶ್ರಿತ ಕಾಂಡದ ಸುತ್ತಲೂ ತಮಗೆ ತಾವೇ ಹೆಣೆದುಕೊಂಡಿರುತ್ತವೆ" ಎಂದು ವನದೇವತೆ ವಿವರಿಸಿದಳು.

"ನನಗೆ ಗೊತ್ತು. ದೊಡ್ಡ ಹುರುಳಿ ಬಳ್ಳಿ ಮೇಲಕ್ಕೆ ಹತ್ತಿ ತನಗೆ ಆಶ್ರಯಕೊಟ್ಟ ಕಾಂಡದ ಸುತ್ತಲೂ ಆರಾಮವಾಗಿ ಹಬ್ಬಿಕೊಳ್ಳುವುದನ್ನು ನಾನು ನೋಡಿದ್ದೇನೆ" ಎಂದು ಮರ ಕಡಿಯುವವನು ತನ್ನ ಅಭಿಪ್ರಾಯ ಹೇಳಿದ.

"ಇವುಗಳಲ್ಲದೆ ಇನ್ನೂ ಬೇರೆ ರೀತಿಯ ದುರ್ಬಲ ಕಾಂಡಹೊಂದಿರುವ ಬಳ್ಳಿಗಳಿವೆ. ಬೂದುಕುಂಬಳ ಕಾಯಿಯನ್ನು ನೋಡು. ಅದರ ಬಳ್ಳಿಗಳು ನೆಲದ ಮೇಲೆ ಬೆಳೆಯುತ್ತಾ ಅಲ್ಲೇ ಹರಡಿಕೊಳ್ಳುತ್ತವೆ. ಏಕೆಂದರೆ, ಬೂದುಕುಂಬಳ ಕಾಯಿ ಬಹಳ ಭಾರವಾಗಿದ್ದು ಅದು ಮೇಲಕ್ಕೆ ಹಬ್ಬಲು ಪ್ರಯತ್ನಿಸಿದರೆ ಇಡೀ ಗಿಡವೇ ಕೆಳಕ್ಕೆ ಜಗ್ಗಿಕೊಂಡು ಬೀಳುತ್ತದೆ" ವನದೇವತೆ ಹೀಗೆ ಹೇಳಿದಾಗ ಮರ ಕಡಿಯುವವನು ತನಗೆ ಅರ್ಥವಾದಂತೆ ತಲೆಯಲ್ಲಾಡಿಸಿದ.

"ಕ್ರಿಸಾಂಥೆಮಮ್ ಗಿಡ ವಿಶೇಷ ರೀತಿಯ ಕಾಂಡವನ್ನು ಹೊಂದಿದ್ದು ನೆಲದೊಳಗೇ ಎಲ್ಲ ದಿಕ್ಕುಗಳಿಗೂ ತನ್ನಷ್ಟಕ್ಕೇ ಹರಡಿಕೊಳ್ಳುತ್ತದೆ. ಮತ್ತು ಅಲ್ಲಿ ಇಲ್ಲಿ ಚಿಗುರಿಕೊಂಡು ಮೇಲಕ್ಕೆ ಬರುತ್ತದೆ. ಅದು ಎಲ್ಲೆಲ್ಲಿ ಚಿಗುರುವುದೋ ಅಲ್ಲಲ್ಲಿ ಎಲೆಗಳನ್ನು ಬೆಳೆಸಿಕೊಳ್ಳುತ್ತದೆ. ಅಂತಹ ಕಾಂಡಗಳನ್ನು ಹೀರುಕಾಂಡಗಳೆಂದು ಕರೆಯುತ್ತಾರೆ. ಕೊನೆಯಲ್ಲಿ, ಇನ್ನೊಂದು ವಿಚಿತ್ರಕಾಂಡದ ಬಗ್ಗೆ ನಾನು ನಿನಗೆ ಹೇಳುತ್ತೇನೆ. ಅದು ಇದುವರೆಗೆ ಹೇಳಿದ ಕಾಂಡಗಳಿಗಿಂತ ಬೇರೆ ಥರದ್ದು."



"ಸಸ್ಯ ಸಾಮ್ರಾಜ್ಯದ ವಿಚಿತ್ರಗಳು ಬೇಕಾದಷ್ಟಿವೆ!" ಎಂದು ಮರ ಕಡಿಯುವವನು ಉದ್ಗರಿಸಿದ.

"ಮರುಭೂಮಿಗಳಲ್ಲಿ ನೀರಿನ ಪ್ರದೇಶವನ್ನು ಆಕ್ರಮಿಸಿಕೊಂಡು ಬೆಳೆಯುವ ಪಾಪಸ್‌ಕಳ್ಳಿ ದಪ್ಪ ಎಲೆಯ ಗೊಂಚಲಂತೆ ಕಾಣುತ್ತದೆ. ಎಲೆಗಳ ಮೇಲೆ ಮುಳ್ಳುಗಳಿರುತ್ತವೆ. ಆದರೆ ಅದಕ್ಕೆ ಕಾಂಡವೇ ಇಲ್ಲ. ದಪ್ಪ ಎಲೆಗಳೇ ಆ ಗಿಡದ ಕಾಂಡವೆಂದು ಹೇಳಿದರೆ ನಂಬುವೆಯಾ?" ವನದೇವತೆ ಕೇಳಿದಳು.

"ನಂಬಲಸಾಧ್ಯ! ಆ ದಪ್ಪ ಹಸಿರು ಎಲೆಯ ಆಕಾರ ನಿಜವಾಗಲೂ ಕಾಂಡವೇ?" ಮರ ಕಡಿಯುವವನು ತನ್ನಷ್ಟಕ್ಕೇ ಗೊಣಗಿಕೊಂಡು ನಂತರ ಕೇಳಿದ - "ಹಾಗಾದರೆ, ಪಾಪಸ್‌ಕಳ್ಳಿ ಗಿಡಕ್ಕೆ ಎಲೆಗಳೇ ಇಲ್ಲ ಎಂದರ್ಥವೇ?"

"ಆ ಗಿಡಕ್ಕೆ ಬೇಕಾದಷ್ಟು ಎಲೆಗಳಿವೆ. ನೀನು ಅವುಗಳನ್ನು ಗುರುತಿಸಲು ಸಾಧ್ಯವಾದರೆ ಮಾತ್ರ ತಿಳಿಯುತ್ತದೆ. ಆ ಚೂಪಾದ ಮುಳ್ಳಿನ ರೂಪಗಳೇ ನಿಜವಾದ ಎಲೆಗಳು" ಎಂದು ವನದೇವತೆ ಹೇಳಿದಳು.

"ಎಂಥ ತಮಾಷೆಯಾಗಿದೆ! ಎಲೆಗಳು ಮುಳ್ಳುಗಳಾಗುವುದು ಮತ್ತು ಕಾಂಡಗಳು ಎಲೆಗಳಾಗುವುದು! ಈ ರೂಪಾಂತರ ಏಕೆ?" ಮರ ಕಡಿಯುವವನು ಆಶ್ಚರ್ಯದಿಂದ ಕೇಳಿದ.

"ಪಾಪಸ್‌ಕಳ್ಳಿ ತನ್ನನ್ನು ಕಾಪಾಡಿಕೊಳ್ಳಲು ನೀರಿನ ಅಂಶವನ್ನು ಸಾಧ್ಯವಾದಷ್ಟೂ ಹಿಡಿದಿಟ್ಟುಕೊಳ್ಳಬೇಕು. ಏಕೆಂದರೆ, ಮರುಭೂಮಿಯಲ್ಲಿ ನೀರು ಅಪರೂಪ. ಎಲೆಗಳ ಕೆಳಭಾಗದಲ್ಲಿ ಅಸಂಖ್ಯಾತ ರಂಧ್ರಗಳಿರುತ್ತವೆ. ರಂಧ್ರಗಳ ಮೂಲಕ ನೀರು ಆವಿಯಾಗುತ್ತದೆ. ಆದರಿಂದ ನೀರು ಕಡಮೆಯಾಗಿ ಸಸ್ಯಗಳು ಒಣಗುತ್ತವೆ. ಕಾಂಡದಲ್ಲಿ ಕೆಲವೇ ಕೆಲವು ರಂಧ್ರಗಳಿರುತ್ತವೆ. ಕಾಂಡದ ಮೂಲಕ ನೀರು ಆವಿಯಾಗುವುದಿಲ್ಲ. ಹೀಗೆ ನೀರು ಆವಿಯಾಗುವುದನ್ನು ತಡೆಯಲು ಮತ್ತು ಗಿಡ ಒಣಗದಂತಿರಲು ಪಾಪಸ್‌ಕಳ್ಳಿ ಒಂದು ದೊಡ್ಡ ಕಾಂಡದ ರಚನೆಯನ್ನು ಹೊಂದಿದೆ. ಅದು ಎಲೆಗಳ ಹಸಿರನ್ನು ಉಳಿಸಿಕೊಳ್ಳುತ್ತದೆ. ಮುಳ್ಳುಗಳಲ್ಲಿ ಇರುವ ರಂಧ್ರಗಳು ಎಲೆಗಳಂತೆ ಕೆಲಸ ಮಾಡುತ್ತವೆ. ಅವು ಆಹಾರ ತಯಾರಿಕೆಗೆ ಬೇಕಾದ ಇಂಗಾಲಾಮ್ಲವನ್ನು ಗಾಳಿಯಿಂದ ಶೇಖರಿಸಿಕೊಳ್ಳುತ್ತವೆ. ಆದರೆ ಮುಳ್ಳಿನಲ್ಲಿರುವ ರಂಧ್ರಗಳಿಂದ ನೀರು ಆವಿಯಾಗುವುದಿಲ್ಲ. ಇದಕ್ಕಿಂತ ಮಿಗಿಲಾಗಿ, ಈ ಮುಳ್ಳುಗಳು, ಎಲೆಗಳಾದರೂ ಕೂಡ, ಆಹಾರ ತಯಾರಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಕಾಂಡವೇ ಆಹಾರ ತಯಾರಿಸುತ್ತದೆ."

"ಓಹೋ! ಕ್ಯಾಕ್ಟಸ್ ತುಂಬ ವಿಚಿತ್ರವಾದ ಗಿಡ. ಅದರ ವಿಚಿತ್ರವಾದ ರಚನೆಯಿಂದ ಮರುಭೂಮಿಯಲ್ಲಿ ಬದುಕುಳಿಯಲು ಸಹಾಯವಾಗಿದೆ ಅಲ್ಲವೆ?" ಎಂದು ಮರ ಕಡಿಯುವವನು ಕೇಳಿದ.



"ನಾನು ಮೊದಲೇ ಹೇಳಿದೆನಲ್ಲ, ನೆನಪಿಸಿಕೋ. ಗಿಡಗಳು ಪರಿಸರಕ್ಕೆ ತಕ್ಕಂತೆ ತಮ್ಮನ್ನು ಮಾರ್ಪಾಡು ಮಾಡಿಕೊಳ್ಳದೇ ಹೋದರೆ ತಮ್ಮಷ್ಟಕ್ಕೇ ನಾಶವಾಗುತ್ತವೆ."

"ಇಲ್ಲಿಗೆ ಕಾಂಡದ ಕತೆ ಮುಗಿಯಿತು. ಈಗ ನಾವು ಎಲೆಗಳ ವಿಷಯಕ್ಕೆ ಮುಂದುವರೆಯೋಣ" ಎಂದು ವನದೇವತೆ ಹೇಳಿದಳು.

"ಗಿಡದ ಮುಂದಿನ ಭಾಗದ ಕತೆ ಕೇಳಲು ನಾನು ಸಿದ್ಧವಾಗಿರುವೆ" ಎಂದು ಮರ ಕಡಿಯುವವನು ಬತ್ತದ ಉತ್ಸಾಹದಿಂದ ಹೇಳಿದ.

# ೧೨

“ಆಹಾರ ತಯಾರಿಸುವ ಸಾವಿರಾರು ಘಟಕಗಳು ಎಲೆಗಳಲ್ಲಿವೆ. ಅಥವ ನೀನು ಹೇಳುವ ಹಾಗೆ ಎಲೆಗಳು ಅಡುಗೆಮನೆಯಿದ್ದಂತೆ. ಚುರುಕಾದ ಸಾವಿರಾರು ಅಡುಗೆಯವರು ಈ ಅಡುಗೆ ಮನೆಗಳಲ್ಲಿ ಕೆಲಸ ಮಾಡುತ್ತಾರೆ. ಈ ಅಡುಗೆಯವರ ಬಣ್ಣ ಹಸಿರು. ಅವರನ್ನು ‘ಪತ್ರಹರಿತ್ತು’ ಎಂದು ಕರೆಯುತ್ತಾರೆ. ಗಾಳಿಯಲ್ಲಿರುವ ಇಂಗಾಲಾಮ್ಲವನ್ನು, ಸೂರ್ಯನ ಬೆಳಕಿನಲ್ಲಿ, ನೀರಿನೊಂದಿಗೆ ಬೆರೆಸಿ ಸಿಹಿಪದಾರ್ಥವನ್ನು ತಯಾರಿಸುವುದು ಅವರ ಕೆಲಸ. ಆ ಪದಾರ್ಥ ಮೂಲಭೂತ ಸಕ್ಕರೆಯೇ.”

“ನಂಬಲಸಾಧ್ಯ!” ಮರ ಕಡಿಯುವವನು ಅಪನಂಬಿಕೆಯಿಂದ ತನ್ನ ತಲೆಕೊಡವಿದ. “ಈ ತೆಳು ಎಲೆಗಳು ಅನೇಕ ಅಡುಗೆ ಮನೆಗಳನ್ನು ಹೊಂದಿವೆ, ಅಲ್ಲಿ ಅನೇಕ ಅಡುಗೆಯವರಿದ್ದಾರೆ! ಹೇಗೆ ... ಅದು ಹೇಗೆ ಸಾಧ್ಯ... ನಾನು... ನಾನು ಅದನ್ನು ನಂಬುವುದಿಲ್ಲ” ಮರ ಕಡಿಯುವವನು ತೊದಲುತ್ತ ನುಡಿದ.

“ಎಲೆ ತೆಳ್ಳಗಿರುತ್ತದೆ, ನಿಜ. ಆದರೆ ಅದರೊಳಗಿನ ಅಡುಗೆಮನೆಗಳು ನಿನಗೆ ಕಾಣುವ ಹಾಗೆ ಮಾಡುತ್ತೇನೆ. ಕಣ್ಣಿಂದ ನೋಡಿದರೆ ನಿನಗೆ ನಂಬಿಕೆ ಬರುತ್ತದೆ. ಹೋಗು, ಆ ಮಾವಿನ ಗಿಡದ ಎಲೆಯೊಂದನ್ನು ತೆಗೆದುಕೊಂಡು ಬಾ” ಎಂದು ವನದೇವತೆ ಹೇಳಿದಳು. ಮರ ಕಡಿಯುವವನು ಅಲ್ಲೆ ಹತ್ತಿರದಲ್ಲಿದ್ದ ಮಾವಿನ ಮರದ ಬಳಿಗೆ ಹೋಗಿ ಅದರಿಂದ ಒಳ್ಳೆಯ ಆಕಾರದ ಎಲೆಯೊಂದನ್ನು ಕಿತ್ತು ವನದೇವತೆಗೆ ತಂದುಕೊಟ್ಟ. ಆಕೆ ಹೇಳಿದಳು:

“ಎಲೆಯನ್ನು ನಿನ್ನ ಹತ್ತಿರವೇ ಇಟ್ಟುಕೋ. ಅದನ್ನು ಎರಡು ಭಾಗ ಮಾಡು. ತುಂಡಾದ ಎಲೆಯ ಅಂಚನ್ನು ನೋಡು. ಬರೀ ಕಣ್ಣಿನಿಂದ ಅಲ್ಲ, ನನ್ನ ಮಂತ್ರದ ಕಲ್ಲಿನ ಉಂಗುರದ ಮೂಲಕ ಗಮನಿಸಿ ನೋಡು. ನಿನಗೆ ಏನು ಕಾಣುತ್ತದೆ, ಹೇಳು.”

ಮರ ಕಡಿಯುವವನು ಅವಳು ಹೇಳಿದಂತೆಯೇ ಮಾಡಿದ. ಮರುಕ್ಷಣವೇ “ಆ ... ಅಡುಗೆಮನೆ. ಇಲ್ಲಿ ಎಷ್ಟೊಂದಿವೆ. ಅಲ್ಲಿ ಎರಡು ಸಾಲಿನ ಉದ್ದ ಕೋಣೆಗಳು ಕಾಣುತ್ತಿವೆ. ಅವುಗಳ ಕೆಳಗೆ ಕೆಲವು ಅಂಡಾಕಾರದ ಕೋಣೆಗಳಿವೆ. ಗೋಪುರಾಕಾರದ ರಾಶಿಗಳು ಅಡ್ಡಾದಿಡ್ಡಿಯಾಗಿ ದೂರದೂರದಲ್ಲಿವೆ. ಅವು



ಸ್ಪಂಜಿನಂತೆ ಕಾಣುತ್ತಿವೆ" ಎಂದು ಮರ ಕಡಿಯುವವನು ತಾನು ಕಂಡದ್ದನ್ನೆಲ್ಲ ತನಗೆ ಅರ್ಥವಾದಷ್ಟು ವಿವರಿಸಿದ.

"ಈಗಲಾದರೂ ಈ ಅದ್ಭುತ ಸತ್ಯವನ್ನು ನಂಬುವೆಯಾ? ಆ ತೆಳು ಎಲೆಯಲ್ಲಿ ಎಣಿಸಲಾಗದಷ್ಟು ಬಿಡಿ ಭಾಗಗಳಿವೆ ತಿಳಿಯಿತೆ. ಮೇಲಿನವು ಉದ್ದುದ್ದ ಇದ್ದು ಬಿಗಿಯಾಗಿ ಹೆಣೆದುಕೊಂಡಿವೆ. ಅವು "ದಸಿಬೇಲಿ ಕೋಶಗಳು (Palisade Cells)". ಕೆಳಗಿರುವ ಸ್ಪಂಜಿನಂತಹವು "ಸ್ಪಾಂಜೀ ಪ್ಯಾರಂಕೈಮಾ (Spongy Parenchyma Cells) ಕೋಶಗಳು" ಎಂದು ವನದೇವತೆ ವಿವರಿಸಿದಳು. "ಈಗ ಹುಷಾರಾಗಿ ನೋಡು ಈ ಕೋಶಗಳ ಒಳಗೆ ಏನಾದರೂ ಕಂಡರೆ ಹೇಳು" ಎಂದಳು. ಮರ ಕಡಿಯುವವನು ಆಸಕ್ತಿಯಿಂದ ನೋಡಿ ಇದ್ದಕ್ಕಿದ್ದಂತೆ ಕಿರುಚಿದ.

"ಓಹೋ! ಹೌದು! ನಾನು... ನಾನು ಅಸಂಖ್ಯಾತ ಹಸಿರು ಚುಕ್ಕೆಗಳನ್ನು ಅಡುಗೆಮನೆಗಳಲ್ಲಿ ನೋಡಿದೆ" ವನದೇವತೆ ವಿವರಣೆಯನ್ನು ಮುಂದುವರೆಸಿದಳು.

"ಆ ಹಸಿರು ಚುಕ್ಕೆಗಳೇ ಅಡುಗೆಯವರು. ಆ ಚುಕ್ಕೆಗಳನ್ನು ಪತ್ರಹರಿತ್ತು ಎನ್ನುತ್ತಾರೆ. ರುಚಿಯಾದ ಆಹಾರವನ್ನು ತಯಾರಿಸುವ ಜವಾಬ್ದಾರಿ ಪತ್ರಹರಿತ್ತಿನದೇ."

"ಹಸಿರು ಸಮವಸ್ತ್ರ ಧರಿಸಿದ ಪುಟ್ಟ ಪುಟ್ಟ ಅಡುಗೆಯವರು ಎಲೆಯೊಳಗಿನ ಚಿಕ್ಕ ಅಡುಗೆಮನೆಗಳಲ್ಲಿ ಆಹಾರ ತಯಾರಿಸುತ್ತಾರೆ! ಕಲ್ಪಿಸಿಕೊಳ್ಳಲೂ ಅಸಾಧ್ಯ! ಆದರೆ ... ಉಗ್ರಾಣ ಎಲ್ಲಿ? ಅಡುಗೆಗೆ ಬೆಂಕಿ ಎಲ್ಲಿ? ಅಡುಗೆ ಮಾಡಲು ಪಾತ್ರೆಗಳೂ ಇಲ್ಲ. ಈ ಅಡುಗೆಯವರು ಹೇಗಾದರೂ ಅಡುಗೆ ಮಾಡುತ್ತಾರೋ" ಎಂದು ಆಶ್ಚರ್ಯದಿಂದ ಮರ ಕಡಿಯುವವನು ಕೇಳಿದ. ವನದೇವತೆಯು ಇನ್ನೂ ಸ್ವಲ್ಪ ವಿವರವಾಗಿ ಹೇಳತೊಡಗಿದಳು:

"ತಮ್ಮ ಆಹಾರ ತಯಾರಿಸುವುದಕ್ಕೆ ನೀನು ಹೇಳಿದ ಯಾವ ವಸ್ತುಗಳೂ ಸಸ್ಯಗಳಿಗೆ ಅಗತ್ಯವಿಲ್ಲ. ಸಸ್ಯಗಳು ಆಹಾರ ತಯಾರಿಸುವ ಕ್ರಿಯೆ ಒಂದು ಅದ್ಭುತ. ಎಲೆಗಳಲ್ಲಿ ನಿಜವಾಗಲೂ ಏನಾಗುತ್ತದೆ ಗೊತ್ತೆ? ಇಂಗಾಲಾಮ್ಲ ಮತ್ತು ನೀರು ಬೇರೆಬೇರೆಯಾಗಿ ಮತ್ತೆ ಒಂದಾಗುತ್ತವೆ. ಈ ಸಂಯೋಗದಿಂದ ಸಕ್ಕರೆ ರೂಪ ಪಡೆಯುತ್ತದೆ. ಈ ಕ್ರಿಯೆಗೆ ಬೇಕಾಗುವ ಬೆಂಕಿ ಅಥವಾ ಶಕ್ತಿ ಸೂರ್ಯಕಿರಣಗಳಿಂದ ದೊರೆಯುತ್ತದೆ."

"ನಿಜವಾಗಲೂ? ಬೆಂಕಿ ಇಲ್ಲದೆ ಅಡುಗೆ ಮಾಡುವುದು, ಅದೂ ಸೂರ್ಯನ ಕಿರಣಗಳನ್ನು ಬಳಸಿ! ಅದ್ಭುತವಾಗಿದೆ! ನನಗಂತೂ ನಂಬುವುದೇ ಕಷ್ಟವಾಗಿದೆ" ಎಂದು ಮರ ಕಡಿಯುವವನು ಹೇಳಿದ.

"ಎಲೆಗಳಲ್ಲಿ ಅಡುಗೆ ಕೆಲಸ ನಿಜವಾಗಲೂ ಹೇಗೆ ನಡೆಯುತ್ತದೆ ಎಂದು ನಿನಗೆ ಹೇಳುತ್ತೇನೆ" ವನದೇವತೆ ತನ್ನ ಮಾತು ಮುಂದುವರೆಸಿದಳು. "ನಿನಗೆ ಆಗಲೆ ಹೇಳಿದೆನಲ್ಲ - ಕಾಂಡದಲ್ಲಿ ಒಂದು ಜೋಡಿ ಕೊಳವೆಗಳಿದ್ದು ಅವು ಮಣ್ಣಿನಿಂದ ನೀರನ್ನು ಹೀರಿಕೊಂಡು ಎಲೆಗೆ ಸಾಗಿಸುತ್ತದೆ. ಆಮೇಲೆ ಪುಟ್ಟ ಕೊಳವೆಗಳ ಮುಖಾಂತರ ನೀರು ಅಡುಗೆ ಮನೆಗಳಿಗೆ ಸಾಗುತ್ತದೆ."

ಮರ ಕಡಿಯುವವನು ಕೂಡಲೆ ತನ್ನ ಕೈಯಲ್ಲಿದ್ದ ಎಲೆಯ ಎರಡೂ ಬದಿಗಳನ್ನು ತಿರುತಿರುಗಿಸಿ ನೋಡಿದ, "ನೀನು ಈಗ ವಿವರಿಸಿದ್ದನ್ನು ನಾನು ನೋಡಬಲ್ಲೆ. ಎಲೆಯ ತಳಭಾಗದಲ್ಲಿ ಸಣ್ಣಕೊಳವೆಗಳ ಜಾಲವೇ ಹಬ್ಬಿದೆ. ಈ ಕೊಳವೆಗಳು ಪ್ರತಿ ಅಡುಗೆಮನೆಗೂ ಚಾಚಿಕೊಂಡಂತಿವೆ" ಎಂದು ನುಡಿದ.

"ನೀನು ಸರಿಯಾಗಿ ಹೇಳಿದೆ. ಹೀಗೆ, ಆಹಾರ ತಯಾರಿಸಲು ಬೇಕಾಗುವ ಮೂಲ ವಸ್ತು, ನೀರು, ಅಡಿಗೆಮನೆಗೆ ಬರುತ್ತದೆ. ನಂತರ ಎರಡನೆಯ ವಸ್ತು ಇಂಗಾಲಾಮ್ಲ ಅಡಿಗೆಮನೆ ತಲುಪಬೇಕು. ಅದನ್ನೂ ನೋಡೋಣ. ಮಾಂತ್ರಿಕ ಉಂಗುರದಿಂದ ಎಲೆಯ ತಳಭಾಗವನ್ನು ಇನ್ನೊಮ್ಮೆ ನೋಡು." ವನದೇವತೆ ಹೇಳಿದಳು. ಮರಕಡಿಯುವವನು ಹೇಳಿದ ಹಾಗೆ ಮಾಡಿದ. ಒಂದು ಸುಂದರ ಜ್ಯಾಮಿತ್ರಿ ಮಾದರಿ ಆಕಾರ, ಮತ್ತು ಅಲ್ಲಲ್ಲಿ ಕೆಲವು ಸಣ್ಣ ರಂಧ್ರಗಳನ್ನು ಗಮನಿಸಿದ. ಅವನ್ನು ತುಟಿಯಾಕಾರದ ರಚನೆಗಳು ಎರಡೂ ಕಡೆ ಆವರಿಸಿದ್ದವು. ಈ ರಂಧ್ರಗಳು ಬಾಯಿಯ ಕೆಲಸ ಮಾಡುವವೊ ಏನೋ ಎಂದು ಆಶ್ಚರ್ಯಗೊಂಡನು. ಆಗ ವನದೇವತೆ ಅವನ ಗೊಂದಲವನ್ನು ನಿವಾರಿಸಿದಳು. "ತುಟಿಯಾಕಾರದ ರಚನೆಯಿಂದ ಸುತ್ತುವರಿದ ರಂಧ್ರಗಳು ಬಾಯಿಯ ಹಾಗೆ ಕಾಣಬಹುದು, ಆದರೆ ಅವು ಬಾಯಿಗಳಲ್ಲ. ವಾಸ್ತವಿಕವಾಗಿ ಆ ರಂಧ್ರಗಳ ಮೂಲಕ ಎಲೆಗಳು ಉಸಿರಾಡುತ್ತವೆ."

"ಅನೇಕ 'ಮೂಗುಗಳು' ಉಸಿರಾಡಲು ಬೇಕಾ?" ಎಂದು ಮರಕಡಿಯುವವನು ಆಶ್ಚರ್ಯಗೊಂಡನು.

"ಆಹಾರ ತಯಾರಿಗೆ ಬೇಕಾದ ಎರಡನೆ ಮೂಲಘಟಕವಾದ ಇಂಗಾಲಾಮ್ಲವು ಈ ರಂಧ್ರಗಳ ಮೂಲಕ ಪ್ರವೇಶಿಸುತ್ತದೆ. ಎಲೆಗಳು ಈ ರಂಧ್ರಗಳ ಮೂಲಕ ಉಸಿರಾಡುತ್ತವೆ" ಇದರ ಬಗ್ಗೆ ವಿವರವಾಗಿ ಹೇಳುತ್ತೇನೆ ಎಂದು ತನ್ನ ಮಾತನ್ನು ಮುಂದುವರಿಸಿದಳು:

"ನೀರು ಅಡಿಗೆಮನೆಯಲ್ಲಿ ತುಂಬಿದ ಮೇಲೆ ಈ ರಂಧ್ರಗಳ ಮೂಲಕ ಹರಿದು ಬಂದು ಹೊರಗಿನ ಗಾಳಿಯ ಸಂಪರ್ಕಕ್ಕೆ ಬರುತ್ತದೆ. ಗಾಳಿಯಲ್ಲಿರುವ ಇಂಗಾಲಾಮ್ಲವು ನೀರಿನಲ್ಲಿ ಕರಗಿ ಎಲೆಯನ್ನು ಸೇರುತ್ತದೆ. ಗಾಳಿಯಲ್ಲಿ ಆಮ್ಲಜನಕ, ಹೈಡ್ರೋಜನ್ ಮತ್ತು ಇತರ ಆಮ್ಲಗಳೂ ಇರುತ್ತವೆ. ಆದರೂ, ಎಲೆ, ಇಂಗಾಲದ ಡೈ ಆಕ್ಸೈಡನ್ನು ಮಾತ್ರ ತೆಗೆದುಕೊಂಡು ಉಳಿದವನ್ನು ಹಾಗೇ ಬಿಡುತ್ತದೆ."

"ಹಾಗೆ ಯಾಕೆ?" ಮರಕಡಿಯುವವನು ಕೇಳಿದನು.

"ಯಾಕೆಂದರೆ ಇಂಗಾಲಾಮ್ಲವು ನೀರಿನಲ್ಲಿ ಕೂಡಲೆ ಕರಗುತ್ತದೆ. ಅದನ್ನು ನೀರು ತನ್ನ ಜೊತೆಗೆ ಅಡಿಗೆಮನೆ ಕೋಶಗಳಿಗೆ ಸಾಗಿಸುತ್ತದೆ."

"ಹೌದಾ! ಹಿಂದೆ ನೀನು ಹೇಳಿದ್ದು ನೆನಪಾಯಿತು. ಜೈವಿಕ ಲವಣಗಳನ್ನು ತನ್ನೊಂದಿಗೆ ಕರಗಿಸಿಕೊಂಡ ನೀರು ಬೇರಿನೊಳಗೆ ಪ್ರವೇಶಿಸುತ್ತದೆ. ಬೇರಿನ ಒಳಗೆ ಮತ್ತು ಹೊರಗೆ ಲವಣಗಳ ಕೇಂದ್ರೀಕರಣದಲ್ಲಾಗುವ ವ್ಯತ್ಯಾಸವೇ ಇದಕ್ಕೆ ಮುಖ್ಯ ಕಾರಣ. ಹಾಗಾದರೆ, ನೀರು ಇಂಗಾಲಾಮ್ಲವನ್ನು ತನ್ನೊಂದಿಗೆ ಕರಗಿಸಿಕೊಂಡು ಅಡಿಗೆಮನೆ ತಲುಪಿಸುವ ಗುಣ ವಿಶೇಷವೇ ಇದಕ್ಕೂ ಕಾರಣವಾಗಿರಬೇಕಲ್ಲವೇ?" ಎಂದು ಮರಕಡಿಯುವವನು ಕೇಳಿದ.

"ಹೌದು. ನೀನು ಬೇಗ ಬಹಳ ಜಾಣನಾದೆ. ಖನಿಜಾಂಶ ಹೊಂದಿದ ನೀರು ಬೇರುಗಳನ್ನು ಸೇರುತ್ತದೆ. ಇಂಗಾಲಾಮ್ಲವನ್ನು ಹೊಂದಿದ ನೀರು ಅಡುಗೆಮನೆ ಸೇರುತ್ತದೆ."

"ನಿಜವಾಗಲೂ! ಪ್ರಕೃತಿಯಲ್ಲಿರುವ ವಸ್ತುಗಳು ವಿಚಿತ್ರ ಗುಣಗಳನ್ನು ಹೊಂದಿವೆ. ಈ ಗುಣಗಳನ್ನು ಜೀವಿಗಳು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳುತ್ತವೆ" ಎಂದು ಮರ ಕಡಿಯುವವನು ತನ್ನ ಅಭಿಪ್ರಾಯ ಹೇಳಿದ.

"ನಾನು ಇನ್ನೊಮ್ಮೆ ಹೇಳುವೆ - ಬದುಕಿರುವ ಎಲ್ಲ ಜೀವಿಗಳೂ ಪರಿಸರಕ್ಕೆ ಹೊಂದಿಕೊಳ್ಳುವುದು ತುಂಬ ಮುಖ್ಯ. ಯಾವ ಜೀವಿ ಪರಿಸರಕ್ಕೆ ತಕ್ಕಂತೆ ಹೊಂದಿಕೊಂಡು ತನ್ನ ಜೀವನ ಕ್ರಮದಲ್ಲಿ ಬದಲಾವಣೆ ಮಾಡಿಕೊಳ್ಳುತ್ತದೆಯೋ ಅದು ಬದುಕಿ ಉಳಿದು ಅಭಿವೃದ್ಧಿ ಹೊಂದುತ್ತದೆ. ಹೊಂದಾಣಿಕೆ ಮಾಡಿಕೊಳ್ಳದ ಜೀವಿಗಳು ನಾಶವಾಗುತ್ತವೆ" ಎಂದು ಈ ಮಾತನ್ನು ಒತ್ತಿ ಹೇಳುತ್ತ ವನದೇವಿ ತನ್ನ ಮಾತನ್ನು ಮುಂದುವರಿಸಿದಳು: "ಈಗ ಆಹಾರ ತಯಾರಿಕೆಗೆ ಆವಶ್ಯಕವಾಗಿ ಬೇಕಾದ ಎಲ್ಲ ಘಟಕಗಳು ಅಡುಗೆ ಮನೆಯ ವಿಭಾಗಗಳನ್ನು ತಲುಪಿದಂತಾಯಿತು. ಅಡುಗೆಯವರು, ನೀರು ಮತ್ತು ಇಂಗಾಲಾಮ್ಲದಂಥ ಸರಳ ವಸ್ತುಗಳನ್ನು ಸೇರಿಸಿ ರುಚಿಯಾದ ಪದಾರ್ಥವನ್ನು ಹೇಗೆ ತಯಾರಿಸುತ್ತಾರೆಂದು ಇನ್ನು ಮುಂದೆ ತಿಳಿಯೋಣ."

"ಹೌದು. ಅದು ಹೇಗಾಗುತ್ತದೆಯೆಂದು ನಾನು ತಿಳಿಯಬೇಕು" ಎಂದು ಹೆಚ್ಚಿನ ಆಸಕ್ತಿಯಿಂದ ಮರ ಕಡಿಯುವವನು ಕೇಳಿದನು.

# ೧೩

“ಒಮ್ಮೆ ನಿನಗೆ ಅರ್ಥವಾದರೆ ಇದೆಲ್ಲಾ ತುಂಬ ಸರಳವಾಗಿದೆ ಎಂದು ತಿಳಿಯುತ್ತದೆ. ನೀರಿನ ಕಣಗಳು ಮತ್ತು ಇಂಗಾಲದ ಡೈ ಆಕ್ಸೈಡ್ ಎಲೆಯ ಅಡುಗೆಮನೆಗಳನ್ನು ತಲುಪಿದಾಗ ಸೂರ್ಯನ ಶಾಖದಿಂದ ಅವು ಸಣ್ಣ ಅಣುಗಳಾಗಿ ಒಡೆಯುತ್ತವೆ. ನಂತರ, ಈ ಅಣುಗಳಲ್ಲಿ ಕೆಲವು ಅಣುಗಳು ಸಂಯೋಗಗೊಂಡು ಸರಳವಾದ ಸಕ್ಕರೆಯ ಆಕಾರ ಪಡೆಯುತ್ತವೆ” ಎಂದು ವನದೇವತೆ ಹೇಳಿದಳು.

“ತಾಳು. ಇದನ್ನು ಸರಿಯಾಗಿ ಅರಿಯುವೆ. ನೀರಿನಲ್ಲಿರುವ ಕಣಗಳು ಮತ್ತು ಇಂಗಾಲದ ಡೈ ಆಕ್ಸೈಡ್ ಮೊದಲು ಬೇರೆ ಬೇರೆ ಆಗಿರುತ್ತವೆ. ಆದರೆ ... ಆದರೆ ಅವು ಪುನಃ ಒಂದಾದರೆ ಸಂಪೂರ್ಣ ಬೇರೆ ವಸ್ತುವಾಗಿ ಹೇಗೆ ಆಕಾರ ಪಡೆಯುತ್ತವೆ?” ಎಂದು ಗೊಂದಲದಿಂದ ಮರ ಕಡಿಯುವವನು ಕೇಳಿದ.

“ವಿವರಿಸುತ್ತೇನೆ ತಾಳು. ಹಗಲಿನಲ್ಲಿ ಎಲೆಯ ಪತ್ರಹರಿತ್ತು ಸೂರ್ಯನ ಶಾಖ ಬಳಸಿಕೊಂಡು ನೀರಿನ ಕಣಗಳನ್ನು ಒಡೆದು ಅದರ ಮೂಲ ಘಟಕಗಳ ರೂಪಕ್ಕೆ ತರುತ್ತದೆ. ಅದರಲ್ಲಿ ಎರಡು ಇಂಗಾಲದ ಕಣಗಳು ಮತ್ತು ಒಂದು ಆಮ್ಲಜನಕದ ಕಣ ಇರುತ್ತದೆ” ಎಂದು ವನದೇವತೆ ಹೇಳಿದಳು.

“ಎಷ್ಟು ವಿಚಿತ್ರವಾಗಿದೆ! ಆ ಪುಟ್ಟ ಅಡಿಗೆಯವರು ಎಲೆಯೊಳಗಿನ ನೀರನ್ನು ಅದರ ಮೂಲರೂಪಕ್ಕೆ ಪರಿವರ್ತಿಸುವ ಸಾಮರ್ಥ್ಯ ಪಡೆದಿರುವರಲ್ಲ. ಅದೂ ಬರೀ ಸೂರ್ಯನ ಕಿರಣಗಳ ಸಹಾಯದಿಂದ!” ಎಂದು ಮರ ಕಡಿಯುವವನು ಆಶ್ಚರ್ಯಪಟ್ಟ.

“ಆ ದಾರಿಯಲ್ಲಿ ಇದು ಬರೀ ಮೊದಲ ಹೆಜ್ಜೆ ಅಷ್ಟೆ. ಮುಂದಿನದು ಇನ್ನೂ ಮುಖ್ಯವಾಗಿದೆ. ಈ ಅಣುಗಳು ಕೆಲವು ಬೇರೆ ಅಣುಗಳ ಜೊತೆ ಸೇರಿಕೊಳ್ಳುತ್ತವೆ. ಇಂಗಾಲದ ಡೈ ಆಕ್ಸೈಡ್ ಒಡೆದು ಅಣು ಆಗುವಾಗ ಈ ಕೆಲಸ ನಡೆಯುತ್ತದೆ ಮತ್ತು ‘ಸಿಹಿವಸ್ತುವಿನ ರೂಪ ಪಡೆಯುತ್ತದೆ” ಎಂದು ವನದೇವತೆ ಹೇಳಿದಳು.

“ಎಲೆಯೊಳಗೆ ನಡೆಯುವುದನ್ನು ದಯವಿಟ್ಟು ವಿವರಿಸು” ಎಂದು ಮರ ಕಡಿಯುವವನು ಅತ್ಯಂತ ಕುತೂಹಲದಿಂದ ಕೇಳಿದ.

“ಹಾಗಾದರೆ ಕೇಳು. ಎಲೆಗಳಲ್ಲಿರುವ ಅಡಿಗೆಯವರು ಯಾವಾಗಲೂ ಒಂದೊಂದು ನೀರಿನ ಕಣವನ್ನೂ ಎರಡು ಜಲಜನಕ ಮತ್ತು ಒಂದು ಆಮ್ಲಜನಕ ಕಣಗಳಾಗಿ ವಿಂಗಡಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ. ಇದರಿಂದ ಜಲಜನಕ ಮತ್ತು ಆಮ್ಲಜನಕದ ಅನೇಕ ಮುಕ್ತ ಕಣಗಳು ಉಂಟಾಗುತ್ತವೆ. ಆದರೆ ಎಲ್ಲ ಕಣಗಳೂ ಸ್ವತಂತ್ರವಾಗಿರುವುದಿಲ್ಲ. ಅವುಗಳಲ್ಲಿ ಕೆಲವು ಮತ್ತೆ ಒಟ್ಟಿಗೆ ಸೇರಿ ನೀರಿನ ಅಣುಗಳಾಗುತ್ತವೆ” ಎಂದು ವನದೇವತೆ ಹೇಳಿದಳು.

“ಆಶ್ಚರ್ಯ! ಅಡಿಗೆಯವರು ನೀರಿನ ಕಣಗಳನ್ನು ಇಂಗಾಲಾಮ್ಲ ಮತ್ತು ಆಮ್ಲಜನಕದ ಕಣಗಳೆಂದು ಬೇರೆ ಮಾಡುವುದು, ಮತ್ತೆ ಅವುಗಳನ್ನು ಸೇರಿಸಿದಾಗ ನೀರಾಗುವುದು. ಹಾಗಾದರೆ ಅವುಗಳನ್ನು ಬೇರೆ ಯಾಕೆ ಮಾಡಬೇಕು?” ಎಂದು ಗಲಿಬಿಲಿಯಿಂದ ಮರ ಕಡಿಯುವವನು ಕೇಳಿದ.

"ಅವುಗಳಲ್ಲಿ ಎಲ್ಲವೂ ಒಂದುಗೂಡುವುದಿಲ್ಲ, ನೆನಪಿಟ್ಟುಕೋ. ಆದರೆ ಇಂಗಾಲಾಮ್ಲ ಮತ್ತು ಆಮ್ಲಜನಕ ಕಣಗಳ ಬೇರೆಯಾದ ಈ ವಿಧದ ಕೆಲಸದಲ್ಲಿ ಒಂದು ದೊಡ್ಡ ಲಾಭವಿದೆ" ಎಂದಳು ವನದೇವತೆ.

"ಏನದು?" ಎಂದು ಮರಕಡಿಯುವವನು ಕೇಳಿದ.

"ನೀರಿನ ಕಣಗಳನ್ನು ಬೇರೆಮಾಡಬೇಕಾದರೆ ಶಕ್ತಿ ಬೇಕು. ಪತ್ರಹರಿತ್ತು ಈ ಕೆಲಸಕ್ಕೆ ಸೂರ್ಯನ ಶಾಖದ ಶಕ್ತಿಯನ್ನು ಬಳಸುತ್ತದೆ. ಅದೇ ಹೊತ್ತಿನಲ್ಲಿ, ನೀರಿನ ಅಂಶವನ್ನು ಒಳಗೊಂಡ ಕಣಗಳು ಪುನಃ ಒಂದಾಗಿ ಅಣುವಿನ ಆಕಾರ ಪಡೆಯುವಾಗ ಒಂದು ಹೊಸ ಶಕ್ತಿಯ ಬಿಡುಗಡೆ ಆಗುತ್ತದೆ" ಎಂದು ವನದೇವತೆ ಹೇಳಿದಳು.

"ಬಹಳ ಆಸಕ್ತಿ ಹುಟ್ಟಿಸುವಂತಿದೆ. ಸೂರ್ಯನ ಶಾಖವು ಒಂದು ರೀತಿಯ ಶಕ್ತಿಯಾಗಿದ್ದು ಆಹಾರ ತಯಾರಿಸುವಾಗ ಎಲೆಗಳು ಅದನ್ನು ಬಳಸುತ್ತವೆ. ಅದೇ ಹೊತ್ತಿಗೆ ಎಲೆಯಲ್ಲಿ ಬೇರೆ ರೀತಿಯಿಂದ ಹೊಸ ಶಕ್ತಿಯ ಉಗಮವಾಗುತ್ತದೆ.* ಎಷ್ಟು ವಿಚಿತ್ರ" ಎಂದು ಮರ ಕಡಿಯುವವನು ಹೇಳಿದ.

"ನೀನು ಸರಿಯಾಗಿ ಹೇಳಿದೆ. ನೀರಿನ ಕಣಗಳನ್ನು ಬಿಟ್ಟು, ಇಂಗಾಲದ ಡೈ ಆಕ್ಸೈಡ್ ಅಣುಗಳು ಕೂಡ ಇಂಗಾಲ ಮತ್ತು ಆಮ್ಲಜನಕದ ಅಣುಗಳಾಗಿ ಒಡೆಯುತ್ತವೆ. ಇವು ಮತ್ತು ನೀರಿನಿಂದ ಬಿಡುಗಡೆಯಾದ ಹೈಡ್ರೊಜನ್ ಅಣುಗಳು ಹೊಸ ಶಕ್ತಿಯ ಸಹಾಯದಿಂದ ಒಂದುಗೂಡಿ ಸಕ್ಕರೆ ಆಗುತ್ತದೆ" ಎಂದು ವನದೇವತೆ ವಿವರಿಸಿದಳು.

"ಅಂದರೆ ಪರಮಾಣುಗಳನ್ನು ಅವುಗಳ ಮೂಲ ಅಣುಗಳಿಂದ ಬೇರೆ ಮಾಡಲು ಸೂರ್ಯನ ಶಕ್ತಿಯ ಬಳಕೆಯಾಗುತ್ತದೆ; ಎಲೆಗಳಲ್ಲಿ ಹುಟ್ಟಿದ ಹೊಸ ಶಕ್ತಿ ಆಹಾರವನ್ನು ತಯಾರಿಸಲು ನೀರಿನ ಪರಮಾಣುಗಳನ್ನು ಮತ್ತು ಇಂಗಾಲದ ಡೈ ಆಕ್ಸೈಡ್‌ನ್ನು ಬೇರೆ ಮಾಡಲು ಉಪಯೋಗವಾಗುತ್ತದೆ."

"ಹೌದು. ಪರಮಾಣುವನ್ನು ಒಡೆದು ಸೂರ‍್ಯನ ಬೆಳಕನ್ನು ಬಳಸುವುದರಲ್ಲಿ ಹಾಗೂ ಎಲೆಯಲ್ಲಿ ಹೊಸದಾಗಿ ಉತ್ಪಾದನಗೊಂಡ ಶಕ್ತಿಯನ್ನು ಬಳಸಿ ಈ ವಿಭಜಿತ ಪರಮಾಣುಗಳ ಆಹಾರವನ್ನು ಮಾಡುವುದರಲ್ಲಿ ಒಂದು ಅನುಕೂಲವಿದೆ." ಎಂದಳು ವನದೇವತೆ. ಅವಳು ತನ್ನ ಮಾತು ಮುಂದುವರಿಸಲೆಂದು ಮರಕಡಿಯುವವನು ಹಾಗೇ ಕಾದ.

ಹೀಗೆ ಸೂರ್ಯನ ಶಾಖದ ಮಹತ್ವ ಮತ್ತು ಪತ್ರಹರಿತ್ತುವಿನ ಕೆಲಸವನ್ನು ವನದೇವತೆ ಮರ ಕಡಿಯುವವನಿಗೆ ಅರ್ಥವಾಗುವಂತೆ ತಿಳಿಸಿದಳು. ಮತ್ತು ಈ ಕೆಲಸ ಹಗಲುಹೊತ್ತಿನಲ್ಲಿ ಮಾತ್ರ ನಡೆಯುವುದು ಎಂದಳು. "ಇನ್ನೊಂದು ಕಡೆ, ಎಲೆಯಲ್ಲಿ ಉಂಟಾಗುವ ಶಕ್ತಿಯನ್ನು ಬಳಸಿಕೊಂಡು ರಾತ್ರಿ ವೇಳೆಯಲ್ಲೂ ಆಹಾರದ ತಯಾರಿಕೆ ನಡೆಯುತ್ತದೆ" ಎಂದೂ ಹೇಳಿದಳು.

"ಆಹಾ! ನಾನು ಅದನ್ನೆಂದೂ ಯೋಚಿಸಿರಲಿಲ್ಲ" ಎಂದು ಮರ ಕಡಿಯುವವನು ವಿಸ್ಮಯದಿಂದ ಕೂಗಿದ.

"ಈ ಎಲ್ಲ ಕಾರ್ಯಗಳ ನಡುವೆ ಮಾನವ ಜನಾಂಗಕ್ಕೆ ತುಂಬ ಉಪಯುಕ್ತವಾದ ಕಾರ್ಯವೂ ನಡೆಯುತ್ತದೆ" ಎಂದು ವನದೇವತೆ ಹೇಳಿದಾಗ ಮರ ಕಡಿಯುವವನು "ಆಹಾ! ಒಂದಕ್ಕಿಂತ ಒಂದು ಆನಂದ ಕೊಡುವ ವಿಷಯಗಳಾಗಿವೆ" ಎಂದು ಮುಂದಿನದನ್ನು ಕೇಳಲು ಉತ್ಸಾಹ ತೋರಿದನು.

"ಈಗ ನಿನಗೆ ತಿಳಿದಿರಬೇಕು, ಸೂರ್ಯನ ಶಾಖದಿಂದ ಪತ್ರಹರಿತ್ತು ನೀರಿನ ಪರಮಾಣುಗಳನ್ನು ಒಡೆಯುತ್ತದೆ. ಜಲಜನಕದ ಮತ್ತು ಆಮ್ಲಜನಕದ ಕೆಲವು ಅಣುಗಳು ನೀರಾಗಲು ಪುನಃ ಒಂದಾಗುತ್ತದೆ. ಅವುಗಳಲ್ಲಿ ಉಳಿದ ಸ್ವತಂತ್ರ ಅಣುಗಳು ಮತ್ತು ಜಲಜನಕದ ಅಣುಗಳು ಮಾತ್ರ ಆಹಾರದ ತಯಾರಿಕೆಯಲ್ಲಿ ಬಳಕೆಯಾಗುತ್ತವೆ. ಆಗ ಆಮ್ಲಜನಕದ ಅಣುಗಳು ಎಲೆಯ ಕೆಳಗಿರುವ ರಂಧ್ರಗಳ ಮೂಲಕ ನುಣುಚಿಕೊಂಡು ವಾತಾವರಣಕ್ಕೆ ಸೇರುತ್ತವೆ" ಎಂದು ವನದೇವತೆ ಹೇಳಿದಳು.

"ಸಸ್ಯಗಳು ಮನುಷ್ಯರು ತಿನ್ನಬಹುದಾದ ಆಹಾರವನ್ನು ತಯಾರಿಸುವುದಲ್ಲದೆ, ತನ್ನ ಸುತ್ತಲಿನ ಗಾಳಿಗೆ ಆಮ್ಲಜನಕವನ್ನು ಕೊಡುತ್ತವೆ" ಎಂದು ಕೇಳಿಸಿಕೊಂಡು ಮರ ಕಡಿಯುವವನು "ಒಂದೇ ಕೆಲಸದಿಂದ ಎರಡು ಲಾಭಗಳನ್ನು ಗಳಸಿದಂತಾಯಿತು" ಎಂದು ಅವಳ ಮಾತನ್ನು ಆಶ್ಚರ್ಯದಿಂದ ಒಪ್ಪಿಕೊಂಡ.

"ನೀನು ಇನ್ನೂ ತಿದ್ದಿಕೊ, ಒಂದೇ ವಿಧಾನದಿಂದ ಮೂರು ಲಾಭಗಳು - ಆಹಾರ ತಯಾರಿಕೆಯಲ್ಲಿ ಮೊದಲು ಸಕ್ಕರೆ ಸಿಗುತ್ತದೆ. ಆ ಕೆಲಸಕ್ಕೆ ಸಸ್ಯ ಇಂಗಾಲದ ಡೈ ಆಕ್ಸೈಡ್ ಬಳಸುವುದರಿಂದ ಸುತ್ತಲಿನ ಗಾಳಿ ಪರಿಶುದ್ಧವಾಗುತ್ತದೆ. ಕೊನೆಯಲ್ಲಿ ಎಲೆಗಳಿಂದ ಆಮ್ಲಜನಕದಂತಹ ಪ್ರಾಣವಾಯು ಸಿಗುತ್ತದೆ. ಅದು ಮಾನವರ ಉಸಿರಾಟಕ್ಕೆ ಅತ್ಯಾವಶ್ಯಕವಾಗಿದೆ" ಎಂದು ವಿವರಣೆ ನೀಡಿದಳು.

ಮರ ಕಡಿಯುವವನು ಆನಂದದಿಂದ ಚಪ್ಪಾಳೆ ತಟ್ಟಿದನು. "ಸಸ್ಯಗಳು ನಿಜವಾಗಲೂ ದೇವರ ಅದ್ಭುತ ಸೃಷ್ಟಿಯಾಗಿವೆ! ಎನ್ನುತ್ತಾ ತನ್ನ ಸಂಶಯವನ್ನು ಅವಳ ಮುಂದಿಟ್ಟನು." "ನೀರು ಮತ್ತು ಇಂಗಾಲದ ಡೈ ಆಕ್ಸೈಡ್ ಪರಮಾಣುಗಳು ಪ್ರಮಾಣಬದ್ಧವಾಗಿ ಹೇಗೆ ಒಡೆಯುತ್ತವೆ? ಮತ್ತು ಅವು ಯಾವ ರೀತಿಯಲ್ಲಿ ಒಂದುಗೂಡುತ್ತವೆ? ಎಂದು ವಿವರಿಸಿದರೆ ನಾನು ಇನ್ನೂ ಚೆನ್ನಾಗಿ ತಿಳಿದುಕೊಂಡಂತಾಗುತ್ತದೆ" ಎಂದು ಕೇಳಿದಾಗ, ವನದೇವತೆ ಒಪ್ಪಿಕೊಂಡಳು.

---

* ಎಲೆಗಳಲ್ಲಿ ಉತ್ಪನ್ನವಾದ ಈ ಹೊಸಶಕ್ತಿಯನ್ನು ಅಡೆನೋಸೈನ್ ಟ್ರೈ ಫಾಸ್ಫೇಟ್ (ATP) ಎನ್ನುತ್ತಾರೆ.

# ೧೪

"ಸಸ್ಯಗಳು ನೀರು ಮತ್ತು ಇಂಗಾಲದ ಡೈ ಆಕ್ಸೈಡ್‌ನಂತಹ ಸರಳ ವಸ್ತುಗಳನ್ನು ಬಳಸಿಕೊಂಡು ಸಕ್ಕರೆಯನ್ನು ಹೇಗೆ ತಯಾರಿಸುತ್ತವೆ ಎಂದು ವಿವರಿಸುತ್ತೇನೆ" ಎಂದು ಹೇಳುತ್ತಾ ವನದೇವತೆ ಮಾತನ್ನು ಮುಂದುವರೆಸಿದಳು:

"ಸೂರ್ಯನ ಬೆಳಕು ಎಲೆಗಳ ಮೇಲೆ ಬಿದ್ದು ಅಡುಗೆಮನೆಯನ್ನು ಬೇಧಿಸಿಕೊಂಡು ಎಲೆಗಳೊಳಗೆ ತೂರುತ್ತದೆ. ಇಲ್ಲಿ ಪತ್ರಹರಿತ್ತು ಸೂರ್ಯನ ಶಾಖವನ್ನು ಬಳಸಿಕೊಂಡು ನೀರಿನ ಪ್ರತಿಯೊಂದು ಕಣವನ್ನೂ ಅದರ ಮೂಲಾಂಶಗಳನ್ನಾಗಿ ಒಡೆಯುತ್ತದೆ. ಹೀಗೆ ಪ್ರತಿಯೊಂದು ಪರಮಾಣುವಿನಿಂದ ಜಲಜನಕದ ಎರಡು ಅಣುಗಳು ಮತ್ತು ಆಮ್ಲ ಜನಕದ ಒಂದು ಅಣು ದೊರೆಯುತ್ತದೆ. ನಾನು ಮೊದಲು ಹೇಳಿದ ಹಾಗೆ ಈ ಕೆಲಸ ಹಗಲುಹೊತ್ತಿನಲ್ಲಿ ಸೂರ್ಯನ ಬೆಳಕಿನಲ್ಲಿ ಮಾತ್ರ ನಡೆಯುತ್ತದೆ. ಆಗ ಜಲಜನಕ ಮತ್ತು ಆಮ್ಲಜನಕದ ಕೆಲವು ಅಣುಗಳು ಪುನಃ ಸೇರಿಕೊಂಡು ನೀರಿನ ರೂಪ ಪಡೆಯುತ್ತವೆ. ಅವು ಅಡುಗೆಮನೆಯ ಗೋಡೆಗಳ ಮೂಲಕ ಹಾದು ಕೆಳಗಿರುವ ಸ್ಪಂಜಿನ ಕೋಶಗಳನ್ನು ತಲುಪುವ ಸ್ವಾತಂತ್ರ್ಯವನ್ನು ಪಡೆದಿವೆ. ಈ ಸಡಿಲ ಸ್ಪಂಜಿನ ಕೋಶಗಳು ಆಮ್ಲಜನಕ ತಮ್ಮ ಮೂಲಕ ಹಾದು ಹೋಗಲು ಅನುವು ಮಾಡಿಕೊಡುತ್ತವೆ. ನಂತರ ಆಮ್ಲಜನಕವು ಎಲೆಗಳ ತಳಭಾಗದಲ್ಲಿರುವ ರಂಧ್ರಗಳ ಮೂಲಕ ಹೊರ ಹೋಗಿ ವಾತಾವರಣದ ಜೊತೆ ಸೇರಿಕೊಳ್ಳುತ್ತದೆ. ಆಗ ಎಲೆಗಳಲ್ಲಿರುವ ಸ್ವತಂತ್ರ ಅಣುಗಳು ಕೇವಲ ಜಲಜನಕದ ಅಣುಗಳಾಗಿರುತ್ತವೆ."

ಮರ ಕಡಿಯುವವನು ತಲೆಯಲ್ಲಾಡಿಸುತ್ತಾ ಹೇಳಿದ: "ನೀನು ಹೇಳಿದ್ದು ಈಗ ನನಗೆ ಅರ್ಥವಾಯಿತು. ನಂತರ ಎಲೆಗಳಲ್ಲಿ ಮತ್ತೇನಾಗುತ್ತದೆ?"

"ನಾನು ಹೇಳಿದ್ದನ್ನು ನೀನು ನೆನಪಿಸಿಕೋ. ಗಾಳಿಯಲ್ಲಿರುವ ಇಂಗಾಲದ ಡೈ ಆಕ್ಸೈಡ್ ಎಲೆಗಳ ಕೆಳಗಿರುವ ರಂಧ್ರಗಳ ಮೂಲಕ ಪ್ರವೇಶಿಸುತ್ತದೆ. ಪ್ರತಿಯೊಂದು ಪರಮಾಣುವಿನಲ್ಲೂ ಒಂದು ಇಂಗಾಲದ ಅಣು ಮತ್ತು ಎರಡು ಆಮ್ಲಜನಕದ ಅಣುಗಳಿರುತ್ತವೆ. ಇವು ಅಡುಗೆಮನೆಯ ಕೋಶಗಳಲ್ಲಿರುವ ಸ್ವತಂತ್ರ ಜಲಜನಕದ ಅಣುಗಳೊಂದಿಗೆ ಸೇರಿಕೊಳ್ಳುತ್ತವೆ. ಈ ಅಣುಗಳು ಸೇರಿಕೊಳ್ಳಲು ಯಾವುದು ಸಹಾಯ ಮಾಡುತ್ತದೆ ಎಂದು ನೀನು ಹೇಳುವೆಯಾ?" ಎಂದು ವನದೇವತೆ ಕೇಳಿದಳು.

"ಆಗಲಿ, ನಾನು ಹೇಳುವೆ, ಎಲೆಯೊಳಗೆ ಒಂದು ಹೊಸ ಶಕ್ತಿ ಹುಟ್ಟುತ್ತದೆ, ಅದು ಅಣುಗಳು ಒಂದುಗೂಡಲು ಸಹಾಯಮಾಡುತ್ತದೆ ಎಂದು ನೀನು ಆಗಲೆ ಹೇಳಿದೆಯಲ್ಲ" ಎಂದು ಮರ ಕಡಿಯುವವನು ಸರಿಯಾಗಿ ಹೇಳಿದ.

"ನೀನು ಹೇಳಿದ್ದು ಸರಿಯಾಗಿದೆ. ಆ ಹೊಸ ಶಕ್ತಿ, ಇಂಗಾಲದ ಅಣುಗಳು ಆಮ್ಲಜನಕದ ಆರು ಅಣುಗಳು ಮತ್ತು ಜಲಜನಕದ ಹನ್ನೆರಡು ಅಣುಗಳು ಸೇರಲು ಸಹಾಯ ಮಾಡುತ್ತದೆ. ಈ ಅಣುಗಳು ಒಟ್ಟಿಗೆ ಸೇರಿದಾಗ ಅದರ ಪರಿಣಾಮ ಏನಾಗುತ್ತದೆಂದರೆ ಫ್ರಾಕ್ಟೋಸ್ ಎಂಬ ಸಕ್ಕರೆ ರೂಪತಾಳುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಇಂಗಾಲದ ಡೈ ಆಕ್ಸೈಡ್ ಪರಮಾಣುಗಳು ಮತ್ತು ಆರು ಜಲಜನಕದ ಪರಮಾಣುಗಳು ಸೇರಿ ಫ್ರಾಕ್ಟೋಸ್ ಆಗುತ್ತದೆ" ಎಂದು ವನದೇವತೆ ವಿವರಿಸಿದಳು.

"ಹಾಗೋ. ಪತ್ರಹರಿತ್ತು ಕೆಲವು ಪರಮಾಣುಗಳನ್ನು ವಿಭಜಿಸುತ್ತದೆ. ಎಲೆಯಲ್ಲಿ ಹುಟ್ಟಿಕೊಂಡ ಹೊಸ

ಶಕ್ತಿ ಕೆಲವು ನಿರ್ದಿಷ್ಟ ಅಣುಗಳನ್ನು ಸೇರಿಸಿ ಫ್ರಾಕ್ಟೋಸ್ ತಯಾರಿಸುತ್ತದೆ. ಕೊನೆಗೂ ಇದು ನನಗೆ ಚೆನ್ನಾಗಿ ಅರ್ಥವಾಯಿತು. ಆದರೆ ಸಸ್ಯವು ಶರ್ಕರಪಿಷ್ಟಾದಿಗಳನ್ನು ಹೇಗೆ ತಯಾರಿಸುತ್ತದೆ?" ಎಂದು ಮರ ಕಡಿಯುವವನು ಕುತೂಹಲದಿಂದ ಕೇಳಿದ.

"ಅಡುಗೆಯವರಾದ ಪತ್ರಹರಿತ್ತು ಶರ್ಕರಪಿಷ್ಟಾದಿಗಳನ್ನು ತಯಾರಿಸುವುದರಲ್ಲಿ ಯಾವ ಪಾತ್ರವನ್ನೂ ವಹಿಸುವುದಿಲ್ಲ. ಎಲೆಯಲ್ಲಿ ಕೆಲವು ನಿರ್ದಿಷ್ಟ ಎನ್‌ಸೈಮುಗಳು ಫ್ರಾಕ್ಟೋಸಿನ ಪರಮಾಣುಗಳನ್ನು ಒಟ್ಟಿಗೆ ತಂದು ವೇಗವರ್ಧಕಗಳಾಗಿ ಘರ್ಷಿಸಿ ಪಿಷ್ಟವನ್ನು ತಯಾರಿಸುತ್ತವೆ."

"ಹಾಗೆಂದರೆ, ಫ್ರಕ್ಟೋಸ್ ಎನ್‌ಸೈಮುಗಳ ಇರುವಿಕೆಯಲ್ಲಿ ಪಿಷ್ಟದ ಪರಿವರ್ತನೆ ಆಗುತ್ತದೆ" ಎಂದು ಮರಕಡಿಯುವವನು ಮಧ್ಯದಲ್ಲಿ ಹೇಳಿದ.

"ಅದು ಸರಿ. ಎನ್‌ಸೈಮುಗಳು ಈ ಬದಲಾವಣೆಯನ್ನು ಸರಳವಾಗಿ ಮಾಡುತ್ತವೆ. ಏಕೆಂದರೆ ಫ್ರಕ್ಟೋಸ್ ಮತ್ತು ಪಿಷ್ಟ ಒಂದೇ ರೀತಿಯ ಅಣುಗಳನ್ನು ಹೊಂದಿವೆ. ಆದರೆ, ಈ ಅಣುಗಳು ಪಿಷ್ಟದಲ್ಲಿ ಜಾಸ್ತಿ ಇವೆ. ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ಆರು ಇಂಗಾಲದ ಅಣುಗಳು, ಹತ್ತು ಜಲಜನಕದ ಅಣುಗಳು ಮತ್ತು ಐದು ಆಮ್ಲಜನಕದ ಅಣುಗಳು ಸೇರಿಕೊಂಡು ಪಿಷ್ಟದ ರೂಪ ಪಡೆಯುತ್ತವೆ."

"ಓಹೋ! ಇದು ನಮ್ಮ ಅಡುಗೆಮನೆಗಳಲ್ಲಿ ಏನೇನು ನಡೆಯುವುದೋ ಅದನ್ನೆಲ್ಲ ನೆನಪಿಗೆ ತರುತ್ತದೆ" ಎಂದು ಮರಕಡಿಯುವವನು ಅಭಿಪ್ರಾಯಪಟ್ಟ.

"ಅಂದರೆ, ನಾವು ಅನೇಕ ವಸ್ತುಗಳು ಸಕ್ಕರೆ, ಹಿಟ್ಟು, ಉಪ್ಪು ಅಥವ ಎಣ್ಣೆ ಇವುಗಳನ್ನು ವಿವಿಧ ಪ್ರಮಾಣಗಳಲ್ಲಿ ಸೇರಿಸಿ ವಿಧವಿಧದ ಸಿಹಿ ಪದಾರ್ಥ ಮತ್ತು ರುಚಿಯಾದ ಅಡುಗೆಗಳನ್ನು ಮಾಡುತ್ತೇವೆ. ಅದೇ ರೀತಿ ಸಸ್ಯಗಳ ಅಡುಗೆ ಮನೆಯಲ್ಲೂ ಇಂಥದೇ ಕೆಲಸ ನಡೆಯುವಂತೆ ತೋರುತ್ತದೆ."

"ಹೌದು. ನಿಮ್ಮ ಅಡುಗೆಮನೆಗಳಲ್ಲಿ ನೀವು ಮೂರು ನಾಲ್ಕು ಮೂಲ ವಸ್ತುಗಳನ್ನು ಸೇರಿಸಿ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸುತ್ತೀರಿ. ಅದೇ ರೀತಿ ಸಸ್ಯಗಳಲ್ಲೂ ಇಂಗಾಲದ ಅಣು, ಜಲಜನಕದ ಅಣು, ಆಮ್ಲಜನಕದ ಮತ್ತು ನೈಟ್ರೋಜನ್ ಅಣುಗಳೂ ವಿವಿಧ ಸಂಖ್ಯೆಯಲ್ಲಿ ಸೇರಿಕೊಂಡು ಆಹಾರದ ವಿಧಗಳಾದ ಪಿಷ್ಟ, ಪ್ರೋಟೀನ್ ಮತ್ತು ಕೊಬ್ಬು ಆಗುತ್ತವೆ. ಆದರೆ, ಆ ಹಸಿರು ಅಡುಗೆಯವರು ಈ ಎಲ್ಲ ರೀತಿ ಆಹಾರ ತಯಾರಿಕೆಯಲ್ಲೂ ಪಾತ್ರವಹಿಸುತ್ತಾರೆ ಎಂಬುದನ್ನು ಮರೆಯಬೇಡ. ವೇಗವರ್ಧಕಗಳಾಗಿ ಕೆಲಸ ಮಾಡುವ ಎನ್‌ಸೈಮುಗಳು ಇಂಥ ಆಹಾರ ಪದಾರ್ಥವನ್ನು ತಯಾರಿಸುವ ಜವಾಬ್ದಾರಿ ಹೊತ್ತಿವೆ."

ಎಂದು ವನದೇವತೆ ಹೇಳಿದಾಗ ಮರಕಡಿಯುವವನು ಆಳವಾದ ಉಸಿರುಬಿಟ್ಟು ಹೇಳಿದ.

"ಇದು ನಿಜವಾಗಲೂ ಒಂದು ಪವಾಡ! ಸರಳ ಘಟಕಗಳಾದ ಗಾಳಿ, ನೀರು ಮತ್ತು ಮಣ್ಣಿನಲ್ಲಿರುವ ಜೈವಿಕ ಲವಣಗಳನ್ನು ಉಪಯೋಗಿಸಿಕೊಂಡು ಎಂಥ ರುಚಿಕರ ಆಹಾರ ತಯಾರಾಗುತ್ತದೆ! ಇದೆಲ್ಲ ಗಿಡದ ಅತ್ಯಂತ ಸೂಕ್ಷ್ಮ ಮತ್ತು ತೆಳ್ಳನೆ ಭಾಗವಾದ ಎಲೆಯಲ್ಲಿ ನಡೆಯುತ್ತದೆ. ನಾನು ಇನ್ನೂ ಇದನ್ನು ನಂಬಲಾರೆ."

ಮರಕಡಿಯುವವನು ನಂತರ ತನ್ನ ಕೈಯಲ್ಲಿದ್ದ ಎಲೆಯನ್ನು ನೋಡಿದ. ಮಾಂತ್ರಿಕ ಉಂಗುರದ ಸಹಾಯದಿಂದ ಎಲೆಯನ್ನು ಚೆನ್ನಾಗಿ ಪರೀಕ್ಷೆ ಮಾಡಿದ. ಆಗ ಎಲೆಯ ತಳಭಾಗದಲ್ಲಿ ತುಟಿಗಳಂತಿರುವ ಸಾವಿರಾರು ಸಣ್ಣ ಸಣ್ಣ ರಂಧ್ರಗಳು ಅವನ ಗಮನ ಸೆಳೆದವು. ಅವನು ವನದೇವತೆಯನ್ನು ಕೇಳಿದ. "ಈ ರಂಧ್ರಗಳು ಬಾಯಿಗಳನ್ನು ಏಕೆ ಹೊಂದಿವೆ? ನೀನು ಹೇಳಿದ ಹಾಗೆ ಗಾಳಿಯಲ್ಲಿರುವ ಇಂಗಾಲದ ಡೈ ಆಕ್ಸೈಡ್ ಎಲೆಗಳೊಳಕ್ಕೆ ಮತ್ತು ಎಲೆಗಳಲ್ಲಿರುವ ಮುಕ್ತ ಆಮ್ಲಜನಕದ ಗಾಳಿ ಈ ರಂಧ್ರಗಳ ಮೂಲಕ ಸೇರುತ್ತವೆ. ಇದು ನಡೆಯುವುದಕ್ಕೆ ಈ ತುಟಿಗಳಂಥ ರಚನೆಗಳು ಅಗತ್ಯವೇ?"

"ನೀನು ಈ ಪ್ರಶ್ನೆ ಕೇಳಿದ್ದು ತುಂಬಾ ಸಂತೋಷವಾಯಿತು" ಎಂದು ಹೇಳುತ್ತಾ ಮುಂದುವರಿಸಿದಳು. "ಈ ಬಾಯಿಗಳು (ಅಂಚುಗಳು) ವಿಶೇಷ ರೀತಿಯಲ್ಲಿ ಕೆಲಸ ಮಾಡುತ್ತವೆ. ನಿಜವಾಗಲೂ, ಪ್ರಕೃತಿಯಲ್ಲಿ ಉದ್ದೇಶವಿಲ್ಲದೆ ಯಾವುದೂ ಇರುವುದಿಲ್ಲ. ಗಿಡಗಳ ಬದುಕಿನಲ್ಲಿ ನೀರು ಬಹು ಮುಖ್ಯ ಪಾತ್ರವನ್ನು ಹೊಂದಿದೆ. ಆಹಾರದ ತಯಾರಿಕೆಯಲ್ಲಿ ಅದನ್ನು ಬಳಸಲಾಗುತ್ತದೆ. ಆಹಾರ ಸಿದ್ಧವಾದ ಮೇಲಿನ ನೀರಿನ ಮೂಲಕವೇ ಅದು ಸಸ್ಯದ ಎಲ್ಲ ಭಾಗಗಳಿಗೆ ತಲುಪುತ್ತದೆ. ಇನ್ನೂ ಹೇಳಬೇಕೆಂದರೆ, ಎಲೆಗಳಂತಹ ಮೃದುವಾದ ಭಾಗಗಳು ತಮ್ಮಲ್ಲಿ ನೀರನ್ನು ಹೊಂದಿರುವುದರಿಂದಲೇ ನೇರವಾಗಿ ಮತ್ತು ಮೃದುವಾಗಿ ಇರುತ್ತವೆ."

"ಅದು ನನಗೆ ಗೊತ್ತಿರಲಿಲ್ಲ" ಎಂದು ಮರಕಡಿಯುವವನು ತುಂಬ ಆಶ್ಚರ್ಯದಿಂದ ಹೇಳಿದನು.

"ಸಸ್ಯದ ಎಲ್ಲ ಭಾಗಗಳು ಮಿಲಿಯನ್‌ಗಟ್ಟಲೆ ಇರುವ ಸಣ್ಣ ಕೋಶಗಳಿಂದ ಆಗಿವೆ. ಈ ಕೋಶಗಳು ನೀರಿನಿಂದ ತುಂಬಿಕೊಂಡಾಗ ಎಲೆಗಳು, ಕಾಂಡ, ಮತ್ತು ಇತರ ಭಾಗಗಳು ನೇರವಾಗಿ ನಿಮಿರಿಕೊಂಡು ನಿಲ್ಲುವ ಸಾಮರ್ಥ್ಯಪಡೆಯುತ್ತವೆ" ಎಂದು ವಿವರಿಸಿದಳು.

"ನನಗೆ ಈಗ ತಿಳಿಯಿತು, ಸಸ್ಯಗಳಲ್ಲಿ ನೀರು ಕಡಿಮೆ ಆದಾಗ ಅವು ಜೋತುಬಿದ್ದು, ಒಣಗಿ ಕೊಳ್ಳುತ್ತವೆ" ಮರ ಕಡಿಯುವವನು ಅವಳ ಮಾತಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದನು.

"ಗಿಡದಲ್ಲಿರುವ ಎಲ್ಲ ಕೋಶಗಳು ಅತ್ಯಾವಶ್ಯಕವಾಗಿ ನೀರಿನಿಂದ ತುಂಬಿರಲೇಬೇಕು. ಎಲ್ಲ ಕೋಶಗಳು ತುಂಬಿಕೊಂಡಾಗ ಎಲೆಯ ತಳಭಾಗದಲ್ಲಿರುವ ರಂಧ್ರಗಳು ನೀರಿನಿಂದ ತುಂಬಿಕೊಳ್ಳುತ್ತವೆ. ಈ ರಂಧ್ರಗಳು ವಾತಾವರಣಕ್ಕೆ ತೆರೆದುಕೊಂಡಿವೆ. ಆದ್ದರಿಂದ ಅವುಗಳಲ್ಲಿರುವ ನೀರು ನಿರಂತರವಾಗಿ ಆವಿಯಾಗುತ್ತಿರುತ್ತದೆ. ಮತ್ತು ನೀರಿನ ಹಬೆಯಾಗಿ ಗಾಳಿಗೆ ಸೇರುತ್ತದೆ. ಗಿಡದಲ್ಲಿ ಬೇಕಾದಷ್ಟು ನೀರು ಇದ್ದಾಗ, ನೀರಿನ ಆವಿಯಿಂದಾಗುವ ನೀರಿನ ನಷ್ಟದ ಪರಿಣಾಮ ಗಿಡದ ಮೇಲೆ ಆಗುವುದಿಲ್ಲ. ಆದರೆ, ಗಿಡ, ಹೀಗೆ ನೀರನ್ನೂ ಕಳೆದುಕೊಳ್ಳಬಾರದು. ಅಂತಹ ಸಂದರ್ಭದಲ್ಲಿ ನೀರು ಹೊರಗೆ ಹೋಗದಂತೆ ಈ ಅಂಚುಗಳು ತಡೆಗಟ್ಟುತ್ತವೆ" ಎಂದು ವನದೇವತೆ ವಿವರಿಸಿದಳು.

"ಬಹಳ ಚೆನ್ನಾಗಿದೆ! ಆ ಅಂಚುಗಳು ಅಂತಹ ಮುಖ್ಯ ಕೆಲಸ ಮಾಡುತ್ತವೆ ಎಂದು ನಾನು ಊಹಿಸಿರಲಿಲ್ಲ" ಎಂದು ಮರ ಕಡಿಯುವವನು ತನಗರಿವಿಲ್ಲದೆ ಕೂಗಿ ಹೇಳಿದ. "ಎಲೆಗಳಲ್ಲಿ ವಿಪುಲ ನೀರಿದ್ದಾಗ ಈ ಅಂಚುಗಳು ನೀರನ್ನು ಹೀರಿಕೊಂಡು ಊದಿಕೊಳ್ಳುತ್ತವೆ. ಅವುಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಎರಡು ಬಾಣಗಳಂತೆ ಬಾಗುತ್ತವೆ. ಆಗ ರಂಧ್ರಗಳು ತೆರೆದುಕೊಂಡೇ ಇರುತ್ತವೆ ಮತ್ತು ನೀರು ಸ್ವತಂತ್ರವಾಗಿ ಆವಿ ಆಗುತ್ತಿರುತ್ತದೆ. ಎಲೆಗಳಲ್ಲಿ ನೀರು ಕಡಿಮೆ ಆದಾಗ ಅಂಚುಗಳಲ್ಲಿ ನೀರು ಕಡಿಮೆ ಆಗಿ ಅವು ನೇರವಾಗಿ ಮತ್ತು ಕಡಿಮೆ ಬಾಗಿಕೊಂಡಿರುತ್ತವೆ. ಅಂಚುಗಳು ಹೀಗಿರುವಾಗ, ರಂಧ್ರ ಮುಚ್ಚಿಕೊಳ್ಳುವುದು ಮತ್ತು ನೀರಿನ

ಆವಿಯಾಗುವ ಕ್ರಿಯೆ ನಡೆಯುವುದು" ಎಂದು ವನದೇವತೆ ಹೇಳಿದಳು.

"ಆಹಾ! ಅಂಚುಗಳು ಹಾಗಾದರೆ ಬಾಗಿಲು ಕಾಯುವವರಂತೆ ಇರುತ್ತವೆ - ರಂಧ್ರಗಳನ್ನು ತೆರೆದಿಡಲು ಇಲ್ಲವೆ ನೀರು ಆವಿಯಾಗುವಂತೆ ಮಾಡಲು ಅಥವಾ ನೀರು ಕಡಿಮೆ ಆದಾಗ ರಂಧ್ರಗಳನ್ನು ಮುಚ್ಚಲು; ಮತ್ತು ನೀರಿನ ಆವಿಯಿಂದ ಉಂಟಾಗುವ ನಷ್ಟವನ್ನು ಹೀಗೆ ತಡೆಗಟ್ಟುತ್ತವೆ" ಎಂದು ಮರಕಡಿಯುವವನು ಹೇಳಿದ.

. "ಸರಿಯಾಗಿ ಹೇಳಿದೆ. ಸಸ್ಯವು ಬೀಜದಿಂದ ತನ್ನ ಬದುಕು ಪ್ರಾರಂಭಿಸುತ್ತದೆ. ಮೊಳಕೆಯೊಡೆದು, ಬೇರು ಬಿಟ್ಟು, ಗಿಡವಾಗಿ ಬೆಳೆದು ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳುವ ಶಕ್ತಿ ಪಡೆದಿದೆ ಎಂದು ಅದರ ಎಲ್ಲ ಕತೆ ಕೇಳಿದೆ. ಈಗ ಕತೆಯ ಉಳಿದ ಭಾಗವನ್ನು ಆಲಿಸು. ಗಿಡವು ವಯಸ್ಸಿಗೆ ಬಂದ ಮೇಲೆ ಮದುವೆ ಆಗುತ್ತದೆ ಮತ್ತು ದ್ವಿಗುಣಗೊಳ್ಳುತ್ತಾ ಹೋಗುತ್ತದೆ" ಎಂದು ಹೇಳಿ ವನದೇವತೆ ಸ್ವಲ್ಪ ಹೊತ್ತು ಅವನಲ್ಲಿ ಕುತೂಹಲ ಕೆರಳಿಸಲು ಸುಮ್ಮನಾದಳು.

"ಮದುವೆ? ಸಸ್ಯಗಳ ಮದುವೆ? ದಯವಿಟ್ಟು ಆ ವಿಷಯವನ್ನೆಲ್ಲಾ ಹೇಳು" ಎಂದು. ಮರ ಕಡಿಯುವವನು ಅತ್ಯಂತ ಆವೇಶದಿಂದ ಕೂಗಿದ.

# ೧೬

"ಮದುವೆ ಅಂದರೆ ತುಂಬಾ ತಮಾಷೆ ಮತ್ತು ಆನಂದವಿರುತ್ತದೆ. ಹೌದೋ ಅಲ್ಲವೋ? ಹಾಗೇ ಸಸ್ಯ ಸಾಮ್ರಾಜ್ಯದಲ್ಲೂ ಕೂಡ. ಮದುವೆಯ ಕಾಲ ಹತ್ತಿರ ಬಂದಹಾಗೆ ಸಸ್ಯಗಳು ತುಂಬ ಸಂತೋಷದಿಂದ ಇರುತ್ತವೆ, ಬೇಕಾದಷ್ಟು ಬಣ್ಣದ ಮತ್ತು ಸುವಾಸನೆಯ ಹೂಗಳು ಅರಳುತ್ತವೆ. ಅದೊಂದು ಸುಂದರ ದೃಶ್ಯ. ಹೂಗಳು ಮಧುವಿನಿಂದ ಮತ್ತು ಪರಾಗದಿಂದ ತುಂಬಿಕೊಳ್ಳುತ್ತವೆ. ಕಲ್ಪಿಸಿಕೋ. ಹೀಗೆ ಸಾವಿರಾರು ಮದುವೆಗಳು ಸಸ್ಯಗಳಲ್ಲಿ ನಡೆಯುತ್ತವೆ. ಏನು ಉಲ್ಲಾಸ ಮತ್ತು ಸಂಭ್ರಮ!" ಎಂದು ವನದೇವತೆ ಖುಷಿಯಿಂದ ಹೇಳಿದಳು.

"ನಂಬಲಸಾಧ್ಯ! ಸಸ್ಯಗಳಲ್ಲೂ ಅನೇಕ ಮದುವೆಗಳು! ಎಂದು ಕೇಳಿ ಮರಕಡಿಯುವವನು ಚಕಿತನಾದ."

"ಪ್ರತಿಯೊಂದು ಹೂವೂ ಒಂದು ಮದುವೆ ಮಂಟಪವಾಗಿದೆ. ಹಾಗೆ ಪ್ರತಿಯೊಂದು ಮಂಟಪದಲ್ಲೂ ಶ್ರೀಮಂತಿಕೆ ಉಡಿಗೆ ತೊಟ್ಟ ವಧು ಅಥವ ವರ ಇರುತ್ತಾರೆ" ಎಂದು ವನದೇವತೆ ಮತ್ತೆ ಹೇಳಿದಳು.

"ಎಷ್ಟು ರಮಣೀಯವಾಗಿದೆ! ಪ್ರತಿಯೊಂದು ಹೂವೂ ಒಂದು ಮದುವೆ ಮಂಟಪ, ಅದರೊಳಗೆ ಒಬ್ಬ ವಧು ಅಥವ ವರ. ಅವರಿಬ್ಬರೂ ಬೇರೆ ಬೇರೆ ಹೂವುಗಳಲ್ಲಿ ಕುಳಿತರೆ ಮದುವೆಯ ಸಂಯೋಗವೆಲ್ಲಿ ನಡೆಯುತ್ತದೆ?" ಎಂದು ಮರಕಡಿಯುವವನು ತಿಳಿಯುವ ಕುತೂಹಲದಿಂದ ಕೇಳಿದನು.

"ಆ ವಿಷಯ ನಿನಗೆ ಹೇಳುವವಳಿದ್ದೇನೆ. ಅದಕ್ಕಿಂತ ಮೊದಲು ನಾವು ಮದುವೆಮಂಟಪವನ್ನು ಸರಿಯಾಗಿ ನೋಡೋಣ" ಎನ್ನುತ್ತಾ ವನದೇವತೆ ದೊಡ್ಡ ಹೂವೊಂದನ್ನು ತೆಗೆದುಕೊಂಡು ಮರ ಕಡಿಯುವವನಿಗೆ ಅದರ ಬಗ್ಗೆ ಹೇಳತೊಡಗಿದಳು.

"ಇಡೀ ಮದುವೆಮಂಟಪ ಒಂದು ಕಂಬದ ಮೇಲೆ ನಿಂತಿದೆ. ಅದನ್ನು ಪೆಡಿಸೆಲ್ ಎನ್ನುವರು. ಹಸಿರು ದಳದ ಆಕಾರವನ್ನು ನೋಡಿದೆಯಾ? ಅದು ಈ ಕಂಬದ ಮುಂದುವರಿದ ಭಾಗ. ಅದು ಒಬ್ಬ ಚುರುಕಾದ ಕಾವಲುಗಾರನಾಗಿದ್ದು ಸುಂದರ ಮದುವೆಮಂಟಪವನ್ನು ರಕ್ಷಿಸುವ, ಕಾಪಾಡುವ ಕೆಲಸವನ್ನು ಮಾಡುತ್ತದೆ. ಮದುವೆ ಕೋಣೆ ದಿನ ದಿನವೂ ವೈಭವಯುತವಾಗಿ ಬೆಳೆಯುತ್ತದೆ. ಹಾಗೆ, ವಧು ಅಥವ ವರ ಒಳಗಡೆ ಇದ್ದು ರಕ್ಷಣೆ ಪಡೆಯುತ್ತಾರೆ. ಈ ಕಾವಲುಗಾರ ದಳಗಳನ್ನು 'ಸೆಪಲ್' ಎನ್ನುವರು. ಹೀಗೆ ಕಾವಲುಗಾರರಿಂದ ಚೆನ್ನಾಗಿ ರಕ್ಷಿತವಾದ ಮದುವೆ ಕೋಣೆ ಆಗುವ ಹೂವು ವೇಗವಾಗಿ ಅರಳುತ್ತದೆ. ಹೂವು ಈಗ ಪೂರ್ಣ ಅರಳಿಕೊಂಡು ನೋಡಲು ಎಷ್ಟು ಸುಂದರವಾಗಿ ಕಾಣುತ್ತದೆ ಎಂದರೆ, ಪ್ರಪಂಚವನ್ನು ತನ್ನೆಡೆಗೆ ಕರೆದು ತನ್ನೊಳಗಿರುವ ವಧು ಅಥವ ವರನನ್ನು ನೋಡಲು ಹೇಳುತ್ತಿದೆಯೇನೊ ಅನ್ನುವ ಹಾಗೆ ಕಾಣುತ್ತದೆ. ಈಗ ಹೂವಿನ ನಡುವೆ ಕುಳಿತ ಸುಂದರವಾದ ಹೂವಿನ ಕಡೆ ನೋಡು" ಎಂದು ವನದೇವತೆ ಹೇಳಿದಳು.

"ವಧು ಎಲ್ಲಿ?" ಎಂದು ವನದೇವತೆ ಹಿಡಿದುಕೊಂಡಿದ್ದ ಹೂವಿನೊಳಗೆ ಇಣುಕಿದನು. "ಸರಿಯಾಗಿ ಮಧ್ಯಭಾಗದಲ್ಲಿ ವಧು ಕುಳಿತಿದ್ದಾಳೆ. ಆಕೆಯನ್ನು ಪಿಸ್ಟಿಲ್ ಎಂದು ಕರೆಯುತ್ತಾರೆ. ಅವಳನ್ನು ಸುತ್ತುವರಿದಿರುವ ಸುಂದರ ವರಗಳನ್ನು ನೋಡು. ಅವರು ಆಕರ್ಷಕ ಟೋಪಿಗಳನ್ನು ಧರಿಸಿರುವುದನ್ನು ಕಾಣಬಹುದು" ಎಂದು

ಆವಿಯಾಗುವ ಕ್ರಿಯೆ ನಡೆಯುವುದು" ಎಂದು ವನದೇವತೆ ಹೇಳಿದಳು.

"ಆಹಾ! ಅಂಚುಗಳು ಹಾಗಾದರೆ ಬಾಗಿಲು ಕಾಯುವವರಂತೆ ಇರುತ್ತವೆ - ರಂಧ್ರಗಳನ್ನು ತೆರೆದಿಡಲು ಇಲ್ಲವೆ ನೀರು ಆವಿಯಾಗುವಂತೆ ಮಾಡಲು ಅಥವಾ ನೀರು ಕಡಿಮೆ ಆದಾಗ ರಂಧ್ರಗಳನ್ನು ಮುಚ್ಚಲು; ಮತ್ತು ನೀರಿನ ಆವಿಯಿಂದ ಉಂಟಾಗುವ ನಷ್ಟವನ್ನು ಹೀಗೆ ತಡೆಗಟ್ಟುತ್ತವೆ" ಎಂದು ಮರಕಡಿಯುವವನು ಹೇಳಿದ.

"ಸರಿಯಾಗಿ ಹೇಳಿದೆ. ಸಸ್ಯವು ಬೀಜದಿಂದ ತನ್ನ ಬದುಕು ಪ್ರಾರಂಭಿಸುತ್ತದೆ. ಮೊಳಕೆಯೊಡೆದು, ಬೇರು ಬಿಟ್ಟು, ಗಿಡವಾಗಿ ಬೆಳೆದು ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳುವ ಶಕ್ತಿ ಪಡೆದಿದೆ ಎಂದು ಅದರ ಎಲ್ಲ ಕತೆ ಕೇಳಿದೆ. ಈಗ ಕತೆಯ ಉಳಿದ ಭಾಗವನ್ನು ಆಲಿಸು. ಗಿಡವು ವಯಸ್ಸಿಗೆ ಬಂದ ಮೇಲೆ ಮದುವೆ ಆಗುತ್ತದೆ ಮತ್ತು ದ್ವಿಗುಣಗೊಳ್ಳುತ್ತಾ ಹೋಗುತ್ತದೆ" ಎಂದು ಹೇಳಿ ವನದೇವತೆ ಸ್ವಲ್ಪ ಹೊತ್ತು ಅವನಲ್ಲಿ ಕುತೂಹಲ ಕೆರಳಿಸಲು ಸುಮ್ಮನಾದಳು.

"ಮದುವೆ? ಸಸ್ಯಗಳ ಮದುವೆ? ದಯವಿಟ್ಟು ಆ ವಿಷಯವನ್ನೆಲ್ಲಾ ಹೇಳು" ಎಂದು ಮರ ಕಡಿಯುವವನು ಅತ್ಯಂತ ಆವೇಶದಿಂದ ಕೂಗಿದ.

# ೧೬

"ಮದುವೆ ಅಂದರೆ ತುಂಬಾ ತಮಾಷೆ ಮತ್ತು ಆನಂದವಿರುತ್ತದೆ. ಹೌದೋ ಅಲ್ಲವೋ? ಹಾಗೇ ಸಸ್ಯ ಸಾಮ್ರಾಜ್ಯದಲ್ಲೂ ಕೂಡ. ಮದುವೆಯ ಕಾಲ ಹತ್ತಿರ ಬಂದಹಾಗೆ ಸಸ್ಯಗಳು ತುಂಬ ಸಂತೋಷದಿಂದ ಇರುತ್ತವೆ, ಬೇಕಾದಷ್ಟು ಬಣ್ಣದ ಮತ್ತು ಸುವಾಸನೆಯ ಹೂಗಳು ಅರಳುತ್ತವೆ. ಅದೊಂದು ಸುಂದರ ದೃಶ್ಯ. ಹೂಗಳು ಮಧುವಿನಿಂದ ಮತ್ತು ಪರಾಗದಿಂದ ತುಂಬಿಕೊಳ್ಳುತ್ತವೆ. ಕಲ್ಪಿಸಿಕೋ. ಹೀಗೆ ಸಾವಿರಾರು ಮದುವೆಗಳು ಸಸ್ಯಗಳಲ್ಲಿ ನಡೆಯುತ್ತವೆ. ಏನು ಉಲ್ಲಾಸ ಮತ್ತು ಸಂಭ್ರಮ!" ಎಂದು ವನದೇವತೆ ಖುಷಿಯಿಂದ ಹೇಳಿದಳು.

"ನಂಬಲಸಾಧ್ಯ! ಸಸ್ಯಗಳಲ್ಲೂ ಅನೇಕ ಮದುವೆಗಳು! ಎಂದು ಕೇಳಿ ಮರಕಡಿಯುವವನು ಚಕಿತನಾದ."

"ಪ್ರತಿಯೊಂದು ಹೂವೂ ಒಂದು ಮದುವೆ ಮಂಟಪವಾಗಿದೆ. ಹಾಗೆ ಪ್ರತಿಯೊಂದು ಮಂಟಪದಲ್ಲೂ ಶ್ರೀಮಂತಿಕೆ ಉಡಿಗೆ ತೊಟ್ಟ ವಧು ಅಥವ ವರ ಇರುತ್ತಾರೆ" ಎಂದು ವನದೇವತೆ ಮತ್ತೆ ಹೇಳಿದಳು.

"ಎಷ್ಟು ರಮಣೀಯವಾಗಿದೆ! ಪ್ರತಿಯೊಂದು ಹೂವೂ ಒಂದು ಮದುವೆ ಮಂಟಪ, ಅದರೊಳಗೆ ಒಬ್ಬ ವಧು ಅಥವ ವರ. ಅವರಿಬ್ಬರೂ ಬೇರೆ ಬೇರೆ ಹೂವುಗಳಲ್ಲಿ ಕುಳಿತರೆ ಮದುವೆಯ ಸಂಯೋಗವೆಲ್ಲಿ ನಡೆಯುತ್ತದೆ?" ಎಂದು ಮರಕಡಿಯುವವನು ತಿಳಿಯುವ ಕುತೂಹಲದಿಂದ ಕೇಳಿದನು.

"ಆ ವಿಷಯ ನಿನಗೆ ಹೇಳುವವಳಿದ್ದೇನೆ. ಅದಕ್ಕಿಂತ ಮೊದಲು ನಾವು ಮದುವೆಮಂಟಪವನ್ನು ಸರಿಯಾಗಿ ನೋಡೋಣ" ಎನ್ನುತ್ತಾ ವನದೇವತೆ ದೊಡ್ಡ ಹೂವೊಂದನ್ನು ತೆಗೆದುಕೊಂಡು ಮರ ಕಡಿಯುವವನಿಗೆ ಅದರ ಬಗ್ಗೆ ಹೇಳತೊಡಗಿದಳು.

"ಇಡೀ ಮದುವೆಮಂಟಪ ಒಂದು ಕಂಬದ ಮೇಲೆ ನಿಂತಿದೆ. ಅದನ್ನು ಪೆಡಿಸೆಲ್ ಎನ್ನುವರು. ಹಸಿರು ದಳದ ಆಕಾರವನ್ನು ನೋಡಿದೆಯಾ? ಅದು ಈ ಕಂಬದ ಮುಂದುವರಿದ ಭಾಗ. ಅದು ಒಬ್ಬ ಚುರುಕಾದ ಕಾವಲುಗಾರನಾಗಿದ್ದು ಸುಂದರ ಮದುವೆಮಂಟಪವನ್ನು ರಕ್ಷಿಸುವ, ಕಾಪಾಡುವ ಕೆಲಸವನ್ನು ಮಾಡುತ್ತದೆ. ಮದುವೆ ಕೋಣೆ ದಿನ ದಿನವೂ ವೈಭವಯುತವಾಗಿ ಬೆಳೆಯುತ್ತದೆ. ಹಾಗೆ, ವಧು ಅಥವ ವರ ಒಳಗಡೆ ಇದ್ದು ರಕ್ಷಣೆ ಪಡೆಯುತ್ತಾರೆ. ಈ ಕಾವಲುಗಾರ ದಳಗಳನ್ನು 'ಸೆಪಲ್' ಎನ್ನುವರು. ಹೀಗೆ ಕಾವಲುಗಾರರಿಂದ ಚೆನ್ನಾಗಿ ರಕ್ಷಿತವಾದ ಮದುವೆ ಕೋಣೆ ಆಗುವ ಹೂವು ವೇಗವಾಗಿ ಅರಳುತ್ತದೆ. ಹೂವು ಈಗ ಪೂರ್ಣ ಅರಳಿಕೊಂಡು ನೋಡಲು ಎಷ್ಟು ಸುಂದರವಾಗಿ ಕಾಣುತ್ತದೆ ಎಂದರೆ, ಪ್ರಪಂಚವನ್ನು ತನ್ನೆಡೆಗೆ ಕರೆದು ತನ್ನೊಳಗಿರುವ ವಧು ಅಥವ ವರನನ್ನು ನೋಡಲು ಹೇಳುತ್ತಿದೆಯೇನೊ ಅನ್ನುವ ಹಾಗೆ ಕಾಣುತ್ತದೆ. ಈಗ ಹೂವಿನ ನಡುವೆ ಕುಳಿತ ಸುಂದರವಾದ ಹೂವಿನ ಕಡೆ ನೋಡು" ಎಂದು ವನದೇವತೆ ಹೇಳಿದಳು.

"ವಧು ಎಲ್ಲಿ?" ಎಂದು ವನದೇವತೆ ಹಿಡಿದುಕೊಂಡಿದ್ದ ಹೂವಿನೊಳಗೆ ಇಣುಕಿದನು. "ಸರಿಯಾಗಿ ಮಧ್ಯಭಾಗದಲ್ಲಿ ವಧು ಕುಳಿತಿದ್ದಾಳೆ. ಆಕೆಯನ್ನು ಪಿಸ್ಟಿಲ್ ಎಂದು ಕರೆಯುತ್ತಾರೆ. ಅವಳನ್ನು ಸುತ್ತುವರಿದಿರುವ ಸುಂದರ ವರಗಳನ್ನು ನೋಡು. ಅವರು ಆಕರ್ಷಕ ಟೋಪಿಗಳನ್ನು ಧರಿಸಿರುವುದನ್ನು ಕಾಣಬಹುದು" ಎಂದು

ವನದೇವತೆ ಬೆರಳು ಮಾಡಿ ತೋರಿಸಿದಳು.

"ಆಹಾ! ಟೋಪಿ ತೊಟ್ಟ ಹಲವು ಮದುವೆಗಂಡುಗಳಿಂದ ಸುತ್ತುವರಿದಿರುವ ಏಕಾಂಗಿ ವಧು!" ಎಂದು ಮರ ಕಡಿಯುವವನು ಆಶ್ಚರ್ಯದಿಂದ ಹೇಳಿದ.

"ಆ ಅಭರಣ ರೀತಿಯಲ್ಲಿರುವ ಟೋಪಿಯನ್ನು ಅನ್‌ತೆರ್ ಎನ್ನುವರು" ಎಂದು ವನದೇವತೆ ಹೇಳಿದಾಗ, ಮರಕಡಿಯುವವನು ಆಶ್ಚರ್ಯದಿಂದ ಕೇಳಿದ, "ಆದರೆ ಅನೇಕ ಮರಗಳು ಒಬ್ಬ ವಧುವನ್ನೇ ಏಕೆ ಸುತ್ತುವರಿಯುತ್ತವೆ. ಪಾಂಡವರು ಒಬ್ಬ ರಾಜಕುಮಾರಿಯನ್ನು ಮದುವೆ ಆದ ಹಾಗೆ ಇವರೂ ಒಬ್ಬಳೇ ವಧುವನ್ನು ವರಿಸುವರೋ?"

"ಎಂತಹ ವಿಚಿತ್ರ ಪ್ರಶ್ನೆ! ಹುಡುಗರು ಮತ್ತು ಹುಡುಗಿಯರು ಒಂದೇ ಕುಟುಂಬಕ್ಕೆ ಸೇರಿದವರು ತಮ್ಮೊಳಗೆ ಮದುವೆ ಆಗುವರೋ" ವನದೇವತೆ ಕೇಳಿದಳು.

"ನಿಜವಾಗಲೂ ಇಲ್ಲ. ಅವರು ತಮಗೆ ಬೇಕಾದ ಸಹಭಾಗಿಗಳನ್ನು ಬೇರೆ ಕುಟುಂಬದಿಂದ ಹುಡುಕಿ ಕೊಳ್ಳುತ್ತಾರೆ" ಎಂದು ಮರ ಕಡಿಯುವವನು ಪ್ರಾಮಾಣಿಕವಾಗಿ ಹೇಳಿದಾಗ "ಮದುವೆ ನಿಯಮಗಳು ಸಸ್ಯ ಸಾಮ್ರಾಜ್ಯದಲ್ಲಿ ಬೇರೆಯಲ್ಲ. ಇಲ್ಲಿ ಕೂಡ ವಧು ತನ್ನ ಸಂಗಾತಿಯನ್ನು ಬೇರೆ ಹೂವಿನಿಂದ ಪಡೆಯುತ್ತಾಳೆ. ಹಾಗೆ ವರನೂ ಮಾಡುತ್ತಾನೆ" ಎಂದು ವನದೇವತೆ ವಿವರಿಸಿದಳು.

"ಓಹೋ! ಬಹುಶಃ ಒಂದೆ ಮದುವೆ ಕೋಣೆಯಲ್ಲಿರುವ ವಧು ಮತ್ತು ಅವಳನ್ನು ಸುತ್ತುವರಿದ ವರರು ಒಂದೇ ಕುಟುಂಬಕ್ಕೆ ಸೇರಿದವರಾಗಿರಬೇಕು. ಆದರೆ ನಾನು ನೋಡಿದ ಹಾಗೆ ಅವರೆಲ್ಲಾ ಮದುವೆಗಾಗಿ ಸಿದ್ದವಾಗಿದ್ದಾರೆ. ಅವರ ಸಂಗಾತಿಗಳು ಹೊರಗಿನಿಂದ ಹೇಗೆ ಬರುತ್ತಾರೆ? ಮತ್ತು ಮದುವೆಯನ್ನು ನಡೆಸುವವರು ಯಾರು?" ಎಂದು ಮರಕಡಿಯುವವನು ಕೇಳಿದನು.

"ಪ್ರಕೃತಿ ಅವಳದೇ ಆದ ವ್ಯವಸ್ಥೆಯನ್ನು ಹೊಂದಿದ್ದಾಳೆ. ಮದುವೆ ಸರಿಯಾಗಿ ನಡೆಯುವಂತೆ ನೋಡಿ ಕೊಳ್ಳುತ್ತಾಳೆ" ವನದೇವತೆ ಹೇಳಿದಳು.

"ಎಂತಹ ವ್ಯವಸ್ಥೆ?" ಎಂದು ಮರ ಕಡಿಯುವವನು ಕೇಳಿದ.

"ಅಲ್ಲಿ ಹತ್ತುಸಾವಿರ ಪೂಜಾರಿಗಳು ಈ ಮದುವೆ ಮಾಡಿಸಲು ಇರುತ್ತಾರೆ" ಎಂದು ವನದೇವತೆ ಹೇಳಿದಳು.

"ಪೂಜಾರಿಗಳು? ಯಾವ ರೀತಿಯ ಪೂಜಾರಿಗಳು?" ಇನ್ನೂ ಹೆಚ್ಚು ಗೊಂದಲದಿಂದ ಅವನು ಕೇಳಿದ.

ಆಗ ವನದೇವತೆ ಮುಗುಳ್ನಕ್ಕು ಹೇಳಿದಳು, "ಇಲ್ಲಿನ ಪೂಜಾರಿಗಳು ಕೀಟದ ಸಂತತಿಗೆ ಸೇರಿದವರು. ದುಂಬಿಗಳು, ಇರುವೆಗಳು ಮತ್ತು ಚಿಟ್ಟೆಗಳೇ ಪೂಜಾರಿಗಳು"

"ಇರುವೆಗಳು, ದುಂಬಿಗಳು, ಮತ್ತು ಚಿಟ್ಟೆಗಳು ಮದುವೆ ಮಾಡಿಸಲು ಸಾಧ್ಯವೇ? ದಯವಿಟ್ಟು ನನಗೆ ಸರಿಯಾಗಿ ವಿವರಿಸಿ ಹೇಳು" ಎಂದು ಮರಕಡಿಯುವವನು ಬೇಡಿದ.

"ಮದುವೆಯ ಕೋಣೆ ಎಷ್ಟು ಸುಂದರವಾಗಿರುತ್ತದೆ ಎಂದು ನೋಡಿರುವೆ. ವಧು ಎಷ್ಟು ಆಕರ್ಷಕವಾಗಿರುತ್ತಾಳೆ ಎಂದು ತಿಳಿದಿರುವೆ. ಪೂಜಾರಿಗಳು ಸ್ವಾಭಾವಿಕವಾಗಿಯೇ ಅವುಗಳ ಕಡೆಗೆ ಆಕರ್ಷಿತರಾಗುತ್ತಾರೆ. ಅಷ್ಟೇ ಅಲ್ಲ, ಮದುವೆ ಕೋಣೆಗಳಾದ ಹೂವುಗಳು ತುಂಬ ಮರುಳು ಮಾಡುವ ಸುಗಂಧವನ್ನು ಹೊಂದಿವೆ. ಗಾಳಿ ಈ ಸುಗಂಧವನ್ನು ಎಲ್ಲಾ ಕಡೆಗೆ ಒಯ್ಯುತ್ತದೆ. ಇದು ಒಂದು ರೀತಿ

ಪೂಜಾರಿಗಳಿಗೆ ಅಧಿಕೃತವಾಗಿ ಆಹ್ವಾನಕೊಟ್ಟಂತೆ, ಮದುವೆ ನಡೆಸಲು ಕರೆದ ಹಾಗೆ ಆಗುತ್ತದೆ. ಈ ಮದುವೆ ಹಬ್ಬಕ್ಕೆ ಹೂವುಗಳು ಸಿದ್ಧವಾಗಿರುತ್ತವೆ. ಈ ಪೂಜಾರಿಗಳು ಮದುವೆ ಮಾಡಿದ ನಂತರ ಜೇನು ಮತ್ತು ಪರಾಗವನ್ನು ಊಟ ಮಾಡುತ್ತವೆ" ಎಂದು ವನದೇವತೆ ಹೇಳಿದಳು.

"ಸಸ್ಯ ಸಾಮ್ರಾಜ್ಯದಲ್ಲಿ ಮದುವೆ ಕಾರ್ಯಕ್ರಮಗಳೆಲ್ಲಾ ನಮ್ಮ ಸಿದ್ಧತೆಗಳ ಹಾಗೇ ಇರುತ್ತವೆ" ಎಂದು ಮರಕಡಿಯುವವನು ಇನ್ನೂ ಆಶ್ಚರ್ಯಪಟ್ಟನು.

"ಇನ್ನೊಂದು ರೀತಿ ಹೇಳುವುದಾದರೆ, ಮನುಷ್ಯ ಈ ಭೂಮಿ ಮೇಲೆ ವಾಸ ಮಾಡುವುದಕ್ಕಿಂತ ಮೊದಲು ಸಸ್ಯ ಜೀವನ ಮತ್ತು ಅವುಗಳ ಮದುವೆ ನಡೆಯುತ್ತಿದ್ದವು. ಮನುಷ್ಯನೇ ಸಸ್ಯಗಳ ಮದುವೆ ವ್ಯವಸ್ಥೆಯನ್ನು ಅನುಕರಿಸತೊಡಗಿದನು" ಎಂದು ವನದೇವತೆ ಅವನ ತಿಳುವಳಿಕೆಯನ್ನು ಹೆಚ್ಚಿಸಿದಳು.

"ನೀನು ಹೇಳಿದ್ದು ನಾನು ಒಪ್ಪಿಕೊಳ್ಳುವೆ. ನೀನು ಇದುವರೆಗೂ ಮದುವೆ ಸಿದ್ಧತೆ ಬಗ್ಗೆ ಹೇಳಿದೆ. ಆದರೆ ಮದುವೆ ಆಚರಣೆ ಹೇಗೆ ನಡೆಯುತ್ತದೆ?" ಎಂದು ಮರಕಡಿಯುವವನು ಕೇಳಿದ.

"ನಾನು ಆ ವಿಷಯಕ್ಕೆ ಬರುವೆ. ಮದುವೆ ಕೋಣೆಯ ಸೌಂದರ್ಯ ದುಂಬಿಗಳನ್ನು ಮತ್ತು ಚಿಟ್ಟೆಗಳ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಅವು ಆ ಕೋಣೆಯ ಸುತ್ತಲೂ ಹಾರಾಡುತ್ತಿರುತ್ತವೆ. ಇರುವೆಗಳು ಆ ಸುಗಂಧದಿಂದ ಆಕರ್ಷಿತರಾಗಿ ಮದುವೆ ಕೋಣೆಯ ಕಡೆಗೆ ಅವಸರದಿಂದ ಬರುತ್ತವೆ. ಈ ಎಲ್ಲ ಕೀಟಗಳು ತಮ್ಮ ಮೈ ಮೇಲೆ ನವಿರಾದ ಕೂದಲನ್ನು ಹೊಂದಿರುತ್ತವೆ. ಅವುಗಳು ಮದುವೆ ಕೋಣೆಯನ್ನು ಪ್ರವೇಶಿಸಿದಾಗ ವರನ ಟೋಪಿಯ ಪರಾಗ ಆ ಕೂದಲಿಗೆ ಅಂಟಿಕೊಳ್ಳುತ್ತವೆ. ಈ ಕೀಟಗಳು ಬೇರೆ ಹೂವುಗಳಿಗೆ ಹೋದಾಗ, ಅವು ವಧುವಿನ ತಲೆಯ ಮೇಲೆ ಆ ಪರಾಗವನ್ನು ಉದುರಿಸುತ್ತವೆ. ಅಥವ ಪರಾಗದ ಕಲೆ ಮಾಡುತ್ತವೆ. ಈ ಕೀಟಗಳೇ ಪೂಜಾರಿಗಳು. ಅವು ವಿವಿಧ ವರಗಳ ಟೋಪಿಯಿಂದ ಸಂಗ್ರಹಿಸಿದ ಪರಾಗವು, ಅವುಗಳ ಹಾರಾಟದಿಂದಾಗಿ ವಿವಿಧ ಹೂವುಗಳಿಗೆ ಸಾಗುತ್ತದೆ. ಹೀಗೆ ಬಿದ್ದ ಪರಾಗವು ಹೂವಿನ ಕೆಳಗಿರುವ ಅಂಡಾಣುವನ್ನು ತಲಪುತ್ತದೆ. ಇದರಿಂದ ವಧು ಫಲಭರಿತವಾಗುತ್ತಾಳೆ."

"ಆಹಾ! ಈ ರೀತಿಯಾಗಿ ಸಸ್ಯ ಸಾಮ್ರಾಜ್ಯದಲ್ಲಿ ಮದುವೆ ನಡೆಯುತ್ತದೆ. ಮದುವೆ ನಡೆಸಿಕೊಟ್ಟ ಪೂಜಾರಿಗಳು ಮಧು ಮತ್ತು ಪರಾಗವನ್ನು ಯಥೇಚ್ಛವಾಗಿ ಪಡೆದು ಹಬ್ಬದೂಟ ಮಾಡುವ ಅದೃಷ್ಟ ಪಡೆದಿವೆ ಅಲ್ಲವೆ?" ಎಂದು ಮರಕಡಿಯುವವನು ಆನಂದದಿಂದ ಕೂಗಿದ.

"ಜೇನ್ನೊಣದಂತಹ ಕೀಟಗಳು,* ಚಿಟ್ಟೆಗಳು ಅಥವಾ ಇರುವೆಗಳು ಬರೀ ದೊಡ್ಡ ಹೂವುಗಳ ಮೇಲೆ ಕುಳಿತುಕೊಳ್ಳಬಲ್ಲವು. ಅವು ಆ ಹೂವುಗಳ ಮದುವೆಗೆ ಬೇಕಾದ್ದನ್ನು ಮಾಡುತ್ತವೆ. ಆದರೆ ಅಕ್ಕಿ ಅಥವ ಗೋಧಿಯಂತಹ ಬೇರೆ ವಿಧದ ಸಸ್ಯಗಳಲ್ಲಿ ಹೂವುಗಳು ತುಂಬಾ ಸಣ್ಣವಿರುತ್ತವೆ. ಇಲ್ಲಿ ಮದುವೆಯನ್ನು ನಡೆಸಲು ಗಾಳಿ ಸಹಾಯ ಮಾಡುತ್ತದೆ" ಎಂದು ಈ ಹೊಸ ವಿಚಾರವನ್ನು ವನದೇವತೆ ಹೇಳಿದಳು.

---

* ಜೇನ್ನೊಣಗಳು ಹೂವಿನಿಂದ ಮಕರಂದ ಹೀರಿ ಅದನ್ನು ಹೊಟ್ಟೆತುಂಬಾ ತುಂಬಿಕೊಂಡು ತಮ್ಮ ಗೂಡಿಗೆ ತೆರಳುತ್ತವೆ. ಮಕರಂದ ಅದರೊಳಗಿನ ಸಕ್ಕರೆ ಜೇನುತುಪ್ಪವಾಗುತ್ತದೆ. ಈ ಜೇನು ಗೂಡಿನಲ್ಲಿ ಶೇಖರವಾದಾಗ ಅದರ ಶೇಕಡಾ ಎಂಟರಷ್ಟು ನೀರಿನ ಪ್ರಮಾಣ ಆವಿಯಾಗಿ ಅದು ಗಟ್ಟಿಯಾಗುತ್ತದೆ. ಇದನ್ನು ಪರಾಗ ಕಣಗಳೊಂದಿಗೆ ಬೆರೆಸಿದ ಜೇನ್ನೊಣ ಅದನ್ನು ಹಿಟ್ಟಿನಂತೆ ಮಾಡಿ ತನ್ನ ಮರಿಗಳಿಗೆ ತಿನ್ನಿಸುತ್ತದೆ.

"ಗಾಳಿ ಮದುವೆ ನಡೆಸುವುದು! ಅದು ಹೇಗೆ ಸಾಧ್ಯ?" ಎಂದು ಆಶ್ಚರ್ಯದಿಂದ ಮರ ಕಡಿಯುವವನು ಕೇಳಿದ.

"ಈ ಪುಟ್ಟ ಹೂವುಗಳಲ್ಲಿರುವ ಪರಾಗವು ತುಂಬ ಹಗುರವಾಗಿದ್ದು ಅವನ್ನು ಗಾಳಿ ಎಲ್ಲ ಕಡೆ ಒಯ್ದು ಹೆಣ್ಣು ಹೂವುಗಳ ಮೇಲೆ ಊರುವಂತೆ ಮಾಡಿ ಅವನ್ನು ಫಲವತ್ತುಗೊಳಿಸುತ್ತವೆ" ಎಂದು ವನದೇವತೆ ಹೇಳಿದಾಗ

"ಹೂವುಗಳಿರುವ ಸಸ್ಯಗಳು ದುಂಬಿ, ಕೀಟಗಳು, ಮತ್ತು ಗಾಳಿಯಿಂದ ಮದುವೆ ಮಾಡಿಕೊಳ್ಳುತ್ತವೆ. ಬೀಜಗಳು ಅಥವಾ ಹೂವುಗಳು ಇಲ್ಲದಿರುವ ಸಸ್ಯಗಳು ಹೇಗೆ ಅಭಿವೃದ್ಧಿ ಹೊಂದುತ್ತವೆ?" ಎಂದು ಮರ ಕಡಿಯುವವನು ಕೇಳಿದ.

"ಒಂದು ವಿಚಾರಪೂರ್ಣ ಪ್ರಶ್ನೆ. ಗಡ್ಡೆ, ಬೇರುಗಳು ಅಥವ ನೆಲದೊಳಗಿನ ಕಾಂಡಗಳು, ಸಣ್ಣ ಗಡ್ಡೆಗಳನ್ನು ತಯಾರಿಸುವುದರ ಮೂಲಕ ವೃದ್ಧಿಯಾಗುತ್ತವೆ. ಅವು ಮುಖ್ಯ ಗಡ್ಡೆಯ ಸುತ್ತಲೂ ಬೆಳೆಯುತ್ತದೆ. ಗಂಟುಗಳು ಮೊಳೆಯುವುದನ್ನು ನೀನು ನೋಡಿರಬಹುದು. ಉಳಿದ ಸಸ್ಯಗಳು ಮತ್ತು ಬಳ್ಳಿಗಳು ತಮ್ಮ ರೆಂಬೆಗಳಿಂದಲೆ ಬೇರುಗಳನ್ನು ಬೆಳೆಸಿಕೊಳ್ಳುತ್ತವೆ. ಅವುಗಳನ್ನು ನೆಲದಲ್ಲಿ ನೆಟ್ಟಾಗ ಚಿಗುರುತ್ತವೆ" ಎಂದು ವನದೇವತೆ ಹೇಳಿದಳು.

"ನನಗೆ ಗುಲಾಬಿ ಮತ್ತು ಮಲ್ಲಿಗೆ ಗಿಡಗಳ ಬಗ್ಗೆ ಗೊತ್ತು. ಅವುಗಳು ಹೂವುಗಳನ್ನು ಹೊಂದಿದ್ದರೂ ಬೀಜಗಳಿಲ್ಲ. ಆದರೆ ಒಂದು ಕೊಂಬೆಯನ್ನು ನೆಲದಲ್ಲಿ ನೆಟ್ಟರೆ, ಅದು ಬೇರು ಬಿಡುತ್ತದೆ ಮತ್ತು ಹೊಸ ಗಿಡವಾಗಿ ಬೆಳೆಯುತ್ತದೆ. ಸಸ್ಯಗಳು ನಿಜವಾಗಲು ಅದ್ಭುತ ಸೃಷ್ಟಿಯಾಗಿವೆ. ಮನುಷ್ಯರಲ್ಲಿ ಇದ್ದಂತೆ ವಿವಿಧ ಮದುವೆಗಳು ಮತ್ತು ವಂಶಾಭಿವೃದ್ಧಿ ಕಾರ್ಯವನ್ನು ಹೊಂದಿವೆ" ಎಂದು ಮರ ಕಡಿಯುವವನು ಆಶ್ಚರ್ಯ ವ್ಯಕ್ತಪಡಿಸಿದನು.

"ಹೀಗೆ ಸಾವಿರಾರು ರೀತಿಯ ಸಸ್ಯಗಳು ವಿವಿಧ ರೀತಿಯ ಜೀವನ ವಿಧಾನವನ್ನು ಹೊಂದಿವೆ. ನೀನು ಪ್ರತಿಯೊಂದರ ಬಗ್ಗೆ ಕೇಳಬೇಕೆಂದಿದ್ದರೆ, ಇಡೀ ಜೀವಮಾನ ಸಾಕಾಗುವುದಿಲ್ಲ. ಆದ್ದರಿಂದ ನಾನು ಅವುಗಳನ್ನೆಲ್ಲಾ ಈಗ ವಿವರಿಸುವುದಿಲ್ಲ. ಆದರೆ ನೀನು ಸಂಪೂರ್ಣವಾಗಿ ನೋಡಿರುವುದಕ್ಕಿಂತ ಬೇರೆ ಸಸ್ಯಗಳ ಬಗ್ಗೆ ವಿವರಿಸುತ್ತೇನೆ. ಆಮೇಲೆ ನನ್ನ ಕತೆಗೆ ಮುಕ್ತಾಯ ಹಾಡುವೆ" ಎಂದು ವನದೇವತೆ ಹೇಳಿದಳು.

"ನೀನು ಇಷ್ಟಪಟ್ಟಹಾಗೇ ಆಗಲಿ. ನೀನು ಹೇಳುವುದನ್ನು ಕೇಳಲು ಸಿದ್ಧವಾಗಿದ್ದೇನೆ" ಎಂದು ಮರ ಕಡಿಯುವವನು ಉತ್ತರಿಸಿದನು.

"ಹಸಿರು ಸಸ್ಯಗಳಲ್ಲಿ ವರ್ಣರಂಜಿತ ಹೂಗಳನ್ನು ಬಿಡುವ ಸಸ್ಯಗಳೂ ಕೆಲವಿವೆ. ಸಸ್ಯಗಳು ತಮ್ಮ ಆಹಾರ ತಾವೇ ತಯಾರಿಸಿಕೊಳ್ಳುವುದಲ್ಲದೆ ಅದನ್ನು ಇತರ ಜೀವಿಗಳೊಂದಿಗೂ ಹಂಚಿಕೊಳ್ಳುತ್ತವೆ. ಈ ಎಲ್ಲ ವಿಷಯಗಳ ಬಗೆಗೂ ಅನುಮಾನವೇ ಬೇಡ. ಆದರೆ ಈ ಎಲ್ಲ ಸಂಗತಿಗಳೂ ಸಸ್ಯ ಸಾಮ್ರಾಜ್ಯದ ಒಂದು ಭಾಗದಲ್ಲಿ ಮಾತ್ರ ಸುಳ್ಳಾಗಿ ಬಿಡುತ್ತವೆ" ಎಂದು ವನದೇವತೆ ಹೇಳಿದಳು.

ಮರಕಡಿಯುವವನು ಆಶ್ಚರ್ಯಚಕಿತನಾದ.

"ಓಹೋ! ಹೌದೇ? ಅದು ಹೇಗೆ?" ಎಂದು ಕೇಳಿದ.

ವನದೇವತೆ ಮಾತು ಮುಂದುವರೆಸಿದಳು. "ಇಲ್ಲಿ ನೀನು ಕೊಂಬೆಗಳಿಲ್ಲದ, ಎಲೆಗಳಿಲ್ಲದ, ಬೇರುಗಳೂ ಇಲ್ಲದ ಸಸ್ಯಗಳನ್ನು ನೋಡುವೆ. ಅವು ಊಹಿಸಲಾಗದಷ್ಟು ಸಣ್ಣವು. ಅವನ್ನು ಬ್ಯಾಕ್ಟೀರಿಯಾಗಳೆನ್ನುತ್ತಾರೆ."

"ಕೊಂಬೆಗಳಿಲ್ಲದ, ಎಲೆಗಳಿಲ್ಲದ, ಬೇರುಗಳೂ ಇಲ್ಲದ ಸಸ್ಯಗಳು!" ಮರಕಡಿಯುವವನ ಆಶ್ಚರ್ಯ ಮತ್ತು ಗೊಂದಲಗಳು ಹೆಚ್ಚಿದವು.

"ನಿಜವಾಗಿ, ಬೇರು-ಕಾಂಡಗಳಿಲ್ಲದ ಸಸ್ಯಗಳನ್ನು 'ಏಕಜೀವಿ ಜೀವಾಣು'ಗಳೆನ್ನುತ್ತಾರೆ. ಅವುಗಳಲ್ಲಿ ಎರಡು ವಿಧಗಳಿವೆ. ಒಂದು ಬಗೆಯವು ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳುತ್ತವೆ, ಇನ್ನೊಂದು ಬಗೆಯವು ಆಹಾರವನ್ನು ತಾವೇ ತಯಾರು ಮಾಡಿಕೊಳ್ಳಲಾರವು. ಮೊದಲ ಬಗೆಯವು ಹಸಿರು ಬಣ್ಣದವು, ಪತ್ರಹರಿತ್ತಿನ ಸಹಾಯದಿಂದ ತಮ್ಮ ಆಹಾರ ತಯಾರಿಸಿಕೊಳ್ಳುತ್ತವೆ. ಸರೋವರ, ಕೆರೆ, ಕೊಳಗಳಲ್ಲಿ ಏಕಾಣು ಜೀವಿಗಳ ಗುಂಪು ಕಾಣಸಿಗುತ್ತವೆ. ಪತ್ರಹರಿತ್ತು ಇಲ್ಲದಿರುವುದರಿಂದ ಅವು ಹಸಿರಾಗಿರುವುದಿಲ್ಲ, ಆಹಾರ ತಯಾರಿಸಿ ಕೊಳ್ಳುವುದಿಲ್ಲ. ಅವು ಸಂಪೂರ್ಣವಾಗಿ ಇತರ ಜೀವಿಗಳ ಮೇಲೇ ಅವಲಂಬಿಸಿರುತ್ತವೆ. ಅಂದರೆ, ತಮ್ಮ ಆಹಾರಕ್ಕಾಗಿ ಬೇರೆ ಸಸ್ಯಗಳನ್ನು ಅವಲಂಬಿಸಿರುತ್ತವೆ. ಆದ್ದರಿಂದಲೇ ಅವನ್ನು 'ಪರಾವಲಂಬಿ ಜೀವಿಗಳೆನ್ನುವರು" ಎಂದು ವನದೇವತೆ ಹೇಳಿದಳು.

"ನಂಬಲಾರೆ! ಇಂಥ ಸಸ್ಯಗಳೂ ಸಸ್ಯಕುಟುಂಬಕ್ಕೆ ಸೇರಿವೆ. ಸಸ್ಯಗಳು ಆಹಾರವನ್ನು ತಯಾರಿಸಿ ಉದಾರವಾಗಿ ಪ್ರಪಂಚಕ್ಕೆ ಉಣಬಡಿಸಿದರೆ, ಇವು ಮಾತ್ರ ಪರಾವಲಂಬಿಗಳು. ಇವುಗಳಿಂದ ಉಪಯೋಗ ಮಾತ್ರ ಇಲ್ಲ" ಎಂದು ಮರ ಕಡಿಯುವವನು ವ್ಯಥೆಯಿಂದ ನಿಟ್ಟುಸಿರು ಬಿಟ್ಟ.

"ಈ ಪರಾವಲಂಬಿಗಳು ಕೇವಲ ಶಾಪವಲ್ಲ, ಕೆಲವು ಬಾರಿ ಅವು ಲಾಭಕರವಾಗಿಯೂ ಇರುತ್ತವೆ" ಎಂದು ವನದೇವತೆ ಹೇಳಿದಳು.

"ಲಾಭಕರ? ಯಾವ ರೀತಿಯಲ್ಲಿ?" ಎಂದು ಆಶ್ಚರ್ಯಗೊಂಡ ಮರಕಡಿಯುವವನು ಹೇಳಿದ. ವನದೇವತೆ ವಿವರಿಸಿದಳು:

"ಏಕಾಣು ಜೀವಿಗಳು ಬೇರೆ ಜೀವಿಗಳನ್ನು ಸೇರಿ ಆಹಾರವನ್ನು ಹಂಚಿಕೊಂಡಾಗ ಅವು ವಿನಾಶಕಾರಿ

ಕಾಯಿಲೆಗಳಿಗೆ ಕಾರಣವಾಗುತ್ತವೆ. ಇನ್ನು ಕೆಲವು ಪರಾವಲಂಬಿ ಏಕಾಣುಜೀವಿಗಳು ಸತ್ತ ಜೀವಿಗಳನ್ನು ಆಶ್ರಯಿಸಿ ಬದುಕಿ ಬೆಳೆಯುತ್ತವೆ. ಸತ್ತದೇಹದಿಂದ ಸಾವಯವ ಲವಣಗಳನ್ನು ಹೀರಿಕೊಳ್ಳುತ್ತವೆ. ದೇಹ ಒಣಗಿದಾಗ ತಾವೂ ಸಾಯುತ್ತವೆ. ಸತ್ತ ಜೀವಿಗಳಿಂದ ಸಂಗ್ರಹಿಸಿಕೊಂಡ ಅಮೂಲ್ಯ ಆಹಾರ ಮಣ್ಣಿನಲ್ಲಿ ಬೆರೆಯುತ್ತದೆ. ಮಣ್ಣು ಶ್ರೀಮಂತವಾಗುತ್ತದೆ. ಈ ಮಣ್ಣಿನಲ್ಲಿ ಬೆಳೆದ ಹೊಸ ಸಸ್ಯಗಳು ಉತ್ತಮ ಆಹಾರವನ್ನು ತಯಾರಿಸುತ್ತವೆ.”

“ಅಂದರೆ, ಈ ಪರಾವಲಂಬಿಗಳು ಜೈವಿಕ ಲವಣಗಳು ಎಲ್ಲಿ ಸೇರಬೇಕೋ ಅಲ್ಲಿಗೆ, ಮಣ್ಣಿಗೆ, ಸೇರಿಸುತ್ತವೆ” ಎಂದು ಮರಕಡಿಯುವವನು ಮಾತು ಸೇರಿಸಿದ.

“ಅದು ಸರಿ. ಈ ಏಕಾಣು ಜೀವಿಗಳು ಇಂಥ ಉದ್ದೇಶವನ್ನು ಈಡೇರಿಸದಿದ್ದರೆ ಸತ್ತ ಜೀವಿಗಳಲ್ಲಿರುವ ಲಾಭಕರ ವಸ್ತುಗಳೂ ನಾಶ ಹೊಂದಿಬಿಡುತ್ತವೆ. ಇದರ ಪರಿಣಾಮವನ್ನು ಊಹಿಸಿಕೊ. ಮಣ್ಣಿನ ಸತ್ವ ನಿಧಾನವಾಗಿ ಕಡಮೆಯಾಗುತ್ತ ಹೋಗುತ್ತದೆ ಮತ್ತು ಅಗತ್ಯವಸ್ತುಗಳ ಕೊರತೆಯಿಂದಾಗಿ ಆಹಾರ ತಯಾರಿಸಲು ಸಸ್ಯಗಳಿಗೆ ಸಾಧ್ಯವಾಗದೆ ಹೋಗಬಹುದು” ಎಂದು ವನದೇವತೆ ಹೇಳಿದಳು.

“ಅಂತಹ ಹೊತ್ತಿನಲ್ಲಿ ಈ ಪರಾವಲಂಬಿಗಳು ಪ್ರಪಂಚಕ್ಕೆ ಒಂದು ವರ ಆಗುತ್ತವೆಂದು ನಾನು ತಿಳಿದುಕೊಂಡೆ” ಎಂದು ಮರಕಡಿಯುವವನು ಅಭಿಪ್ರಾಯಪಟ್ಟ.

“ಹೌದು. ಈ ಏಕಾಣುಜೀವಿಗಳು ಹಾಲನ್ನು ಮೊಸರು ಮಾಡುವ ಜವಾಬ್ದಾರಿ ಹೊತ್ತಿವೆ, ಇಡ್ಲಿ ದೋಸೆ, ಹಿಟ್ಟು ಹುದುಗಲು ಬರುವಂತೆ ಮಾಡುತ್ತವೆ, ಬ್ರೆಡ್ಡು ಮೃದುವಾಗಿ, ರುಚಿಯಾಗಿ ಸುಲಭವಾಗಿ



ಜೀರ್ಣವಾಗುವಂತೆ ಕೂಡ ಮಾಡುತ್ತವೆ. ಏಕಾಣುಜೀವಿಗಳು ಬೇರೆ ರೀತಿಯಿಂದಲೂ ಉಪಯುಕ್ತವಾಗಿವೆ" ಎಂದು ವನದೇವತೆ ಹೇಳಿದಳು.

"ಇನ್ನೂ ಯಾವ ರೀತಿಯಲ್ಲಿ ಬ್ಯಾಕ್ಟೀರಿಯಾಗಳು ಉಪಯೋಗಕ್ಕೆ ಬರುತ್ತವೆ?" ಎಂದು ಮರ ಕಡಿಯುವವನು ಕುತೂಹಲದಿಂದ ಕೇಳಿದ.

"ದ್ರಾಕ್ಷಾರಸ ಹುಳಿ ಬಂದು ವೈನ್ ಆಗುವುದು ಈ ಏಕಾಣುಜೀವಿಗಳ ಸಹಾಯದಿಂದಲೇ. ಪಾಚಿ ಅಥವ ಅಣ್ಬುಗಳು ಕೂಡ ಈ ಏಕಾಣುಜೀವಿಗಳ ಗುಂಪಿಗೆ ಸೇರಿವೆ. ಇನ್ನೊಂದು ಬಗೆಯ ಏಕಾಣು ಜೀವಿಗಳಿವೆ. ಅವು, ಏಕಾಣುಜೀವಿಗಳಾಗಿ ಮುಂದುವರೆಯುವುದಿಲ್ಲ. ಏಕೆಂದರೆ ಅವು ಬೆಳೆಯುತ್ತವೆ. ಅಂಥ ಬ್ಯಾಕ್ಟೀರಿಯಾಗಳು ಸತ್ತ ಸಸ್ಯಗಳಿಂದ ಅಭಿವೃದ್ಧಿ ಹೊಂದುತ್ತವೆ. ಅವನ್ನು ನಾಯಿಕೊಡೆ ಎನ್ನುತ್ತಾರೆ" ಎಂದು ವನದೇವತೆ ಹೇಳಿದಳು.

"ಈಗಲೂ ಸಸ್ಯಗಳು ಪ್ರಪಂಚಕ್ಕೆ ಇಷ್ಟೊಂದು ಒಳ್ಳೆಯದನ್ನು ಮಾಡುತ್ತವೆ ಎನ್ನುವುದನ್ನು ನಾನು ಸಂಪೂರ್ಣವಾಗಿ ನಂಬಲಾಗುತ್ತಿಲ್ಲ" ಎಂದು ಮರಕಡಿಯುವವನು ನಿಟ್ಟುಸಿರು ಬಿಡುತ್ತ ಹೇಳಿದ.

ವನದೇವತೆ ಮುಗುಳ್ನಗುತ್ತ ಮುಂದುವರೆಸಿದಳು: "ಇನ್ನೂ ಹೆಚ್ಚಿಗೆ ಹೇಳಬೇಕೆಂದರೆ, ನೀನು ತೊಡುವ ಬಟ್ಟೆ, ವಾಸಿಸುವ ಮನೆ, ಇವುಗಳೆಲ್ಲ ಸಸ್ಯಗಳ ದಾನದ ಒಂದು ಭಾಗವೇ ಆಗಿವೆ. ಅದಕ್ಕಿಂತ ಮಿಗಿಲಾಗಿ ಸಸ್ಯಗಳು ಕೊಡುವ ಆಮ್ಲಜನಕವು ನೀರಿನ ಆವಿಯನ್ನು ಒಳಗೊಂಡಿದ್ದು ವಾತಾವರಣವನ್ನು ತಂಪಾಗಿಡುತ್ತದೆ. ಈ ತಂಪಿನ ಗಾಳಿ ಬೆಚ್ಚನೆ ಮೋಡಗಳನ್ನು ತಲುಪಿದಾಗ ಅವು ತಣ್ಣಗಾಗಿ ಮಳೆ ಸುರಿಯುತ್ತದೆ. ಈಗ ಹೇಳು, ಇಷ್ಟೊಂದು ಒಳ್ಳೆಯದನ್ನು ಮಾಡುವ ಮರಗಳನ್ನು ನೀನು ಕಡಿದೆಯಲ್ಲ, ಎಷ್ಟೊಂದು ನಿರ್ದಯಿ? ಹೌದೋ ಅಲ್ಲವೋ? ಅವನ್ನು ನಿಷ್ಕರುಣೆಯಿಂದ ಉರುಳಿಸುವುದು ನಿನಗೆ ನ್ಯಾಯವೆಂದು ತೋರುವುದೋ? ಯೋಚಿಸಿ ಉತ್ತರಿಸು" ಎಂದು ವನದೇವತೆ ಮೃದುವಾಗಿ ಹೇಳಿದಳು.

ಎಲ್ಲವನ್ನು ಕೂಲಂಕುಶವಾಗಿ ಯೋಚಿಸಿ ಮರಕಡಿಯುವವನು ಪ್ರಾಮಾಣಿಕವಾಗಿ ಹೇಳಿದ. "ನಿಜ ಹೇಳಬೇಕೆಂದರೆ, ಬೇರೆಯವರಿಗೆ ಒಳ್ಳೆಯದನ್ನು ಮಾಡಲೆಂದೇ ಈ ಸಸ್ಯ ಸಾಮ್ರಾಜ್ಯ ಹುಟ್ಟಿಕೊಂಡಂತೆ ಇದೆ. ಅವು ಬದುಕಿನ ಜೊತೆ ಹೋರಾಡಿ ಪ್ರಪಂಚದ ಒಳಿತಿಗಾಗಿ ಸೇವೆ ಮಾಡುತ್ತವೆ. ಇದೆಲ್ಲವೂ ನನಗೆ ತಿಳಿಯದೆ, ನಾನು ಇಷ್ಟು ವರ್ಷ ಮರಗಳನ್ನು ಖುಷಿಯಿಂದ ಕಡಿಯುತ್ತಿದ್ದೆ. ಇನ್ನು ಮುಂದೆ ನಾನು ಈ ಕಲ್ಪವೃಕ್ಷಗಳ ಮೇಲೆ ಕೊಡಲಿ ಎತ್ತುವುದಿಲ್ಲ ಎಂದು ಪ್ರಮಾಣ ಮಾಡುತ್ತೇನೆ" ಎನ್ನುತ್ತಾ ತನ್ನ ಕೊಡಲಿಯನ್ನು ದೂರ ಕಾಡಿನ ಮಧ್ಯ ಎಸೆದು ದೇವತೆಯ ಕಡೆ ಕೈ ಜೋಡಿಸಿಕೊಂಡು ಮರಕಡಿಯುವವನು ಹೇಳಿದ, "ನನ್ನನ್ನು ಕ್ಷಮಿಸು, ದಯವಿಟ್ಟು ನಾನು ಇದುವರೆಗೆ ಮಾಡಿದ್ದನ್ನು ಕ್ಷಮಿಸು" ಎನ್ನುತ್ತಾ ಕಣ್ಣೀರು ಹಾಕಿದನು.

"ವನದೇವತೆ ಕೂಡಲೆ ಉತ್ತರಿಸಿದಳು, ನಾನು ನಿನ್ನನ್ನು ಈ ಕೂಡಲೇ ಕ್ಷಮಿಸುವೆ. ಯಾಕೆಂದರೆ ನಿನಗೆ ಇದುವರೆಗೆ ಮರಗಳ ನಿಜವಾದ ಬೆಲೆ, ಅವುಗಳ ಪ್ರಾಮುಖ್ಯ ತಿಳಿಯದೆ ಕಡಿಯುತ್ತಿದ್ದೆ. ನಿನ್ನ ಅಪರಾಧದ ಬಗ್ಗೆ ನೀನು ಅಜ್ಞಾನಿ ಆಗಿದ್ದೆ. ಆದ್ದರಿಂದ ಅದು ಕ್ಷಮೆಗೆ ಅರ್ಹವಾಗಿದೆ. ಆದರೆ, ಇದುವರೆಗೆ ನಾನು ಹೇಳಿದ್ದು ಕೇಳಿಸಿಕೊಂಡೂ ನಿನ್ನ ತಪ್ಪನ್ನು ಮುಂದುವರಿಸಿದರೆ ಆಗ ನಿನಗೆ ಕ್ಷಮೆಯಾಗಲಿ ಅಥವಾ ಮುಕ್ತಿಯಾಗಲಿ ಇಲ್ಲವೇ ಇಲ್ಲ. ಈಗ ನಿನ್ನ ಹಿಂದಿನ ಪಾಪಗಳನ್ನೆಲ್ಲಾ ಕ್ಷಮಿಸಲಾಗಿದೆ. ಇನ್ನು ಮುಂದೆ ಮರಗಳನ್ನು ಕಡಿಯಲು ಹೋಗಬೇಡ" ಎಂದು ವನದೇವತೆ ಕರುಣೆಯಿಂದ ಹೇಳಿದಳು. ಮರಕಡಿಯುವವನು ಆಕೆ ಹೇಳಿದ್ದನ್ನು ಮೂಕವಿಸ್ಮಿತವಾಗಿ ಕೇಳಿದ. ಅವನ ಮೇಲೆ ಹೂಮಳೆ ಸುರಿಯಿತು. ಸುತ್ತಲಿದ್ದ ಮರಗಿಡಗಳು ಕೂಡ ವನದೇವತೆಯ ಮಾತಿಗೆ ಒಪ್ಪಿ ಅವನನ್ನು ಕ್ಷಮಿಸಿದವು.

ಮರಕಡಿಯುವವನ ಸಂತೋಷಕ್ಕೆ ಕೊನೆ ಇಲ್ಲದಾಯ್ತು. ಅವನು ಆನಂದಭಾಷ್ಪಗಳಿಂದ ಸುತ್ತಲೂ ನೋಡಿ ನಮ್ರತೆಯಿಂದ ಹೇಳಿದ, "ನಾನು ಈ ದಿನದಿಂದ ನನ್ನ ತೋಟದಲ್ಲಿ ಮರಗಳನ್ನು ಬೆಳೆಸುವೆನು ಮತ್ತು ಅವುಗಳು ಏನು ಕೊಡುವವೋ ಅದನ್ನು ಸಂತೋಷದಿಂದ, ತೃಪ್ತಿಯಿಂದ ತಿನ್ನುವೆನು."

"ವನದೇವತೆ ಹೇಳಿದಳು, ನೀನೊಬ್ಬನೇ ಅವುಗಳನ್ನು ಬೆಳೆಸಿದರೆ ಸಾಲದು. ಇಡೀ ಮಾನವ ಜನಾಂಗದ ಬಗ್ಗೆ ಯೋಚಿಸು. ಈಗಲೂ ಪ್ರಪಂಚದ ತುಂಬ ಅನೇಕ ಜನರು ಮರಗಳನ್ನು ಕಡಿಯುತ್ತಿದ್ದಾರೆ. ಒಣಗಿದ ಮರಗಳನ್ನು ಉರುವಲಾಗಿ ಉಪಯೋಗಿಸಬಹುದು. ಅದಕ್ಕೆ ಬದಲಾಗಿ ಅವರು ಒಂದಲ್ಲ ಒಂದು ಕಾರಣದಿಂದ ಕಾಡಿನ ಬಹು ದೊಡ್ಡ ಭಾಗಗಳನ್ನು ಕಡಿದು ಬೋಳು ಮಾಡುತ್ತಿದ್ದಾರೆ. ಈ ಜನ, ಸಸ್ಯ ಸಾಮ್ರಾಜ್ಯದ ಪ್ರಾಮುಖ್ಯತೆ ಮತ್ತು ಉಪಯೋಗವನ್ನು ಅರಿಯಬೇಕಾಗಿದೆ. ಅವರಿಂದ ಕಾಡನ್ನು ಉಳಿಸಬೇಕಾಗಿದೆ."

"ಅರಣ್ಯಗಳ ನಾಶದಿಂದ ಏನು ಅಪಾಯವಿದೆ" ಎಂದು ಮರಕಡಿಯುವವನು ಕೇಳಿದ.

"ನೀನು ಅದನ್ನು ಕೇಳಿ ತಿಳಿಯಲೇಬೇಕು", ಎಂದು ವನದೇವತೆ ಮುಂದುವರಿಸಿದಳು.

"ಧಾರಾಕಾರ ಮಳೆ ಸುರಿದಾಗ ಭೂಮಿಗೆ ಬಿದ್ದ ನೀರು ತೊರೆಗಳಾಗಿ ಇಳಿಜಾರಿನಲ್ಲಿ ಹರಿಯುತ್ತದೆ. ಅದು ತನ್ನ ಜೊತೆ ಮೇಲಿನ ಫಲವತ್ತಾದ ಮಣ್ಣನ್ನು ತರುತ್ತದೆ. ಇದು ಮರಗಿಡಗಳಿಗೆ ಉಪಯುಕ್ತವಾಗುತ್ತದೆ.

ಇದನ್ನು ಮರಗಳು ತಡೆಗಟ್ಟಿ ತಮಗಾಗಿ ಬಳಸಿಕೊಳ್ಳುತ್ತವೆ. ಮರಗಳು ಇಲ್ಲದಿದ್ದರೆ ನೆಲದ ಸವೆತ ಉಂಟಾಗುತ್ತದೆ. ಆಗ ಮಣ್ಣು ನದಿಯಲ್ಲಿ ಒಂದಾಗಿ ಸಮುದ್ರದ ತಳವನ್ನು ಸೇರುತ್ತದೆ. ಆಗ ಅದು ಸಸ್ಯಗಳ ಉಪಯೋಗಕ್ಕೆ ಬರುವುದಿಲ್ಲ."

"ಅಯ್ಯೋ! ಅಂತಹ ಫಲಭರಿತ ಮಣ್ಣು ಹೀಗೆ ನಾಶವಾಗಬಾರದು. ಈ ಸವೆತವನ್ನು ತಡೆಗಟ್ಟಲು ಸಾಧ್ಯವಿಲ್ಲವೆ?" ಎಂದು ಮರಕಡಿಯುವವನು ಗಂಭೀರವಾಗಿ ಕೇಳಿದ.

"ಹೌದು, ನೆಲದ ಮೇಲೆ ಸಸ್ಯ ಸಂಪತ್ತು ಇದ್ದರೆ ಇದನ್ನು ತಡೆಗಟ್ಟಬಹುದು" ಎಂದು ವನದೇವತೆ ಉತ್ತರಿಸಿದಳು.

"ಹೇಗೆ?"

"ಮಣ್ಣಿನಲ್ಲಿ ಹುದುಗಿಕೊಂಡ ಬೇರುಗಳು ಸುತ್ತಲೂ ಹರಡಿಕೊಂಡು ಜಾರುವ ಮಣ್ಣನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತವೆ. ಆಗ ಹರಿಯುವ ನೀರಿಗೆ ಮಣ್ಣನ್ನು ತನ್ನೊಡನೆ ಒಯ್ಯಲು ಕಷ್ಟವಾಗುತ್ತದೆ" ಎಂದಳು.

"ಆಹಾ! ಇನ್ನೊಂದು ಆಶ್ಚರ್ಯಕರ ಸೇವೆ-ಮಣ್ಣಿನ ಸವೆತವನ್ನು ತಡೆಗಟ್ಟುವುದು" ಎಂದು ಮರ ಕಡಿಯುವವನು ಆನಂದದಿಂದ ಕೂಗಿದ.

"ಇನ್ನೂ ಹೆಚ್ಚಾಗಿ" ವನದೇವತೆ ಮುಂದುವರಿಸಿದಳು. "ಒಣಗಿದ ಎಲೆಗಳು, ಕೊಂಬೆಗಳು, ಮರದಿಂದ ಬಿದ್ದು ಮೇಲ್ಪದರದ ಮಣ್ಣನ್ನು ಮುಚ್ಚುವ ರಕ್ಷಣಾಪದರವಾಗುತ್ತವೆ. ಆದ್ದರಿಂದ, ಮತ್ತೊಮ್ಮೆ ತೊರೆಗಳು ಹರಿದು ಮಣ್ಣುಕೊಚ್ಚಿಹೋಗದಂತೆ ತಡೆಯುಂಟಾಗುತ್ತದೆ. ಅಲ್ಲದೆ, ಈ ಪದರು ನೀರು ವೇಗವಾಗಿ ಹರಿಯುವುದನ್ನು ನಿಧಾನಗೊಳಿಸುತ್ತದೆ. ಹಾಗೆ ಮಾಡುವಾಗ ಸ್ವಲ್ಪ ನೀರು ಎಲೆಗಳೊಳಗೆ ಉಳಿದು ಮಣ್ಣಿನೊಳಕ್ಕೆ ಇಳಿಯುತ್ತದೆ. ಆಗ ಮಣ್ಣಿನಲ್ಲಿ ನೀರಿನ ಅಂಶ ಹೆಚ್ಚುತ್ತದೆ."

"ಅದ್ಭುತ! ನಾನು ಇದನ್ನೆಲ್ಲಾ ಸ್ವಲ್ಪವೂ ಕಲ್ಪಿಸಿಕೊಂಡಿರಲಿಲ್ಲ, ಯೋಚಿಸಿರಲಿಲ್ಲ" ಎಂದು ಮರ ಕಡಿಯುವವನು ಕೂಗಿ ಹೇಳಿದ.

"ಇನ್ನೂ ಮನೋಹರವಾದ ಭಾಗ ಮುಂದಿದೆ. ಆದ್ದರಿಂದ ನೀನು ಕಾಡಿನ ಮಳೆಯ ಬಗ್ಗೆ ಕೇಳಿದೆಯಲ್ಲವೆ? ಈ ದಟ್ಟ ಕಾಡುಗಳಲ್ಲಿ ಮರಗಳು ಮೋಡಗಳನ್ನು ತಡೆದು ಮಳೆ ಬರುವ ಹಾಗೆ ಮಾಡುತ್ತವೆ" ಎಂದು ವನದೇವತೆ ಈ ವಿವರವನ್ನು ಸೇರಿಸಿದಳು.

"ಈ ಕೆಲಸವನ್ನು ಪರ್ವತಗಳು ಮಾಡುತ್ತವೆಂದು ಕೇಳಿದ್ದೆ. ಮರಗಳು ಹೇಗೆ ಮಳೆತರಿಸುತ್ತವೆ?" ಮರಕಡಿಯುವವನು ತಿಳಿಯುವ ಆಸೆಯಿಂದ ಕೇಳಿದ.

"ನೀನು ಸ್ವಲ್ಪ ಜ್ಞಾಪಿಸಿಕೋ. ಎಲೆಗಳು ಹೊರಬಿಡುವ ಆಮ್ಲಜನಕ ನೀರಿನ ಆವಿಯನ್ನೊಳಗೊಂಡಿರುತ್ತದೆಂದು ನಾನು ಹೇಳಿದ್ದೆ."

"ಹೌದು ನನಗೆ ನೆನಪಾಯಿತು."

"ಯಾವಾಗ ಈ ತಂಪಾದ ತೇವಯುಕ್ತ ಗಾಳಿ ಮೇಲೇರಿ ಮೋಡಗಳನ್ನು ಸಂಧಿಸುವುದೋ ಆಗ ಮೋಡಗಳು ಸಂಕುಚಿತಗೊಂಡು ಮಳೆಯಾಗಿ ಕೆಳಗೆ ಸುರಿಯುತ್ತದೆ" ಎಂದು ವನದೇವತೆ ವಿವರಿಸಿದಳು.

"ತಂಪಾದ ಗಾಳಿ ಮರಗಳಿಂದ ಹೊರಬಂದು ಬೆಚ್ಚನೆ ಮೋಡಗಳಿಗೆ ತಾಗಿ ಮಳೆಯನ್ನು ತಯಾರಿಸುತ್ತವೆ. ಪ್ರಕೃತಿಯ ಇನ್ನೊಂದು ಅದ್ಭುತ!" ಎಂದು ಮರ ಕಡಿಯುವವನು ಉದ್ಗರಿಸಿದ.

"ಈಗ ಗೊತ್ತಾಯಿತೆ? ಹಚ್ಚಹಸುರಿನ ಮಳೆತರುವ ಕಾಡನ್ನು ನಾಶ ಮಾಡಿದರೆ ಮುಂದೆ ಮಳೆಯೇ ಇಲ್ಲದಂತಾಗುತ್ತದೆ."

"ಮಣ್ಣು ಒಣಗಿ ಬಿರುಕು ಬಿಡುತ್ತದೆ. ಆದರಿಂದ ಕ್ಷಾಮ ಮತ್ತು ಬರಗಾಲ ಉಂಟಾಗುತ್ತದೆ" ಎಂದು ಮರ ಕಡಿಯುವವನು ಮುಕ್ತಾಯ ಮಾಡಿದನು.

"ಸಸ್ಯಗಳು ಪ್ರಕೃತಿಯ ಕೊಡುಗೆಯನ್ನೇ ಬಳಸಿಕೊಂಡು ತಮ್ಮ ಆಹಾರ ತಯಾರಿಸುತ್ತದೆ. ಮತ್ತು ಇತರ ಜೀವಿಗಳಿಗೂ ಆಹಾರ ಒದಗಿಸುತ್ತವೆ. ಅವು ಸತ್ತರೆ ಉಳಿದ ಜೀವಿಗಳೂ ಬೇಗನೆ ಇಲ್ಲವೆ ತಡವಾಗಿ ಸಾಯಬೇಕಾಗುತ್ತದೆ."

"ಓಹೋ! ಅಂದರೆ, ಪ್ರಪಂಚದ ನಾಶ."

"ಅಷ್ಟು ಬೇಗಲ್ಲ. ಬ್ಯಾಕ್ಟೀರಿಯಾ ಈ ಹಂತದಲ್ಲಿ ಸಹಾಯಕ್ಕೆ ಬರುತ್ತದೆ. ನಾನು ನಿನಗೆ ಮೊದಲೇ ಹೇಳಿದ ಹಾಗೆ ಅವು ಬದುಕಿರುವುದೇ ಸತ್ತವಸ್ತುಗಳಿಂದ. ಖನಿಜಗಳು ಮತ್ತು ಕಾರ್ಬನ್ ಡೈ ಆಕ್ಸೈಡ್‌ಗಳನ್ನು ಪುನಃ ವಶಪಡಿಸಿಕೊಂಡು ಹೊಸ ಸಸ್ಯ ಸಂತತಿಗೆ ದಾಟಿಸುತ್ತವೆ. ಇದು ಹೀಗೇ ಮುಂದುವರಿಯುತ್ತಿರುತ್ತದೆ. ಎಲ್ಲಿಯವರೆಗೆ ಅಂದರೆ ಸಸ್ಯಗಳ ಉಪಯೋಗ ಮತ್ತು ಮಹತ್ವಕರ ಸೇವೆಗಳು ಸಿಗುವವರೆಗೆ ನಡೆಯುತ್ತಿರುತ್ತದೆ. ಇದನ್ನು ನೀನೊಬ್ಬನೇ ಅರಿತುಕೊಂಡರೆ ಸಾಲದು. ಇಡೀ ಮಾನವ ಜನಾಂಗ ಈ ಪಾಠವನ್ನು ಕಲಿಯಬೇಕು. ಜನಗಳೂ ಜಾಣತನದಿಂದ ಸಸ್ಯಜೀವನವನ್ನು ಕಾಪಾಡಿ ಬೆಳೆಸಿದರೆ ಅದು ಇಡೀ ಪ್ರಪಂಚಕ್ಕೆ ಮತ್ತು ಜೀವಕೋಟಿಗೆ ಒಳ್ಳೆಯದಾಗುತ್ತದೆ."

"ಆದ್ದರಿಂದ ನಾನು ಈ ಕೆಲಸವನ್ನು ನಿನಗೆ ಬಿಡುವೆ. ಪ್ರೀತಿಯ ಗೆಳೆಯನೆ, ಈ ಮಾತು ಮತ್ತು ವಿಚಾರವನ್ನು ಎಲ್ಲೆಡೆ ಹರಡು. ಈಗ ಇದು ನಿನ್ನ ಕರ್ತವ್ಯ. ಜನರು ಮರಗಳನ್ನು ಕಡಿದು ಕಾಡುಗಳನ್ನು ಮೂರ್ಖರಂತೆ ನಾಶಮಾಡದಂತೆ ಮಾಡು. ಈ ಸೇವೆಯಿಂದ ನೀನು ಮಾಡಿದ ಪಾಪಗಳು ನಾಶವಾಗುತ್ತವೆ. ಹೊರಡು ಈಗಲೇ ನಿನ್ನ ಕರ್ತವ್ಯವನ್ನು ಮಾಡಲು ಮುನ್ನುಗ್ಗು. ಈ ಕ್ಷಣವೇ ಪ್ರಾರಂಭಿಸು. ನಿನಗೆ ಒಳ್ಳೆಯದಾಗಲೆಂದು ಹರಸುವೆ." ಹೀಗೆನ್ನುತ್ತಾ ವನದೇವತೆ ಮರ ಕಡಿಯುವವನನ್ನು ಹರಿಸಿದಳು.

"ನಿನ್ನ ಆಶೀರ್ವಾದ ಮತ್ತು ಹರಕೆಯಿಂದ ನನ್ನ ಕೈಲಾದಷ್ಟು ಮಾಡುವೆ" ಹೀಗೆಂದು ಮರ ಕಡಿಯುವವನು ತಲೆಬಾಗಿ ವನದೇವತೆಗೆ ನಮಸ್ಕರಿಸಿದನು. ಅವನು ತಲೆಯೆತ್ತಿದಾಗ ವನದೇವತೆ ಅದೃಶ್ಯಳಾಗಿದ್ದಳು. ಆ ದಿನದಿಂದ ಮರಕಡಿಯುವವನು ಮರಕಡಿಯುವುದನ್ನು ತಾನು ನಿಲ್ಲಿಸಿದ್ದಲ್ಲದೆ ಬೇರೆಯವರು ಕಡಿಯುವುದನ್ನು ತಡೆಗಟ್ಟಿದನು. ಅದನ್ನು ನಿಲ್ಲಿಸಿ ವ್ಯವಸಾಯಕ್ಕೆ ತೊಡಗಿದನು. ಅವನ ಗುರಿ ಈಗ ಸಸ್ಯಗಳ ಮುಖ್ಯ ಪಾತ್ರಗಳಾದ ಜೀವನವನ್ನು ಕಾಪಾಡಿ ಉಳಿಯುವಂತೆ ಮಾಡುವ ಗುಣಗಳ ಬಗ್ಗೆ ಪ್ರಪಂಚಕ್ಕೆ ಬೋಧಿಸುವುದಾಗಿದೆ.

ಮಹಾಕವಿ ವಳ್ಳಾಳರ್ ಬಹಳ ಹಿಂದೆಯೇ ಹಾಡಿದ್ದ:

"ನಾನೂ ನೋವುಪಡುವೆ
ಯಾವಾಗಲಾದರೂ ಪ್ರೀತಿಯ ಗಿಡ
ಜೋತು ಬೀಳುವುದನ್ನು ನೋಡಿದರೆ"

ಹೀಗೆ ಮರ ಕಡಿಯುವವನು ರೈತನಾಗಿ ಮರಗಿಡಗಳನ್ನು ಬಹಳ ಪ್ರೀತಿ ಮತ್ತು ಎಚ್ಚರಿಕೆಯಿಂದ

ಬೆಳೆಸಿದನು.

ವಳ್ಳಾಳರ್ ಹಾಡು ಮುಂದುವರೆಯುತ್ತದೆ:

"ನಾನು ನಿಜವಾಗಿ ತಾಳಲಾರೆ.
ನೋಡಲೂ ಅಥವ ಕೇಳಲೂ ಆರೆ
ಈ ಶ್ರೇಷ್ಠ ಭೂಮಿಯ ಸೃಷ್ಟಿಗಳು
ನೋವು ಅಥವ ದುಃಖಪಡುವುದನ್ನು ..."

ಈ ಮಾತುಗಳು ರೈತನ ಜೀವನದ ದರ್ಶನಗಳಾದವು. ಅನುಕಂಪ ಮತ್ತು ಪ್ರೀತಿಯ ಮಾರ್ಗದರ್ಶನದಿಂದ ಅವನು ತನ್ನ ಉಳಿದ ಜೀವನವನ್ನು ಸಂತೋಷದಿಂದ ಕಳೆದ.

★ ★ ★

117267.
10.12.04

**ಮರ** ಕಡಿಯುವ ವೃತ್ತಿಯ ರಾಜಾಧರ್ ಎಂದಿನಂತೆ ಕಾಡಿನಲ್ಲಿ ಇನ್ನೇನು ಮರ ಕಡಿಯಲು ಪ್ರಾರಂಭಿಸಬೇಕು ಅನ್ನುವಷ್ಟರಲ್ಲಿ ಒಂದು ಆರ್ತನಾದ ಕೇಳಿ ಬರುತ್ತದೆ. ಕೂಡಲೆ ಆತ ಮರ ಕಡಿಯುವುದನ್ನು ನಿಲ್ಲಿಸಿ, ನಾಲ್ಕೂ ದಿಕ್ಕುಗಳತ್ತ ಆತಂಕದಿಂದ ಗಮನ ಹರಿಸುತ್ತಾನೆ. ಏನೂ ಕಂಡು ಬರದಿರಲು ಮತ್ತೆ ಅವನು ಮರಕ್ಕೆ ತನ್ನ ಕೊಡಲಿಯಿಂದ ಒಂದೇಟು ಹಾಕುತ್ತಾನೆ. ಇನ್ನೊಮ್ಮೆ ಅದೇ ಆತಂಕಿತ ಧ್ವನಿ ಕೇಳಿಬರಲು ಆತ ಗಲಿಬಿಲಿಗೊಳ್ಳುತ್ತಾನೆ. ಒಮ್ಮೆಲೆ ವನದೇವತೆ ಅವನ ಕಣ್ಮುಂದೆ ಪ್ರತ್ಯಕ್ಷಳಾಗುವಳು.

ವನದೇವತೆ ಅವನನ್ನು ಕೊಲೆಗಡುಕನೆಂದು ಕರೆಯುತ್ತಾಳೆ. ರಾಜಾಧರ್ ಗಾಬರಿಯಿಂದ ತಾನು ಮಾಡಿರುವ ಅಪರಾಧವೇನೆಂದು ಆಕೆಯನ್ನು ಪ್ರಶ್ನಿಸುವನು. ವನದೇವತೆ ರಾಜಾಧರ್‌ಗೆ ಆತನ ತಪ್ಪೇನೆಂಬುದನ್ನು ಸೋದಾಹರಣವಾಗಿ ತಿಳಿ ಹೇಳುವಳು, ಅವರಿಬ್ಬರ ನಡುವಿನ ಸಂವಾದ ವನದೇವತೆಯಲ್ಲಿ ಅತ್ಯಂತ ಹೃದಯಂಗಮವಾಗಿ ಮೂಡಿ ಬಂದಿದೆ. ನಮ್ಮ ಕಾಡು ಹಾಗೂ ಪರಿಸರದ ರಕ್ಷಣೆಯ ಪ್ರಾಮುಖ್ಯತೆಯ ಬಗೆಗಿನ ಸುಂದರ ವೈಜ್ಞಾನಿಕ ಕಥಾನಕ ಇದಾಗಿದೆ.

ಈ ಕೃತಿಯನ್ನು ತಮಿಳಿನಲ್ಲಿ (ಕನ್ನಕ-ಕಣ್ಣೆ) ಬರೆದಿರುವ ಶ್ರೀ ಕಲ್ವಿ ಗೋಪಾಲಕೃಷ್ಣನ್ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾದ ತಮಿಳು ಭಾಷೆಯ ಹಿರಿಯ ಲೇಖಕರು. ಮಕ್ಕಳಿಗಾಗಿ ಹಲವು ಉತ್ತಮ ಕೃತಿಗಳನ್ನು ಅವರು ನೀಡಿದ್ದಾರೆ.

ಕನ್ನಡಾನುವಾದವನ್ನು ಸಮರ್ಥವಾಗಿ ಮಾಡಿರುವ ಎ.ಚಂದ್ರಮ್ಮ ಅನುವಾದಕಿಯಾಗಿ ಹೆಸರು ಗಳಿಸಿದ್ದಾರೆ.



VANADEVATE
(Kannada)

Rs.50

ISBN NO: 81-260-0933-0

Library IIAS, Shimla
K 891.481 03 G 646 V
00117267